ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 31 ಶುಕ್ರವಾರ 2025

₹4

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 283 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಕೊಡವ ದೀನಬಂಧು ಟ್ರಸ್ಟ್‌ನಿಂದ ವಿದ್ಯಾರ್ಥಿ ವೇತನ



ಕೊಡವ ದೀನಬಂಧು ಚಾರಿಟೆಬಲ್ ಟ್ರಸ್ಟ್ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು.

ಮೈಸೂರು, ಜ.30– ಮೈಸೂರಿನ ಕೊಡವ ದೀನಬಂಧು ಚಾರಿಟೆಬಲ್ ಟ್ರಸ್ಟ್ ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು.

ಕುವೆಂಪುನಗರದ ಕಾವೇರಿ ವಿದ್ಯಾ ಸಂಸ್ಥೆ ಹಾಗೂ ಪದವಿ ಪೂರ್ವ ಕಾಲೇಜಿನ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ 10ನೇ ತರಗತಿಯಿಂದ ಉನ್ನತ ಶಿಕ್ಷಣದವರೆಗಿನ ಕೊಡವ ಸಮುದಾಯದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿನ ವಿದ್ಯಾರ್ಥಿ ವೇತನವನ್ನು ವಿತರಿಸಿ, ಪ್ರೋತ್ಸಾಹಿಸಲಾಯಿತು.

ಕೊಡವ ದೀನಬಂಧು ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಕಟ್ಟೇರ ಕಾರ್ಯಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಪಟ್ಟಡ ಎ.ಜಯಕುಮಾರ್, ಖಜಾಂಚಿ ವಿಂಗ್ ಕಮಾಂಡರ್(ನಿ) ಚೆಂದ್ರಿಮಾಡ ಜಿ.ಮಾದಪ್ಪ ಚಂಬಂಡ ಸೋಮಣ್ಣ, ಕಳ್ಳಿಚಂಡ ಮುದ್ದುರಾಜ್, ಪಟ್ಟಮಾಡ ಶಾಂತಿ ಗಣಪತಿ, ಹಿರಿಯ ದಾನಿಗಳಾದ ಪಳೆಯಂಡ ಕರುಂಬಯ್ಯ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

ಫೆ.3, ವಿಕಲಚೇತನ ವ್ಯಕ್ತಿಗಳ ಕುಂದುಕೊರತೆ ಸಭೆ

ಮೈಸೂರು,ಜ.30–ಫೆ.3ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ವಿಕಲಚೇತನ ವ್ಯಕ್ತಿಗಳ ಕುಂದು ಕೊರತೆಗಳ ಸಭೆಯನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ. ವಿಕಲಚೇತನರು ಈ ಸಭೆಯಲ್ಲಿ ತಮ್ಮ ಕುಂದುಕೊರತೆಗಳ ಕುರಿತು ಅಹವಾಲುಗಳನ್ನು ಸಲ್ಲಿಸಬಹುದು. ವಿಕಲಚೇತನರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬನ್ನಿಮಂಟಪ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ವೃತ್ತಕ್ಕೆ

ಅಂಬಾರಿ ಆನೆ ಅರ್ಜುನನ ಹೆಸರು ನಾಮಕರಣ ಸೂಕ್ತ

ಪಾಲಿಕೆಗೆ ಈ ಸಂಬಂಧ ಪತ್ರ ಬರೆದಿದ್ದೇನೆ ; ಸಂಸದ ಯದುವೀರ ಒಡೆಯರ್

ಮೈಸೂರು,ಜ.30(ಪಿಎಂ)– ಬನ್ನಿಮಂಟಪದ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ವೃತ್ತಕ್ಕೆ ದಸರಾ ಅಂಬಾರಿ ಆನೆಯಾಗಿದ್ದ ಅರ್ಜುನನ ಸ್ಮರಣಾರ್ಥ 'ಅರ್ಜುನ ವೃತ್ತ' ಎಂದು ನಾಮಕರಣ ಮಾಡುವಂತೆ ಮೈಸೂರು ಮಹಾನಗರ ಪಾಲಿಕೆಗೆ ಪತ್ರ ಬರೆದಿರುವುದಾಗಿ ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಆವರಣದಲ್ಲಿ ಗುರುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ದಸರಾ ಪರಂಪರೆಯೇ ಗಜಪಡೆ ಕೇಂದ್ರೀತ. ಈ ಕಾರಣಕ್ಕೆ ಮೈಸೂರಿನ ಬನ್ನಿಮಂಟಪದ ಎಲ್‌ಐಸಿ ಕಚೇರಿಯ ವೃತ್ತಕ್ಕೆ ಅರ್ಜುನ ಆನೆಯ ಹೆಸರು ನಾಮಕರಣ ಸೂಕ್ತವಾಗಲಿದೆ. ಮೈಸೂರಿಗೆ ಪ್ರವೇಶ ಕಲ್ಪಿಸುವ ಮುಖ್ಯ ಸ್ಥಳವೂ ಇದಾಗಿದೆ. ಹಾಗಾಗಿ ಪತ್ರ ಬರೆದಿದ್ದು, ಪಾಲಿಕೆ ಈ ಸಂಬಂಧ ಕ್ರಮ ಕೈಗೊಳ್ಳಬೇಕಿದೆ ಎಂದು ಹೇಳಿದರು. ಈಗಾಗಲೇ ಸದರಿ ವೃತ್ತದ ನಾಮಕರಣ ಆಗಿದೆಯಲ್ಲವೇ? ಎಂದು 'ಮೈಸೂರು ಮಿತ್ರ' ಪ್ರಶ್ನಿಸಿದಾಗ, ಆ ಬಗ್ಗೆ ಮಾಹಿತಿ ಇಲ್ಲ. ಅಧಿಕೃತವಾಗಿ ನಾಮಕರಣ ಆಗಿಲ್ಲವೆಂದು ನಾನು ಭಾವಿಸುತ್ತೇನೆ ಎಂದು ಪ್ರತಿಕ್ರಿಯಿಸಿದರು.



ಮೈಸೂರಿನ ಬನ್ನಿಮಂಟಪದ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ವೃತ್ತ. ನಾಮಫಲಕ ಇರುವುದನ್ನೂ ಚಿತ್ರದಲ್ಲಿ ಕಾಣಬಹುದು. ಈ ವೃತ್ತಕ್ಕೆ ಎಲ್‌ಐಸಿ ಸರ್ಕಲ್, ಮಿಲೇನಿಯಂ ಸರ್ಕಲ್ ಎಂದೇ ಹೆಚ್ಚಾಗಿ ಕರೆಯಲಾಗುತ್ತದೆ.

ಕಾನೂನು ಹೋರಾಟ: ಬೆಂಗಳೂರು ಅರಮನೆ ಮೈದಾನ ಬಳಸಿಕೊಳ್ಳಲು ರಾಜ್ಯ ಸರ್ಕಾರದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿರುವ ಬಗ್ಗೆ ಪ್ರತಿಕ್ರಿಯಿಸಿ, ಕಾನೂನಾತ್ಮಕ ಹೋರಾಟ ಮಾಡುತ್ತೇವೆ. ಟಿಡಿಆರ್ (ಅಭಿವೃದ್ಧಿ ಹಕ್ಕುಗಳ ವರ್ಗಾವಣೆ) ನೀಡಿ ರಸ್ತೆ ಅಗಲೀಕರಣ ಮಾಡಬೇಕೆಂದು ಸುಪ್ರೀಂಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಇದರಿಂದ ಸರ್ಕಾರಕ್ಕೆ ಹಿನ್ನಡೆಯಾಗಿತ್ತು. ಹೀಗಾಗಿ ಇದರಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆ ಅಸ್ತ್ರ ಬಳಸಲಾಗಿದೆ. ಎಲ್ಲವೂ ಈಗ ಕೋರ್ಟ್‌ನಲ್ಲಿದ್ದು, ಸುಪ್ರೀಂಕೋರ್ಟ್ ತೀರ್ಮಾನದಂತೆ ನಾವು ಮುಂದುವರೆಯುತ್ತೇವೆ ಎಂದು ತಿಳಿಸಿದರು.

ಒಗ್ಗೂಡಿ ಕೆಲಸ ಮಾಡಬೇಕು: ರಾಜ್ಯ ಬಿಜೆಪಿಯಲ್ಲಿ ಬಣಗಳಾಗುತ್ತಿದ್ದು, ಜಿಲ್ಲಾಧ್ಯಕ್ಷರ ಪಟ್ಟಿ ಬಿಡುಗಡೆ ಬಗ್ಗೆಯೂ ಅಸಮಾಧಾನ ವ್ಯಕ್ತವಾಗಿದೆ ಎಂಬುದಕ್ಕೆ ಪ್ರತಿಕ್ರಿಯಿಸಿ, ಪಕ್ಷದ ಹಿತದೃಷ್ಟಿಯಲ್ಲಿ ಎಲ್ಲರೂ ಒಗ್ಗೂಡಿ ಕೆಲಸ ಮಾಡಬೇಕು. ಏನೇ ಸಮಸ್ಯೆಗಳಿದ್ದರೂ ಪಕ್ಷದ ಆಂತರಿಕ ವೇದಿಕೆಯಲ್ಲಿ ಬಗೆಹರಿಸಿಕೊಳ್ಳಬೇಕು. ಅಂತೆಯೇ ರಾಜ್ಯಾಧ್ಯಕ್ಷರು ಸೇರಿದಂತೆ ಎಲ್ಲರೂ ಆಂತರಿಕ ವೇದಿಕೆಯಲ್ಲಿ ಬಗೆಹರಿಸಿಕೊಳ್ಳುವ ಬಗ್ಗೆ ಹೇಳಿದ್ದಾರೆ ಎಂದರು.

ವರಿಷ್ಠರ ತೀರ್ಮಾನ: ರಾಜ್ಯಾಧ್ಯಕ್ಷರನ್ನೇ ಬದಲಿಸುವ ಕೂಗು ಕೇಳಿ ಬರುತ್ತಿದೆ ಎಂಬುದಕ್ಕೆ ಉತ್ತರಿಸಿ, ಕೇಂದ್ರ ವರಿಷ್ಠರು ಎಲ್ಲವನ್ನೂ ಅವಲೋಕಿಸಿ ಸೂಕ್ತ ತೀರ್ಮಾನ ಮಾಡಲಿದ್ದಾರೆ. ಹಾಲಿ ಬಿಜೆಪಿ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಲೋಕಸಭಾ ಚುನಾವಣೆ ಸೇರಿದಂತೆ ಪಕ್ಷದ ಚಟುವಟಿಕೆ ಯಶಸ್ವಿಯಾಗಿ ನಡೆದಿದೆ. ಅವರು ಪಕ್ಷಕ್ಕಾಗಿ ಮಾಡುತ್ತಿರುವ ಕೆಲಸ ಕಾರ್ಯದ ಬಗ್ಗೆ ಎಲ್ಲರ ಶ್ಲಾಘನೆ ವ್ಯಕ್ತವಾಗಿದೆ ಎಂದು ಬಿ.ವೈ.ವಿಜಯೇಂದ್ರ ಪರ ಬ್ಯಾಟ್ ಬಿಸಿದರು.

ಮೈಕ್ರೋ ಫೈನಾನ್ಸ್ ಹಾವಳಿ ಬಗ್ಗೆ ಉತ್ತರಿಸಿ, ಸಾಲ ವಸೂಲಾತಿ ಪ್ರಕ್ರಿಯೆಯಲ್ಲಿ ಅತಿರೇಕವಾಗಿ ವರ್ತಿಸಬಾರದು. ಅತಿರೇಕದ ವಸೂಲಾತಿ ವಿರುದ್ಧ ರಾಜ್ಯ ಸರ್ಕಾರ ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು ಎಂದರು. ಮಹಾ ಕುಂಭಮೇಳದ ಕಾಲ್ತುಳಿತ ದುರಂತ ಕುರಿತು ಪ್ರತಿಕ್ರಿಯಿಸಿ, ಕುಂಭಮೇಳದಲ್ಲಿ ಭಾಗವಹಿಸುವವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಉತ್ತರಪ್ರದೇಶ ಸರ್ಕಾರ ಕಲ್ಪಿಸಿದೆ. ಆದಾಗ್ಯೂ ಈ ದುರಂತ ಆಗಿರುವುದು ನೋವಿನ ಸಂಗತಿ ಎಂದರು.

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡದ ಚಾವಣಿ ಕುಸಿತದಿಂದ ಕಾರ್ಮಿಕನೊಬ್ಬ ಸಾವನ್ನಪ್ಪಿದ ಬಗ್ಗೆ ಪ್ರತಿಕ್ರಿಯಿಸಿ, ಇಂತಹ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಬೇಕಾದರೆ ಅವುಗಳ ನಿರ್ವಹಣೆ ಸೂಕ್ತ ರೀತಿಯಲ್ಲಿ ಇರಬೇಕು. ಕಳೆದ 3 ವರ್ಷಗಳ ಹಿಂದೆ ಅದರ ಒಂದು ಭಾಗದ ಚಾವಣಿ ಕುಸಿದಾಗಲೇ ಸೂಕ್ತ ನಿರ್ವಹಣೆಗೆ ಹೆಚ್ಚು ನಿಗಾ ವಹಿಸಬೇಕಿತ್ತು. ಈಗ ಇದು ಮತ್ತೊಮ್ಮೆ ಕುಸಿದಿದೆ ಎಂದು ಎಲ್ಲಾ ಪಾರಂಪರಿಕ ಕಟ್ಟಡಗಳ ನೆಲಸಮಗೊಳಿಸುವ ನಿರ್ಣಯ ಕೈಗೊಂಡರೆ ಅದು ಖಂಡನಾರ್ಹ. ಪಾರಂಪರಿಕ ಕಟ್ಟಡದಲ್ಲಿ ಗಿಡ–ಗಂಟಿ ಬೆಳೆಯದಂತೆ ನೋಡಿಕೊಳ್ಳಬೇಕು. ಪಾರಂಪರಿಕ ಕಟ್ಟಡಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡದ ಕಾರಣ ಇಂತಹ ಪರಿಸ್ಥಿತಿ ಉದ್ಭವಿಸಿದೆ ಎಂದು ವಿಷಾದಿಸಿದರು.

ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ವಿಚಾರದಲ್ಲಿ ಶೀಘ್ರವೇ ನವೀಕರಣಕ್ಕೆ ಕ್ರಮ ವಹಿಸಿದರೆ ಅವುಗಳನ್ನು ಉಳಿಸಿಕೊಳ್ಳಬಹುದು. ವಿಳಂಬ ಮಾಡುತ್ತಿದ್ದರೆ ಈ ಕಟ್ಟಡಗಳ ವಿಚಾರದಲ್ಲಿಯೂ ಸಮಸ್ಯೆ ಉದ್ಭವಿಸಬಹುದು. ಸದ್ಯ ಈ ಪಾರಂಪರಿಕ ಕಟ್ಟಡಗಳು ಸದೃಢವಾಗಿಯೇ ನಿಂತಿವೆ. ಈ ಸಂಬಂಧ ಸುಪ್ರಿಂಕೋರ್ಟ್‌ನಲ್ಲಿ ಏನು ಆದೇಶ ಬರಲಿದೆ ಎಂದು ಕಾದು ನೋಡಬೇಕು ಎಂದರು.

ಕೇಂದ್ರ ಬಜೆಟ್ ಸಂಬಂಧ ಮೈಸೂರು ಸೇರಿದಂತೆ ರಾಜ್ಯದ ನಿರೀಕ್ಷೆಗಳೇನು ಎಂಬುದಕ್ಕೆ ಉತ್ತರಿಸಿ, ಸಮಸ್ತ ಭಾರತೀಯರಿಗೆ ಅನುಕೂಲವಾಗುವ ಯೋಜನೆಗಳು ಬರುವ ವಿಶ್ವಾಸವಿದೆ. ಮೈಸೂರಿನ ಸಂಬಂಧ ಸಾಕಷ್ಟು ಕೇಳಿದ್ದೇವೆ. ಆದರೆ ಬಾಕಿ ಉಳಿದಿರುವ ಯೋಜನೆಗಳು ಪೂರ್ಣಗೊಳ್ಳುವ ಅಗತ್ಯವಿದೆ. ಮೈಸೂರಿನ ರೈಲ್ವೆ ನಿಲ್ದಾಣದ 2 ಮತ್ತು 3ನೇ ಪ್ರವೇಶ ದ್ವಾರ ಅಭಿವೃದ್ಧಿಯಾಗಬೇಕಿದೆ. ಮೈಸೂರು–ಕುಶಾಲನಗರ ಹೆದ್ದಾರಿಯಾಗಬೇಕಿದೆ ಎಂದು ತಿಳಿಸಿದರು.

ಹೊಸದಾಗಿ ಟೆಂಡರ್ ಪ್ರಕ್ರಿಯೆಯಲ್ಲಿರುವ ಮಣಿಪಾಲ್ ಆಸ್ಪತ್ರೆ ವೃತ್ತ ಅಥವಾ ಕೆಂಪೇಗೌಡ ವೃತ್ತದ ಫ್ಲೈಓವರ್ ಕೆಲಸ ಬಾಕಿಯಿದೆ. ಜೊತೆಗೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿಯೂ ಅನೇಕ ಕೆಲಸಗಳು ಬಾಕಿ ಇವೆ. ಕೊಡಗು ಜಿಲ್ಲೆಯಲ್ಲಿ 12 ಸಂಪರ್ಕ ರಸ್ತೆ ಕಾಮಗಾರಿಗೂ ಚಾಲನೆ ನೀಡಲಾಗಿದೆ. ಇಂತಹ ಅನೇಕ ಕೆಲಸ ಪೂರ್ಣಗೊಳ್ಳಬೇಕು. ಜೊತೆಗೆ ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ನವೀಕರಿಸಿ ಯೋಗ ಸಂಗ್ರಹಾಲಯವಾಗಿ ರೂಪಿಸುವ ಸಂಬಂಧವೂ ಪತ್ರ ಬರೆಯಲಾಗಿದೆ ಎಂದು ಹೇಳಿದರು.

ಹೊಸ ವಿವಾದಕ್ಕೆ ನಾಂದಿಯೇ?

ಬನ್ನಿಮಂಟಪದ ಎಲ್‌ಐಸಿ ವಿಭಾಗೀಯ ಕಚೇರಿ ಎದುರಿನ ವೃತ್ತಕ್ಕೆ ಈಗಾಗಲೇ ನಗರ ಪಾಲಿಕೆಯು 'ಮಾಜಿ ಸಚಿವ ಟಿ.ಎನ್.ನರಸಿಂಹಮೂರ್ತಿ ವೃತ್ತ' ಎಂದು ನಾಮಕರಣ ಮಾಡಿರುವುದಕ್ಕೆ ವೃತ್ತದಲ್ಲಿ ಅಳವಡಿಸಿರುವ ನಾಮಫಲಕಗಳೇ ಸಾಕ್ಷಿಯಾಗಿವೆ. ಈ ನಡುವೆ ಸಂಸದರು 'ಅರ್ಜುನ ವೃತ್ತ' ಎಂದು ನಾಮಕರಣ ಮಾಡಬೇಕೆಂದು ಪಾಲಿಕೆಗೆ ಪತ್ರ ಬರೆದಿದ್ದು, ಹೀಗಾಗಿ ಕೆಆರ್‌ಎಸ್ ರಸ್ತೆ ಸಂಬಂಧ ಉದ್ಭವಿಸಿರುವ ಹೆಸರಿನ ವಿವಾದಕ್ಕೆ ತೆರೆ ಬೀಳುವ ಮುನ್ನವೇ ಮತ್ತೊಂದು ವಿವಾದ ಸೃಷ್ಟಿಯಾಗಲಿದೆಯೇ ಎಂಬ ಪ್ರಶ್ನೆ ಕಾಡತೊಡಗಿದೆ.

ಹಿಂದುತ್ವದ ಮೊದಲ ಬಲಿಪಶು ಮಹಾತ್ಮ ಗಾಂಧಿ

ಹಿರಿಯ ಪತ್ರಕರ್ತ ರವಿಜೋಶಿ ವಿಷಾದ

ಮೈಸೂರು, ಜ.30(ಎಂಕೆ)– ಹಿಂದುತ್ವದ ಮೊಟ್ಟ ಮೊದಲ ಬಲಿಪಶು ಮಹಾತ್ಮಗಾಂಧಿ ಎಂದು ಹಿರಿಯ ಪತ್ರಕರ್ತ ರವಿ ಜೋಶಿ ಹೇಳಿದರು.

ಮೈಸೂರು ರಂಗಾಯಣದ ಬಿ.ವಿ. ಕಾರಂತ ಚಾವಡಿಯಲ್ಲಿ ಜನಾಂದೋಲನಗಳ ಮಹಾಮೈತ್ರಿ, ಗಾಂಧಿ ವಿಚಾರ ಪರಿಷತ್ತು, ಮೈಸೂರು ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮಹಾತ್ಮ ಗಾಂಧಿ ಹುತಾತ್ಮರಾದ ದಿನದ ಅಂಗವಾಗಿ ಆಯೋಜಿಸಿದ್ದ ಸತ್ಯ, ನ್ಯಾಯ, ಸಹನೆ, ಶಾಂತಿ, ಸಹಬಾಳ್ವೆ ಅನಾವರಣ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ಅವರನ್ನು ಕೊಲ್ಲುವ ಮುನ್ನ ನಾಥೂರಾಮ್ ಗೋಡ್ಸೆ, ಸಾವರ್ಕರ್ ಸಿದ್ಧಾಂತವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದ ಎಂದರು.

ಸಾವರ್ಕರ್ ಅವರನ್ನು ಈಗ ವೀರ ಸಾವರ್ಕರ್ ಎಂದು ಕರೆಯುತ್ತಿದ್ದಾರೆ.



ಸತ್ಯ, ನ್ಯಾಯ, ಸಹನೆ ಶಾಂತಿ, ಸಹಬಾಳ್ವೆ ಅನಾವರಣ ಕಾರ್ಯಕ್ರಮದ ಸಮಾರೋಪದಲ್ಲಿ ಹಿರಿಯ ಪತ್ರಕರ್ತ (ಎಡದಿಂದ ಐದನೇಯವರು) ರವಿಜೋಶಿ ಮಾತನಾಡಿದರು.

ಅವರಲ್ಲಿನ ವೀರತೆ ಎಲ್ಲಿತ್ತೆಂದರೆ ಬೇರೆಯವರ ಮೂಲಕ ಕೊಲೆ ಮಾಡಿಸುವುದಾಗಿತ್ತು. ಇದಕ್ಕೆ ಉದಾಹರಣೆ ಮದನ್‌ಲಾಲ್ ಧಿಂಗ್ರಾ, ಬ್ರಿಟಿಷ್ ಅಧಿಕಾರಿಯನ್ನು ಕೊಲೆ ಮಾಡಿದ್ದಾಗಿದೆ. ದೇಶದಲ್ಲಿ ಹಿಂದೂಗಳು ಮಾತ್ರವಿರಬೇಕು. ಅನ್ಯ ಧರ್ಮಿಯರು ಇದ್ದರೂ ಅವರು ಎರಡನೇ ದರ್ಜೆಯ ಪ್ರಜೆಗಳಾಗಿರಬೇಕು ಎಂಬುದು ಸಾವರ್ಕರ್ ಐಡಿಯಾಲಜಿಯಾಗಿದೆ. ನಂತರ ಸಾವರ್ಕರ್ ಐಡಿಯಾಲಜಿಗೆ ಬಲ ಬಂದಿದ್ದು, ಬಿಜೆಪಿ ಸರ್ಕಾರದ ಅವಧಿಯಲ್ಲಿ. ಪ್ರಸ್ತುತ ಮೋದಿ, ಅಮಿತ್‌ಶಾರಿಂದ ಮತ್ತೆ ಪ್ರಬಲವಾಗಿದೆ ಎಂದು ಹೇಳಿದರು.

ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ ಮಾತನಾಡಿ, ಗಾಂಧಿ ಸದಾ ಸತ್ಯ, ಅಹಿಂಸೆ, ನ್ಯಾಯವನ್ನು ಪ್ರತಿಪಾದಿಸಿದವರು. ತಮ್ಮ ಸತ್ಯಾಗ್ರಹ, ಹೋರಾಟಗಳಲ್ಲಿ ಇದೇ ಅಂಶಗಳನ್ನು ಮುಂದಿಟ್ಟು ಹೋರಾಡಿದ್ದಾರೆ. ಹೀಗಾಗಿಯೇ ಅವರನ್ನು ಭಾರತದ ಸಂವಿಧಾನ, ಆರ್ಥಿಕತೆ, ಸಾಂಸ್ಕೃತಿಕತೆಯಲ್ಲೂ ಕಾಣಬಹುದು ಎಂದರು.

ಸಾಮಾಜಿಕ ಹೋರಾಟಗಾರರಾದ ಸುಹೇಲ್ ಅಹಮದ್, ಕಾಳಚನ್ನೇಗೌಡ, ಬಡಗಲಪುರ ನಾಗೇಂದ್ರ, ಸವಿತಾ ಪ.ಮಲ್ಲೇಶ್, ಕೆ.ವಿ.ಭಟ್, ಹೊಸಕೋಟೆ ಬಸವರಾಜು, ಉಗ್ರನರಸಿಂಹೇಗೌಡ, ಸುಶೀಲಾ ಬಸವಲಿಂಗಯ್ಯ ಉಪಸ್ಥಿತರಿದ್ದರು.

ಚೆಕ್‌ಬೌನ್ಸ್ ಪ್ರಕರಣ; ಸ್ನೇಹಮಯಿ ಕೃಷ್ಣಗೆ ಶಿಕ್ಷೆ



ಮೈಸೂರು, ಜ.30– ಚೆಕ್‌ಬೌನ್ಸ್ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣಗೆ ಮೈಸೂರಿನ ಮೂರನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್ ನ್ಯಾಯಾಲಯ ಶಿಕ್ಷೆ ಪ್ರಕಟಿಸಿ ಗುರುವಾರ ಆದೇಶಿಸಿದೆ.

ಕೃಷ್ಣ ಅವರು 2015ರಲ್ಲಿ ಲಲಿತಾದ್ರಿಪುರದ ಕುಮಾರ್ ಎಂಬುವವರಿಂದ ಸಾಲ ಪಡೆದು, ಅದಕ್ಕೆ ಪ್ರತಿಯಾಗಿ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ಚೆಕ್ ನೀಡಿದ್ದರು. ಅದನ್ನು ಕುಮಾರ್ ಬ್ಯಾಂಕ್ ಖಾತೆಗೆ ಹಾಕಿದಾಗ ಬೌನ್ಸ್ ಆಗಿದ್ದರಿಂದ ಕೃಷ್ಣ ವಿರುದ್ಧ ಪ್ರಕರಣ ದಾಖಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು, ಆರೋಪ ಸಾಬೀತಾಗಿದ್ದರಿಂದ ಶಿಕ್ಷೆ ಪ್ರಕಟಿಸಿದೆ. ಆದರೆ ಶಿಕ್ಷೆಯ ಪ್ರಮಾಣದ ಬಗ್ಗೆ ಮಾಹಿತಿ ಇಲ್ಲ. ಈ ಬಗ್ಗೆ ಪ್ರತಿಕ್ರಿಯಿಸಿರುವ ಸ್ನೇಹಮಯಿ ಕೃಷ್ಣ, ನನಗೆ ತೊಂದರೆಯಿದ್ದಾಗ ಕುಮಾರ್ ಬಳಿ ಹಣ ಕೇಳಿದ್ದೆ. ಆ ವೇಳೆ ಖಾಲಿ ಚೆಕ್‌ಗಳಿಗೆ ಸಹಿ ಹಾಕಿ ಅವರಿಗೆ ನೀಡಿದ್ದೆ. ಆದರೆ ಅವರು ಹಣ ನೀಡಿಲ್ಲ. ಕಾನೂನು ಹೋರಾಟ ಮುಂದುವರೆಸುತ್ತೇನೆ ಎಂದು ಹೇಳಿದ್ದಾರೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಜನವರಿ 31 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 283 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಕ್ರೋ ಫೈನಾನ್ಸ್ ಕಂಪನಿಗಳಿಗೆ ಕಡಿವಾಣ

ಸುಗ್ರೀವಾಜ್ಞೆಗೆ ರಾಜ್ಯ ಸಂಪುಟ ಅನುಮೋದನೆ

● ಇರುವ ಸಣ್ಣಪುಟ್ಟ ನ್ಯೂನತೆ ಸರಿಪಡಿಸಿ ಜಾರಿ ಹೊಣೆ ಮುಖ್ಯಮಂತ್ರಿ ಸಿದ್ದರಾಮಯ್ಯರದ್ದು ● ರಾಜ್ಯದಲ್ಲಿ ಜಲ ಭದ್ರತೆಗೆ 5000 ಕೋಟಿ ಬೃಹತ್ ಯೋಜನೆ

ಬೆಂಗಳೂರು, ಜ.30(ಕೆಎಂಶಿ)–ಮೈಕ್ರೋ ಫೈನಾನ್ಸ್ ಕಂಪನಿಗಳ ಮೇಲೆ ಲಗಾಮು ಹಾಕುವ ಸುಗ್ರೀವಾಜ್ಞೆಗೆ ರಾಜ್ಯ ಸಚಿವ ಸಂಪುಟ ಅನುಮೋದನೆ ನೀಡಿದೆ. ಸುಗ್ರೀವಾಜ್ಞೆಯನ್ನು ಯಾವ ರೀತಿ ಜಾರಿಗೊಳಿಸಬೇಕೆಂಬ ಅಧಿಕಾರವನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರಿಗೆ ನೀಡಲಾಗಿದೆ.

ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಸುಗ್ರೀವಾಜ್ಞೆಯಲ್ಲಿ ಸಾಲಗಾರರ ಹಿತ ಕಾಪಾಡುವ ಅಂಶಗಳನ್ನು ಅಳವಡಿಸಲಾಗಿದೆ.

ಆದರೆ, ಇದರಲ್ಲಿ ಸಣ್ಣ–ಪುಟ್ಟ ಲೋಪ ದೋಷಗಳಿವೆ ಎಂದು ಕಾನೂನು ಮತ್ತು ಆರ್ಥಿಕ ಇಲಾಖೆ ಸಲಹೆ ಹಿನ್ನೆಲೆಯಲ್ಲಿ ಸಂಪುಟ ಸುಗ್ರೀವಾಜ್ಞೆಗೆ ಅನುಮೋದನೆ ನೀಡಿ, ಇರುವ ಸಣ್ಣ–ಪುಟ್ಟ ಲೋಪದೋಷಗಳನ್ನು ಬಗೆಹರಿಸಿ ಜಾರಿಗೆ ತರುವ ಅಧಿಕಾರವನ್ನು ಮುಖ್ಯಮಂತ್ರಿ ಅವರಿಗೆ ನೀಡಿದೆ. ಅವರು, ಹಣಕಾಸು, ಕಾನೂನು, ಕಂದಾಯ, ಗೃಹ ಇಲಾಖೆ ಸಚಿವರು ಮತ್ತು ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಕಾಯ್ದೆಗೆ ಒಂದು ರೂಪ ನೀಡಲಿದ್ದಾರೆ ಎಂದರು.

ಜಲ ಭದ್ರತೆಗೆ 5000 ಕೋಟಿ ಬೃಹತ್ ಯೋಜನೆ: ಸತತ ಬರಗಾಲಕ್ಕೆ ತುತ್ತಾಗುವ ■ 6ನೇ ಪುಟಕ್ಕೆ



ಮೈಕ್ರೊ ಫೈನಾನ್ಸ್ ಕಂಪನಿಗಳ ಮೇಲೆ ಲಗಾಮು ಹಾಕುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಶಿವಕುಮಾರ್, ಸಚಿವ ಜಿ.ಪರಮೇಶ್ವರ್ ಸಭೆ ನಡೆಸಿದರು.

ಆದಷ್ಟು ಬೇಗ ಬಲಿಷ್ಠ ಕಾಯ್ದೆ ಜಾರಿಗೆ ಸಿಎಂ ನೇತೃತ್ವದ ಉನ್ನತ ಸಭೆ ನಿರ್ಧಾರ

ಬೆಂಗಳೂರು, ಜ.30–ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಕಿರುಕುಳ ತಪ್ಪಿಸುವ ಉದ್ದೇಶದಿಂದ ರಚಿಸಲಾಗಿರುವ ಸುಗ್ರೀವಾಜ್ಞೆಯಲ್ಲಿನ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಬಲಿಷ್ಠ ಕಾಯ್ದೆಯನ್ನು ಆದಷ್ಟು ಬೇಗನೆ ಜಾರಿ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಕೃಷ್ಣಾದಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧರಿಸಲಾಯಿತು. ಈ ಕುರಿತು ಕಾನೂನು ಇಲಾಖೆ, ಹಣಕಾಸು ಇಲಾಖೆಯ ಹಿರಿಯ ಅಧಿಕಾರಿಗಳ ತಂಡ ರಚನೆ ಮಾಡಬೇಕು. ಕಾಯ್ದೆ ಸಂಪೂರ್ಣ ಸಂವಿಧಾನಬದ್ಧವಾಗಿದ್ದು, ಯಾವುದೇ ■ 6ನೇ ಪುಟಕ್ಕೆ

ಮುಡಾ ಅಕ್ರಮಕ್ಕೆ ಸ್ಫೋಟಕ ತಿರುವು: ಹೈಕೋರ್ಟ್‌ಗೆ ಇಡಿ ಸಲ್ಲಿಸಿರುವ ವರದಿಯಲ್ಲಿ

ಸಿಎಂ ಸಿದ್ದರಾಮಯ್ಯ, ಅವರ ಪತ್ನಿ ಶ್ರೀಮತಿ ಪಾರ್ವತಿ ಹೆಸರು ಉಲ್ಲೇಖ



ಬೆಂಗಳೂರು, ಜ.30(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ 14 ನಿವೇಶನ ಹಂಚಿಕೆ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆಗೆ ಯತ್ನಿಸಿದ್ದು, ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಶ್ರೀಮತಿ ಬಿ.ಎಂ.ಪಾರ್ವತಿ, ಭಾಮೈದ ಮಲ್ಲಿಕಾರ್ಜುನ ಸ್ವಾಮಿ, ಜಮೀನು ಮಾಲೀಕ ಜೆ.ದೇವರಾಜು ಮತ್ತಿತರರು ಭಾಗಿಯಾಗಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇಡಿ) ಹೈಕೋರ್ಟ್‌ಗೆ ನೀಡಿರುವ ಮಧ್ಯಂತರ ತನಿಖಾ ವರದಿಯಲ್ಲಿ ತಿಳಿಸಿದೆ.

ಮುಡಾದ ಹಿಂದಿನ ಆಯುಕ್ತ ಡಿ.ಬಿ.ನಟೇಶ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್‌ಗೆ ಸಲ್ಲಿಸಿರುವ 104 ಪುಟಗಳ ವರದಿಯಲ್ಲಿ 37 ಸಾಕ್ಷ್ಯಗಳನ್ನು ದಾಖಲಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತಿತರರ ವಿರುದ್ಧ ಮೈಸೂರು ಲೋಕಾಯುಕ್ತ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಆಗಿರುವ ವಿಚಾರ ತಿಳಿದು ಬಂದ ಹಿನ್ನೆಲೆಯಲ್ಲಿ ಇಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಶ್ರೀಮತಿ ಪಾರ್ವತಿ ಅವರಿಗೆ ಮುಡಾದಿಂದ ನೀಡಲಾದ



ಸಿದ್ದರಾಮಯ್ಯ



ಎಂ.ಬಿ.ಪಾರ್ವತಿ

14 ನಿವೇಶನಗಳು ಮಾತ್ರವಲ್ಲದೆ, ಸುಮಾರು 1095 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನಸ್ವಾಮಿ ಮುಡಾಗೆ ಸೇರಿದ ಕೆಸರೆಯ ಸರ್ವೆ ನಂ. 464ರಲ್ಲಿನ 3.16 ಎಕರೆ ಜಮೀನನ್ನೇ ದೇವರಾಜು ಎಂಬುವರಿಂದ ಖರೀದಿಸಿದ್ದಾರೆ. ಅವರು ಖರೀದಿಸುವ ವೇಳೆಗಾಗಲೇ ಮುಡಾ ಸದರಿ ಜಮೀನಿನಲ್ಲಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಿತ್ತು. ಹಾಗಿದ್ದರೂ ಮಲ್ಲಿಕಾರ್ಜುನಸ್ವಾಮಿ, ಕೃಷಿ ಜಮೀನು ಎಂದು ಅದನ್ನು ಖರೀದಿಸಿದ್ದಾರೆ. ಮುಡಾಗೆ ಸೇರಿದ ಜಮೀನನ್ನೇ ಅವರು ಖರೀದಿ ಮಾಡಿದ್ದರೂ ಕೂಡ ಮುಡಾ ಅಧಿಕಾರಿಗಳು ಯಾವುದೇ ರೀತಿಯ ಆಕ್ಷೇಪ ವ್ಯಕ್ತಪಡಿಸದೇ ಮೌನವಾಗಿದ್ದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಂತರ ಮಲ್ಲಿಕಾರ್ಜುನಸ್ವಾಮಿ ಈ ಜಮೀನನ್ನು ಅಕ್ರಮವಾಗಿ ಭೂ ಪರಿವರ್ತನೆ ಮಾಡಿಕೊಂಡಿದ್ದಾರೆ. ಆ ಸಂದರ್ಭದಲ್ಲಿ ತಪ್ಪು ಪರಿಶೀಲನಾ ವರದಿ ಆಧರಿಸಿ ಭೂ ಪರಿವರ್ತನೆ ಆಗಿದ್ದರೂ ಕೂಡ ಮುಡಾ ಅಧಿಕಾರಿಗಳು ತಕರಾರು ಎತ್ತಲಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.

ಸದರಿ ಜಮೀನನ್ನು ಮುಡಾ 3,24,700 ರೂ.ಗೆ ವಶಪಡಿಸಿಕೊಂಡಿತ್ತು. ಹೀಗೆ ವಶಪಡಿಸಿಕೊಂಡಿದ್ದ ಜಮೀನನ್ನು ತಪ್ಪು ಮಾಹಿತಿ ನೀಡಿ ಪ್ರಭಾವ ಬಳಸಿ ಡಿ–ನೋಟಿಫಿಕೇಷನ್ ಮಾಡಲಾಗಿದೆ. ಕೇವಲ 3.24 ಲಕ್ಷ ಮೌಲ್ಯದ ಜಮೀನಿಗೆ ಪರಿಹಾರ ಎಂಬ ಹೆಸರಿನಲ್ಲಿ ಶ್ರೀಮತಿ ಪಾರ್ವತಿ ಅವರಿಗೆ 56 ಕೋಟಿ ರೂ. ಮೌಲ್ಯದ ನಿವೇಶನಗಳನ್ನು ನೀಡಲಾಗಿದೆ. ಈ ಸಂದರ್ಭದಲ್ಲಿ ಆಯುಕ್ತರಾಗಿದ್ದ ಡಿ.ಬಿ.ನಟೇಶ್ ಪ್ರಮುಖ ಪಾತ್ರ ವಹಿಸಿದ್ದಾರೆ. ಆ ವೇಳೆ ಸಿದ್ದರಾಮಯ್ಯ ಅವರು ರಾಜ್ಯದ ವಿಪಕ್ಷ ನಾಯಕರಾಗಿದ್ದು, ಹೆಚ್.ಜಿ.ದಿನೇಶ್ ಕುಮಾರ್ ಅಲಿಯಾಸ್ ಸಿ.ಟಿ. ಕುಮಾರ್ ಅವರಿಗೆ ಆಪ್ತ ಸಹಾಯಕರಾಗಿದ್ದರು. ಈ ಜಮೀನು ವಿಚಾರದಲ್ಲಿ ಸಿ.ಟಿ.ಕುಮಾರ್ ಮುಡಾ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಸಹಿಯನ್ನೇ ನಕಲು ಮಾಡಿ ಬಿ.ಎಂ.ಪಾರ್ವತಿ ಅವರಿಗೆ ನಿವೇಶನಗಳು ಹಂಚಿಕೆಯಾಗುವಂತೆ ನೋಡಿಕೊಂಡಿದ್ದರು ಎಂಬ ವಿಚಾರವೂ ಡಿ.ಬಿ. ನಟೇಶ್ ಅವರನ್ನು ವಿಚಾರಣೆಗೊಳಪಡಿಸಿದಾಗ ತಿಳಿದು ಬಂದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ಪ್ರಕರಣದಲ್ಲಿ ಇಡಿ ತನಿಖೆ ಆರಂಭವಾದ ನಂತರ ಬಿ.ಎಂ.ಪಾರ್ವತಿ ■ 6ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್ ಹಾವಳಿಗೆ ಮತ್ತೊಂದು ಬಲಿ

ಬೆಟ್ಟದಪುರ, ಜ.30– ಮೈಕ್ರೋ ಫೈನಾನ್ಸ್‌ನವರ ಕಿರುಕುಳ ತಾಳಲಾರದೇ ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದಲ್ಲಿ ನಡೆದಿದೆ. ಗ್ರಾಮದ ಬಸವೇಶ್ವರನಗರ ನಿವಾಸಿ ಸುಬ್ರಹ್ಮಣ್ಯ(37) ಆತ್ಮಹತ್ಯೆ ಮಾಡಿಕೊಂಡವರು. ಈತ ಮೈಕ್ರೋ ಫೈನಾನ್ಸ್‌ನವರ ಕಿರುಕುಳದಿಂದ ಬೇಸತ್ತು ಕಳೆದ 4 ದಿನಗಳ ಹಿಂದೆ ವಿಷ ಸೇವಿಸಿದ್ದರು. ತಕ್ಷಣ ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೃತನ ಪತ್ನಿ ಭವ್ಯ, ನನ್ನ ಪತಿ ಮನೆ ಅಡವಿಟ್ಟು ಖಾಸಗಿ ಹಣಕಾಸು ಸಂಸ್ಥೆಯಲ್ಲಿ 9 ಲಕ್ಷ ರೂ. ಸಾಲ ಪಡೆದಿದ್ದರು. ಆದರೆ ಫೈನಾನ್ಸ್‌ನವರು ನಿತ್ಯ ಮನೆ ಬಳಿ ಬಂದು ಹಣ ಕಟ್ಟುವಂತೆ ಕಿರುಕುಳ ನೀಡುತ್ತಿದ್ದರು. ಅಲ್ಲದೇ ಹಲವು ಫೈನಾನ್ಸ್ ಕಂಪನಿಯವರು ಅಕ್ಕಪಕ್ಕದ ಮನೆಗಳಿಗೆ ಬೀಗ ಹಾಕಿದ ಕಾರಣ ನನ್ನ ಮನೆಗೂ ಬೀಗ ಹಾಕಬಹುದು. ಇದರಿಂದ ಪತ್ನಿ, ಮಕ್ಕಳು ಬೀದಿ ಪಾಲಾಗುತ್ತಾರೆ ಎಂಬ ಭಯದಿಂದ ನನ್ನ ಗಂಡ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು. ರೈತ ಮುಖಂಡರಾದ ಶಫಿ ಅಹಮ್ಮದ್, ಕುಮಾರ್ ಮಾತನಾಡಿ, ಮೈಕ್ರೋ ಫೈನಾನ್ಸ್ ಹಾವಳಿಗೆ ಕಡಿವಾಣ ಹಾಕಬೇಕು. ಗ್ರಾಮೀಣ ಭಾಗದ ಜನರಿಗೆ ಸಾಲ ನೀಡಿ ಬಳಿಕ ■ 6ನೇ ಪುಟಕ್ಕೆ



ಸುಬ್ರಹ್ಮಣ್ಯ

ಪಕ್ಷಕ್ಕಾಗಿ ನಾನು ಎಲ್ಲಾ ಟೀಕೆಗಳನ್ನೂ ಸಹಿಸಿಕೊಳ್ಳುತ್ತೇನೆ

ಮೈಸೂರಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯೆ



ಮೈಸೂರು, ಜ.30(ಆರ್‌ಕೆ)– ಪಕ್ಷಕ್ಕಾಗಿ ನಾನು ಎಲ್ಲಾ ಟೀಕೆ–ಟಿಪ್ಪಣಿಗಳನ್ನು ನಾನು ಸಹಿಸಿಕೊಳ್ಳುತ್ತೇನೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದ್ದಾರೆ. ತಮ್ಮ ವಿರುದ್ಧ ಸಂಸದ ಸುಧಾಕರ್ ಹೇಳಿಕೆಗೆ ಮೈಸೂರಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿರುವ ಅವರು, ಏನೇ ಮಾತನಾಡಲಿ, ಎಲ್ಲವನ್ನೂ ಶಾಂತವಾಗಿ ಸ್ವೀಕರಿಸಿದ್ದೇನೆ. ಎಲ್ಲರಿಂದಲೂ ಅನುಭವಗಳನ್ನು ಪಡೆಯುತ್ತಿದ್ದೇನೆ. ನನಗೆ ಪಕ್ಷ ಮಾತ್ರ ಮುಖ್ಯ ಎಂಬುದನ್ನು ತಂದೆ ಯಡಿಯೂರಪ್ಪರಿಂದ ಕಲಿತಿದ್ದೇನೆ ಎಂದರು.

ನಾನು ಅಧ್ಯಕ್ಷನಾಗಿರುವುದು ಯಾರೊಂದಿಗೂ ಯುದ್ಧ ಮಾಡುವುದಕ್ಕಲ್ಲ, ಪಕ್ಷ ಸಂಘಟಿಸಲು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ಸುಧಾಕರ್ ಬಾಯಲ್ಲಿ ಯುದ್ಧದ ಮಾತು ಏಕೆ ಬಂತೋ ಗೊತ್ತಿಲ್ಲ. ಚಿಕ್ಕಬಳ್ಳಾಪುರ ಜಿಲ್ಲಾಧ್ಯಕ್ಷರ ನೇಮಕದಲ್ಲಿ ನಾನು ಯಾವ ಪತ್ರವನ್ನೂ ನೀಡಿಲ್ಲ ಎಂದ ಮೇಲೆ ನನ್ನ ಒತ್ತಡ ಹೇಗಾಗುತ್ತದೆ ಎಂದು ಅವರು ಪ್ರಶ್ನಿಸಿದರು.

ಉಸ್ತುವಾರಿಗಳು ಹೈಕಮಾಂಡ್‌ಗೆ ಹೆಸರು ಕಳುಹಿಸಿದ್ದಾರೆ. ಅದರಂತೆ ಪಕ್ಷದ ಹೈಕಮಾಂಡ್ ತೀರ್ಮಾನಿಸಿದೆ. ಅದರಲ್ಲಿ ನನ್ನ ಪಾತ್ರ ಬರುವುದಿಲ್ಲ ಎಂದ ವಿಜಯೇಂದ್ರ ಸುಧಾಕರ್ ಅವರು ಮಾಹಿತಿ ಕೊರತೆಯಿಂದ ಈ ರೀತಿ ಮಾತನಾಡಿರಬಹುದು. ಅದರಲ್ಲಿ ನಾನು ಟಾರ್ಗೆಟ್ ಆಗಿದ್ದೇನಷ್ಟೇ. ಯಡಿಯೂರಪ್ಪ ಮಗ ಎಂಬ ಕಾರಣ ಟಾರ್ಗೆಟ್ ಆಗಿದ್ದೇನೆ ಎಂಬುದನ್ನು ಹೇಳಬೇಕಾಗಿಲ್ಲ ಎಂದರು. ಬಿಜೆಪಿ ಜಿಲ್ಲಾಧ್ಯಕ್ಷ, ರಾಜ್ಯಾಧ್ಯಕ್ಷ, ರಾಷ್ಟ್ರಾಧ್ಯಕ್ಷರಿಗಾಗಿ ಚುನಾವಣೆಗಳು ನಡೆಯುತ್ತವೆ. ಅದೇ ಪ್ರಕಾರವಾಗಿ ರಾಜ್ಯಾಧ್ಯಕ್ಷರ ಚುನಾವಣೆ ಪ್ರಕ್ರಿಯೆ ನಡೆಯುತ್ತಿದೆ. ನೋಡೋಣ ಏನಾಗುತ್ತೆ ಎಂದ ಅವರು, ಕುಂಭಮೇಳ ಟೀಕಿಸುವ ಕಾಂಗ್ರೆಸ್ಸಿಗರನ್ನು ಏನೆಂದು ಕರೆಯಲಿ. ಹಿಂದೂಗಳ ಭಾವನೆಗೆ ಧಕ್ಕೆ ತರುವಂತಹ ಹೇಳಿಕೆಗಳನ್ನು ನೀಡುತ್ತಿರುವುದು ಸರಿಯಲ್ಲ ಎಂದು ತಿರುಗೇಟು ನೀಡಿದರು.

ಕಾಲ್ತುಳಿತ ಘಟನೆ ನಂತರ ಮಹಾ ಕುಂಭಮೇಳದಲ್ಲಿ ಭಾರಿ ಮುನ್ನೆಚ್ಚರಿಕಾ ಕ್ರಮ

ವಿಐಪಿ ಪಾಸ್ ರದ್ದು; ವಾಹನ ನಿಷೇಧಿತ ವಲಯ





ಪ್ರಯಾಗ್‌ರಾಜ್,ಜ.30–ಮಹಾ ಕುಂಭ ಮೇಳದಲ್ಲಿ ಕಾಲ್ತುಳಿತ ಉಂಟಾಗಿ 30 ಜನರು ಮೃತಪಟ್ಟ ನಂತರ, ಉತ್ತರಪ್ರದೇಶ ಸರ್ಕಾರ ಜನಸಂದಣಿಯನ್ನು ನಿಯಂತ್ರಿಸಲು ಮತ್ತು ಪ್ರಯಾಗ್‌ರಾಜ್‌ಗೆ ಬರುವ ಭಕ್ತರ ಸುರಕ್ಷತೆಗೆ ಕ್ರಮಗಳನ್ನು ಹೆಚ್ಚಿಸಿದೆ.

ಪ್ರಯಾಗ್‌ರಾಜ್‌ನ ಸಂಗಮ ಮತ್ತು ಇತರ ಘಾಟ್‌ಗಳಲ್ಲಿ ಭಕ್ತರು ಮುಂಜಾನೆ ಚಳಿ ಮತ್ತು ದಟ್ಟವಾದ ಮಂಜನ್ನು ಲೆಕ್ಕಿಸದೆ ಸ್ನಾನ ಮಾಡುತ್ತಾರೆ. ಉತ್ತರ ಪ್ರದೇಶ ಸರ್ಕಾರದ ಪ್ರಕಾರ ಇಂದು ಬೆಳಗ್ಗೆ 8 ಗಂಟೆಯವರೆಗೆ 55.11 ಲಕ್ಷಕ್ಕೂ ಹೆಚ್ಚು ಭಕ್ತರು ಪವಿತ್ರ ಸ್ನಾನ ಮಾಡಿದ್ದರು.

ಜನಸಮೂಹ ಸಂಪೂರ್ಣವಾಗಿ ಚದುರಿಹೋಗುವವರೆಗೆ ಈ ಪ್ರದೇಶವು ವಾಹನ ನಿಷೇಧಿತ ವಲಯವಾಗಿ ಉಳಿಯುತ್ತದೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಸಂಚಾರ) ಅಂಶುಮಾನ್ ಮಿಶ್ರಾ ಸುದ್ದಿಗಾರರಿಗೆ ತಿಳಿಸಿದ್ದಾರೆ. ಎಲ್ಲಾ ಭಕ್ತರು ಸುರಕ್ಷಿತವಾಗಿ ತಮ್ಮ ಸ್ಥಳಗಳಿಗೆ ಹೋಗುವವರೆಗೆ ವಾಹನ ಪಾಸ್‌ಗಳಿಗೆ ಅವಕಾಶವಿರುವುದಿಲ್ಲ. ಜನ ಸಮೂಹ ಮೇಳ ಪ್ರದೇಶದಿಂದ ನಿರ್ಗಮಿಸುವವರೆಗೆ ಯಾವುದೇ ಹೊರಗಿನ ವಾಹನಗಳನ್ನು ನಗರಕ್ಕೆ ಪ್ರವೇಶಿಸಲು ಅನುಮತಿ ನೀಡುವುದಿಲ್ಲ. ಆದಾಗ್ಯೂ, ಪರಿಸ್ಥಿತಿಯನ್ನು ಆಧರಿಸಿ ಹಿರಿಯ ಅಧಿಕಾರಿಗಳು ವಾಹನ ■ 6ನೇ ಪುಟಕ್ಕೆ

ಕುಂಭಮೇಳದಿಂದ ವಾಪಸ್ಸಾಗುವಾಗ ಹೃದಯಾಘಾತ: ಕನ್ನಡಿಗ ಸಾವು

ಬೆಳಗಾವಿ, ಜ.30–ಮಹಾ ಕುಂಭ ಮೇಳದಿಂದ ವಾಪಸ್ ಆಗುವಾಗ ಕನ್ನಡಿಗರೋರ್ವರು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ನಡೆದಿದೆ. ರವಿ ಜಟಾರ (61) ಮೃತ ದುರ್ದೈವಿ. ಬೆಳಗಾವಿಯ ದೇಶಪಾಂಡೆ ನಗರ ನಿವಾಸಿಯಾಗಿದ್ದ ರವಿ ಅವರು ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳಕ್ಕೆ ತೆರಳಿದ್ದರು. ಯಾತ್ರೆ ಮುಗಿಸಿ ರೈಲಿನಲ್ಲಿ ಹಿಂದಿರುಗುತ್ತಿದ್ದಾಗ ಪುಣೆ ಬಳಿ ರೈಲಿನಲ್ಲಿಯೇ ಹೃದಯಾಘಾತಕ್ಕೀಡಾಗಿ ಸಾವನ್ನಪ್ಪಿದ್ದಾರೆ. ಮಹಾ ಕುಂಭಮೇಳದಲ್ಲಿ ಭೀಕರ ಕಾಲ್ತುಳಿತ ಸಂಭವಿಸಿ ನಿನ್ನೆಯಷ್ಟೇ ಬೆಳಗಾವಿಯ ನಾಲ್ವರು ಸಾವನ್ನಪ್ಪಿದ್ದರು. ಈ ಘಟನೆ ಬೆನ್ನಲ್ಲೇ ಇದೀಗ ಇನ್ನೋರ್ವ ವ್ಯಕ್ತಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಸುತ್ತೂರಲ್ಲಿ 43ನೇ ರಾಷ್ಟ್ರ ಮಟ್ಟದ ನಾಡಕುಸ್ತಿ ಪಂದ್ಯಾವಳಿ

ದರಸಗುಪ್ಪೆ ಪೈ.ವಿಜಯೇಂದ್ರಗೆ ಸುತ್ತೂರು ಕೇಸರಿ, ಪೈ.ಸೂರಜ್‌ಗೆ ಸುತ್ತೂರು ಕುಮಾರ ಪ್ರಶಸ್ತಿ



ಪೈ.ವಿಜಯೇಂದ್ರ

ನಂಜನಗೂಡು, ಜ.30– ಸುತ್ತೂರು ಜಾತ್ರಾ ಮಹೋತ್ಸವ ಅಂಗವಾಗಿ ಗುರುವಾರ ನಡೆದ 43ನೇ ರಾಷ್ಟ್ರ ಮಟ್ಟದ




ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ದರಸಗುಪ್ಪೆ ಪೈ.ವಿಜಯೇಂದ್ರ–ಲಿಂಗದೇವರಕೊಪ್ಪಲಿನ ಪೈ.ಅರ್ಜುನ್ ಅವರ ಬೆನ್ನು ತಟ್ಟುವ ಮೂಲಕ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದರು.

ನಾಡಕುಸ್ತಿ ಪಂದ್ಯಾವಳಿಯಲ್ಲಿ ದರಸಗುಪ್ಪೆ ಪೈ.ವಿಜಯೇಂದ್ರ ಅವರು ಲಿಂಗದೇವರಕೊಪ್ಪಲಿನ ಪೈ.ಅರ್ಜುನ್ ಅವರನ್ನು ಮಣಿಸಿ ಸುತ್ತೂರು ಕೇಸರಿ ಪ್ರಶಸ್ತಿ ಪಡೆದರೆ, ನಂತರ ನಡೆದ ಜಿದ್ದಾಜಿದ್ದಿನ ಸೆಣಸಾಟದಲ್ಲಿ ನಂಜನಗೂಡಿನ ಒಕ್ಕಲಗೇರಿ ಗರಡಿಯ ಪೈ.ಸೂರ್ಯಕಾಂತ್ ಅವರನ್ನು ಮಣಿಸಿ ಹೊಸಳ್ಳಿ ಪೈ.ಸೂರಜ್ ಸುತ್ತೂರು ಕುಮಾರ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಗುರುವಾರ ಮಧ್ಯಾಹ್ನ ಸುತ್ತೂರು ಮಠದ ಶ್ರೀ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ದರಸಗುಪ್ಪೆ ಪೈ.ವಿಜಯೇಂದ್ರ–ಲಿಂಗದೇವರಕೊಪ್ಪಲಿನ ಪೈ.ಅರ್ಜುನ್ ಅವರ ಬೆನ್ನು ತಟ್ಟುವ ಮೂಲಕ ಕುಸ್ತಿ ಪಂದ್ಯಾವಳಿಗೆ ಚಾಲನೆ ನೀಡಿದರು. ಬೆಳಗಾವಿಯ ಪ್ರಕಾಶ್ ಪಾಟೀಲ್ ಇಂಗಳಗಿ ಹಾಗೂ ಹರಿಯಾಣದ ಸೋನಿಫತ್ ಅಖಾಡದ ಪೈ.ಪವನ್ ಕುಮಾರ್ ನಡುವೆ ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಮಾರ್ಫಿಟ್ ಕುಸ್ತಿಯಲ್ಲಿ ಇಬ್ಬರೂ ಪೈಲ್ವಾನರು ಸಮಬಲದ ಹೋರಾಟ ನಡೆಸಿದರು. ಅಂತಿಮವಾಗಿ ಬೆಳಗಾವಿಯ ಪ್ರಕಾಶ್ ಪಾಟೀಲ್ ಇಂಗಳಗಿ ಗಾಯಗೊಂಡು ಪಂದ್ಯದಿಂದ ನಿವೃತ್ತಿ ಘೋಷಿಸಿದ್ದರಿಂದ ತೀರ್ಪುಗಾರರು ಹರಿಯಾಣದ ಪೈ.ಪವನ್ ಕುಮಾರ್ ಅವರನ್ನು ವಿಜೇತರಾಗಿ ಘೋಷಿಸಿದರು.

ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ 79 ಜೊತೆ



ಪೈ.ಸೂರಜ್

ಕಾಟ ಕುಸ್ತಿಯಲ್ಲಿ ಬಹುತೇಕ ಕುಸ್ತಿಗಳು ಪೈಲ್ವಾನರ ಸಮಬಲದ ಹೋರಾಟದಿಂದ ಫಲಿತಾಂಶ ಬರದೆ ■ 6ನೇ ಪುಟಕ್ಕೆ

8ನೇ ವೇತನ ಆಯೋಗದ ಶಿಫಾರಸ್ಸಿಗೆ ಕೇಂದ್ರ ಸಂಪುಟ ಅನುಮೋದನೆ

ನವದೆಹಲಿ, ಜ.30– ಕೇಂದ್ರ ಸರ್ಕಾರಿ ನೌಕರರ ವೇತನ ಮತ್ತು ಪಿಂಚಣಿ ಪರಿಷ್ಕರಣೆಗೆ 8ನೇ ವೇತನ ಆಯೋಗ ಮಾಡಿರುವ ಶಿಫಾರಸ್ಸಿಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. 8ನೇ ವೇತನ ಆಯೋಗದ ಶಿಫಾರಸುಗಳು ಮುಂದಿನ ವರ್ಷ ಜಾರಿಗೆ ಬರುವ ಸಾಧ್ಯತೆ ಇದೆ. ಪ್ರಸ್ತುತ ಕೇಂದ್ರ ಸರ್ಕಾರಿ ನೌಕರರ ವೇತನ ರಚನೆಯು 2016ರಲ್ಲಿ ಜಾರಿಗೆ ಬಂದ 7ನೇ ವೇತನ ಆಯೋಗದ ಶಿಫಾರಸುಗಳನ್ನು ಅನುಸರಿಸುತ್ತದೆ. ಈಗ ವೇತನ ಪರಿಷ್ಕರಣೆಗಳು 'ಫಿಟ್‌ಮೆಂಟ್ ಫ್ಯಾಕ್ಟರ್' ಮೇಲೆ ಅವಲಂಬಿತವಾಗಿರುತ್ತದೆ. ಇದು ಪ್ರಸ್ತುತ ಮೂಲ ವೇತನಕ್ಕೆ ಅನ್ವಯಿಸಲಾಗುವ ನೀತಿಯಾಗಿದೆ.

ಫಿಟ್‌ಮೆಂಟ್ ಫ್ಯಾಕ್ಟರ್ ಎಂದರೇನು?: ವೇತನ ಆಯೋಗದ ಶಿಫಾರಸುಗಳ ಪ್ರಕಾರ ವೇತನಗಳನ್ನು ಎಷ್ಟು ಹೊಂದಿಸಬೇಕು ಎಂಬುದನ್ನು ನಿರ್ಧರಿಸುವ ಗುಣಾಂಕವಾಗಿ ಕಾರ್ಯನಿರ್ವಹಿಸುವ ನಿರ್ಣಾಯಕ ಸೂಚಕವಾಗಿದೆ. 7ನೇ ವೇತನ ಆಯೋಗದ ಅಡಿಯಲ್ಲಿ 2.57 ರ ಫಿಟ್‌ಮೆಂಟ್ ಫ್ಯಾಕ್ಟರ್‌ನೊಂದಿಗೆ, ಲೆವೆಲ್ 1 ರಲ್ಲಿನ ವೇತನವನ್ನು ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ (ಆಕ್ಸಿಡೆಂಟ್ ಆಗಿ ಆಸ್ಪತ್ರೆಗೆ ಬಂದ ಗುಂಡನಿಗೆ): ಏಟು ಬಿದ್ದ ಜಾಗದಲ್ಲಿ ಈ ಆಯಿಂಟ್ಮೆಂಟ್ ದಿನಕ್ಕೆ ಎರಡು ಸಲ ಹಚ್ಚಿ.

ಗುಂಡ : ಸಾಧ್ಯವೇ ಇಲ್ಲ ಡಾಕ್ಟರ್.

ಡಾಕ್ಟರ್ : ಏಕೆ ಸಾಧ್ಯವಿಲ್ಲ?

ಗುಂಡ : ಏಟು ಬಿದ್ದ ಜಾಗ ಇಲ್ಲಿಂದ 150 ಕಿ.ಮೀ ದೂರದ ಕಾಡಿನಲ್ಲಿದೆ ಡಾಕ್ಟರ್!

ಮೈಸೂರು ಮಿತ್ರ

ಶುಕ್ರವಾರ, 31 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಯಶಸ್ಸಿನ ದಾರಿಯಲ್ಲಿ ಮೊದಲು ಸಿಗುವುದು ತಿರಸ್ಕಾರ, ನಿರಾಕರಣೆ ನಂತರ ಟೀಕೆ, ಅಪಹಾಸ್ಯಗಳು. ಅವುಗಳನ್ನು ದಾಟಿದಾಗ ಮಾತ್ರ ನಮ್ಮ ಕಲ್ಪನೆಗೆ ನಿಲುಕದಷ್ಟು ಯಶಸ್ಸು ಬಂದು ಬೀಳುತ್ತದೆ. ಅದಕ್ಕೆ ತಾಳ್ಮೆ ಬೇಕು, ಹಠ ಬೇಕು. ಎದೆ ಗಟ್ಟಿಯಾಗಿರಬೇಕು– ಸ್ವಾಮಿ ವಿವೇಕಾನಂದ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಂಗಾರ ಇಟ್ಟುಕೊಂಡು ಬೆಳ್ಳಿ ಬೇಡಿದ ಹಾಗೆ

ನಿಮ್ಮ ಪತ್ರಗಳು

ಮೈಕ್ರೋ' V/S 'ಮೆಗಾ'

ಮಾನ್ಯರೆ,

ಸಾಲಗಾರರ ಜೀವ ಹಿಂಡುತ್ತಿರುವ ಮೈಕ್ರೋ ಫೈನಾನ್ಸ್ ಕಂಪನಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಸಚಿವರು ಹಾಗೂ ಮುಖ್ಯಮಂತ್ರಿಗಳು ಭರವಸೆ ನೀಡುತ್ತಿದ್ದಾರೆ. ಮುಡಾ ಹಗರಣ, ವಾಲ್ಮೀಕಿ ನಿಗಮ ಹಗರಣ ಮುಂತಾದ ಸಾಲು ಸಾಲು 'ಮೆಗಾ' ಹಗರಣಗಳ ಆರೋಪ ಹೊತ್ತ ಮಂತ್ರಿಮಹೋದಯರು 'ಮೈಕ್ರೋ' ಫೈನಾನ್ಸ್ ವಿರುದ್ಧ ಕ್ರಮ ಕೈಗೊಳ್ಳುವುದರಲ್ಲಿ ಅರ್ಥವಿದೆಯೇ?

ಈ ಸುದ್ದಿಗಳನ್ನು ಓದುವಾಗ ಶ್ರೀರಾಮಕೃಷ್ಣರ ನೀತಿಕತೆಯೊಂದು ನೆನಪಾಯಿತು! ರಾಮಕೃಷ್ಣ ಪರಮಹಂಸರ ಬಳಿ ಓರ್ವ ಮಹಿಳೆ ತನ್ನ ಮಗನನ್ನು ಕರೆದುಕೊಂಡು ಬಂದು, "ಪೂಜ್ಯರೇ ನನ್ನ ಮಗನಿಗೆ ಬೆಲ್ಲ ತಿನ್ನುವ ಅಭ್ಯಾಸವಿದೆ. ತಾವು ದಯವಿಟ್ಟು ನನ್ನ ಮಗನಿಗೆ ಒಂದಿಷ್ಟು ಬುದ್ಧಿ ಹೇಳಬೇಕು. ತಾವು ಹೇಳಿದರೆ ಆತ ಖಂಡಿತವಾಗಿಯೂ ಕೇಳಬಹುದು" ಎಂದು ಪ್ರಾರ್ಥಿಸಿದಳಂತೆ! ಆ ತಾಯಿಯ ಮಾತಿಗೆ ಒಪ್ಪಿದ ಶ್ರೀ ರಾಮಕೃಷ್ಣ ಪರಮಹಂಸರು 'ಹಾಗೆಯೇ ಆಗಲಿ ತಾಯಿ, ದಯವಿಟ್ಟು 3 ದಿನ ಬಿಟ್ಟು ಬನ್ನಿ, ನಿಮ್ಮ ಮಗನಿಗೆ ಬುದ್ಧಿ ಹೇಳುತ್ತೇನೆ' ಅಂದರಂತೆ. 3 ದಿನಗಳ ನಂತರ ಆ ತಾಯಿ ತನ್ನ ಮಗನನ್ನು ಪುನಃ ರಾಮಕೃಷ್ಣರ ಬಳಿ ಕರೆದೊಯ್ದಳು. ಆ ಹುಡುಗನನ್ನು ಕಂಡ ಶ್ರೀರಾಮಕೃಷ್ಣರು ಹತ್ತಿರ ಕರೆದು "ಮಗೂ, ಬೆಲ್ಲ ತಿನ್ನುವುದು ಒಳ್ಳೆಯದಲ್ಲ, ಇದರಿಂದ ಹೊಟ್ಟೆ ನೋವು ಬರುತ್ತದೆ. ಆದ್ದರಿಂದ ಬೆಲ್ಲ ತಿನ್ನುವುದನ್ನು ಬಿಟ್ಟು ಬಿಡು" ಎಂದು ಮನಮುಟ್ಟುವಂತೆ ಬೋಧಿಸಿದರು. ಹುಡುಗ ವಿನಮ್ರತೆಯಿಂದ ಹೇಳಿದ, "ಹಾಗೇ ಆಗಲಿ ಗುರುಗಳೇ, ಇನ್ನು ಮುಂದೆ ನಾನು ಬೆಲ್ಲ ತಿನ್ನುವುದಿಲ್ಲ."

ಇದರಿಂದ ಸಂತಸಗೊಂಡ ಆ ಹುಡುಗನ ತಾಯಿ' ಸ್ವಾಮೀ, ನನಗೊಂದು ಸಣ್ಣ ಅನುಮಾನ. ತಾವು ಈ ಮಾತನ್ನು ಅವತ್ತೇ ಏಕೆ ಹೇಳಲಿಲ್ಲ ?' ಎಂದು ಕೇಳಿದಳಂತೆ. ಆಗ ರಾಮಕೃಷ್ಣ ಪರಮಹಂಸರು, ಮುಗುಳ್ನಗುತ್ತಾ ಹೇಳಿದರಂತೆ, "ನಾನೂ ಬೆಲ್ಲ ತಿನ್ನುವ ಅಭ್ಯಾಸ ಬೆಳೆಸಿಕೊಂಡು ಬಿಟ್ಟಿದ್ದೆ. ಅದನ್ನು ಬಿಡುವುದಕ್ಕೆ ಮೂರು ದಿನ ಬೇಕಾಯಿತು. ನಾನೇ ಬೆಲ್ಲ ತಿನ್ನುವ ಅಭ್ಯಾಸ ಬೆಳೆಸಿಕೊಂಡು ನಿಮ್ಮ ಮಗನಿಗೆ ಬೆಲ್ಲ ತಿನ್ನಬೇಡ ಎಂದು ಹೇಗೆ ಹೇಳಲಿ? ಹೇಳಿದ್ದರೆ ಆ ಮಾತು ಪರಿಣಾಮಕಾರಿ ಆಗಿರುತ್ತಿರಲಿಲ್ಲ. ಅದಕ್ಕಾಗಿ ನಾನು ಮೊದಲು ಈ ಬೆಲ್ಲ ತಿನ್ನುವುದನ್ನು ಬಿಟ್ಟು ಈಗ ನಿಮ್ಮ ಮಗನಿಗೆ ಸಲಹೆ ನೀಡಿದೆ. ಅದು ಪರಿಣಾಮ ಬೀರಿತು. ಇನ್ನು ನಿಮ್ಮ ಹುಡುಗ ಬೆಲ್ಲ ತಿನ್ನುವುದಿಲ್ಲ. ನೀವು ಹೋಗಿಬನ್ನಿ" ಎಂದರಂತೆ! ಈ ನೀತಿಕತೆಯನ್ನು ನಮ್ಮ ರಾಜಕಾರಣಿಗಳು/ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಗ್ರಾಮಗಳಲ್ಲಿ ಕ್ರೀಡಾಂಗಣಗಳು ನಿರ್ಮಾಣವಾಗಲಿ

ಮಾನ್ಯರೆ,

ಭಾರತ ಗ್ರಾಮೀಣ ಪ್ರದೇಶದಿಂದ ಕೂಡಿದ ದೇಶವಾಗಿದೆ. ಈ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಮಕ್ಕಳು ಓದಿನ ಜೊತೆಗೆ ಕ್ರೀಡೆಯಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾರೆ. ಆದರೆ ನಗರ ಪ್ರದೇಶದ ಜನರಿಗೆ ಪಾರ್ಕ್‌ನಲ್ಲಿ ಕ್ರೀಡಾಂಗಣಗಳು ಇರುವಂತೆ, ಗ್ರಾಮೀಣ ಭಾಗದ ಜನರಿಗೆ ಈ ಸೌಲಭ್ಯಗಳು ಸಿಗುತ್ತಿಲ್ಲ. ಹಿಂದೆ ಗ್ರಾಮೀಣ ಭಾಗದ ಕ್ರೀಡಾಪಟುಗಳು ಭಾರತ ದೇಶದ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದು ಆಟವಾಡಿರುವುದು ಸಂತೋಷವಾದ ವಿಷಯವಾದರೆ, ಇಂದು ದೇಶದ ಹಲವಾರು ಗ್ರಾಮಗಳಲ್ಲಿ ಸರಿಯಾದ ಕ್ರೀಡಾಂಗಣಗಳು ಇಲ್ಲದೆ ಬಹಳ ಕಷ್ಟಪಟ್ಟು ತಮ್ಮ ತಮ್ಮ ಕ್ರೀಡಾ ಗುರಿಯನ್ನು ತಲುಪುವಂತಾಗಿದೆ. ಆದರೆ, ದೇಶದಲ್ಲಿ ಗ್ರಾಮಗಳು ಹೆಚ್ಚಾಗಿರುವುದರಿಂದ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಕ್ರೀಡೆಗೆ ಸಂಬಂಧಿಸಿದ ಕ್ರೀಡಾಂಗಣಗಳು ಸೇರಿ ಮೂಲಸೌಕರ್ಯಗಳನ್ನು ಒದಗಿಸಿ ಕ್ರೀಡೆಗಳಿಗೆ ಸಂಬಂಧಿಸಿದಂತೆ ಮಹಿಳಾ ಮತ್ತು ಪುರುಷ ತರಬೇತಿದಾರರನ್ನು ನೇಮಕ ಮಾಡಿ ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕ್ರೀಡಾ ಸಚಿವರು ಮುಂದಾಗಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಕೆಡವಿ ಹೊಸದಾಗಿ ನಿರ್ಮಿಸಿ

ಮಾನ್ಯರೆ,

ಕಳೆದ ಮಂಗಳವಾರ, ಶಿಥಿಲಗೊಂಡಿರುವ ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜು ನೆಲಸಮ ಮಾಡುವ ವೇಳೆ ಕೂಲಿ ಕಾರ್ಮಿಕರೊಬ್ಬರು ಕಟ್ಟಡದ ಅವಶೇಷಗಳ ಅಡಿಯಲ್ಲಿ ಸಿಲುಕಿ ಸಾವನ್ನಪ್ಪಿದ್ದು ಒಂದು ದುರಂತ ಘಟನೆ, ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜಿನ ಒಂದು ಭಾಗ ಕಳೆದ 5 ವರ್ಷಗಳ ಹಿಂದೆಯೇ ಬಿದ್ದು ಹೋಗಿತ್ತು. ಈಗಾಗಲೇ ಮೈಸೂರಿನ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸಹ ಶಿಥಿಲಾವಸ್ಥೆಯಲ್ಲಿವೆ. ಈ ಎರಡೂ ಪಾರಂಪರಿಕ ಕಟ್ಟಡಗಳು ಸಹ ಈಗಾಗಲೇ ಸ್ವಲ್ಪ ಭಾಗ ಬಿದ್ದು ಹೋಗಿವೆ. ಆದರೆ ಈ ಕಟ್ಟಡಗಳನ್ನು ಹಾಗೆ ಉಳಿಸಿಕೊಂಡು ಪುನರ್ ನವೀಕರಣ ಮಾಡಲು ಮೈಸೂರು–ಕೊಡಗು ಸಂಸದರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಆದರೆ ಈ ಕಟ್ಟಡಗಳನ್ನು ನೆಲಸಮಗೊಳಿಸಿ ಕಟ್ಟಡಗಳ ಪಾರಂಪರಿಕತೆಯನ್ನು ಉಳಿಸಿಕೊಂಡು ಪುನರ್ ನಿರ್ಮಾಣ ಮಾಡುವುದಾಗಿ ಉಸ್ತುವಾರಿ ಸಚಿವರು ಇತ್ತೀಚೆಗೆ ಹೇಳಿಕೆ ನೀಡಿದ್ದಾರೆ, ಆದರೆ ಈಗ ಮಹಾರಾಣಿ ಕಾಲೇಜಿನ ಸ್ಥಿತಿ ನೋಡಿದರೆ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಅನ್ನು ಸಂಪೂರ್ಣ ನೆಲಸಮಗೊಳಿಸಿ, ಹಳೇ ಪಾರಂಪರಿಕ ಶೈಲಿಯಲ್ಲಿ ಈ ಕಟ್ಟಡಗಳನ್ನು ಪುನರ್ನಿರ್ಮಾಣ ಮಾಡುವುದೇ ಸೂಕ್ತ ಎನಿಸುತ್ತದೆ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು**


ಸಂಬೋಧನೆ

'ವೀರ ತಪಸ್ವಿ ವಿವೇಕಾನಂದ (ಸಂಸ್ಕೃತಿ ಚಿಂತನಾ, ಜ.22): ಚಿಕಾಗೋ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಶ್ರೋತೃಗಳಲ್ಲಿ ಸಂಬೋಧಿಸಿದ್ದು brothers and sisters of america ಎಂದಲ್ಲ, sisters and brothers ಎಂದು. ಪ್ರಾಯಶಃ ಜಗತ್ತಿನ ಮೊತ್ತ ಮೊದಲ ಸ್ತ್ರೀವಾದಿ, ಸ್ವಾಮೀಜಿ! **–ಸಿಪಿಕೆ, ಮೈಸೂರು.**

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

ಜನವರಿ 30ರ ಗುರುವಾರದ 'ಮೈಸೂರು ಮಿತ್ರ' ಸಂಚಿಕೆಯ 4ನೇ ಪುಟದಲ್ಲಿ **'ಬಹುಮುಖಿ'** ಅಂಕಣದಲ್ಲಿ ಪ್ರಕಟವಾಗಿರುವ **'ವಿಶ್ವಮಾನ್ಯ ಮಹಾತ್ಮ ಗಾಂಧೀಜಿ'** ಲೇಖನದಲ್ಲಿ ಶ್ರೀಯುತರು ಕಸ್ತೂರ ಬಾ ಅವರೊಂದಿಗೆ ವಿವಾಹವಾಗಿದ್ದು 1833 ಎಂದು ತಪ್ಪಾಗಿ ಪ್ರಕಟವಾಗಿದೆ. ಆದರೆ ಅದನ್ನು 1883 ಎಂದು ಓದಿಕೊಳ್ಳುವುದು. ಕಣ್ತಪ್ಪಿನಿಂದಾದ ದೋಷಕ್ಕೆ ವಿಷಾದಿಸುತ್ತೇವೆ. **–ಸಂ.**

ಅರಿತು ಬಾಳಿದರೆ ಬದುಕು ಸಾರ್ಥಕ



ಬದುಕು ಕನ್ನಡಿ ಇದ್ದಂತೆ. ಜೋಪಾನವಾಗಿ ಬಳಸಿದರೆ ಬಾಳಿಕೆಗೆ ಬರುತ್ತದೆ. ಇಲ್ಲವಾದರೆ ಅದು ನುಚ್ಚು ನೂರಾಗಿ ಗುಜರಿಯವರು ಕೂಡ ಒಲ್ಲೆವು ನಾವು ಎಂದು ನಿರಾಕರಿಸುವ ಮಟ್ಟಕ್ಕೆ ತಲುಪುತ್ತದೆ. ಜೀವನ ನೂರು ಪುಟದ ಒಂದು ಪುಸ್ತಕ, ಮೊದಲನೇ ಪುಟವನ್ನು ಭಗವಂತನೇ ಬರೆದಿದ್ದಾನೆ, ಕೊನೆಯ ಪುಟವನ್ನು ಆ ಭಗವಂತನೇ ಬರೆದಿದ್ದಾನೆ. ಮೊದಲನೇ ಪುಟ–ಜನನ ಕೊನೆಯ ಪುಟ–ಮರಣ. ಉಳಿದ ತೊಂಬತ್ತೆಂಟು ಪುಟವನ್ನು ನಾವೇ ಬರೆದುಕೊಳ್ಳಲಿ ಎಂದು ಖಾಲಿ ಉಳಿಸಿದ್ದಾನೆ. ಆ ತೊಂಬತ್ತೆಂಟು ಪುಟದಲ್ಲಿ ಶುದ್ಧವಾದ, ಅಂದವಾದ ಬರಹದಿಂದ ಬರೆದದ್ದೆ ಆದರೆ ಅದು ಮಹಾ ಕಾವ್ಯವಾಗುತ್ತದೆ. ಇಲ್ಲವಾದರೆ ರದ್ದಿ ಕಾಗದವಾಗುತ್ತದೆ. ಈ ತೊಂಬತ್ತೆಂಟು ಪುಟಗಳು ಮತ್ತೊಬ್ಬರು ಅನುಸರಿಸಬೇಕಾದ, ಹೊಗಳುವ ಬದುಕನ್ನು ಬದುಕಬೇಕೇ ವಿನಃ ಎಲ್ಲರೂ ಛೀ ಥೂ ಎಂದು ಉಗುಳಿಸಿಕೊಳ್ಳುವ ಬದುಕು ನಮ್ಮದಾಗಬಾರದು. ಇದಕ್ಕೆ ಒಂದು ಕತೆ ಈ ಕ್ಷಣದಲ್ಲಿ ನೆನಪಾಗುತ್ತಿದೆ.

ಸ್ಫೂರ್ತಿಯ ಸೆಲೆ

ಒಬ್ಬ ಶ್ರೀಮಂತ ತನ್ನ ಮುದ್ದು ಮಗನಿಗೆ ಸಾಯುವ ಸಮಯದಲ್ಲಿ ವಿಲ್ ಪತ್ರದ ಜೊತೆ ಹಳೆಯ ಪಾದರಕ್ಷೆಗಳನ್ನು ನೀಡಿ ಹೇಳಿದ. ವಿಲ್ ಪತ್ರದಲ್ಲಿ ನಿನಗೆ ನನ್ನೆಲ್ಲಾ ಆಸ್ತಿಯನ್ನು ಬರೆದಿದ್ದೇನೆ. ನೀನು ಸುಖವಾಗಿ ಬಾಳು, ಅದರೆ ನನ್ನ ಕೊನೆಯ ಆಸೆಯೊಂದಿದೆ ಅದನ್ನು ನೆರವೇರಿಸು ಅಷ್ಟು ಸಾಕು. ಅದೇನೆಂದರೆ ನಾನು ಸತ್ತ ಮೇಲೆ ನನ್ನ ಪಾದಕ್ಕೆ ಈ ಹಳೆಯ ಚಪ್ಪಲಿಯನ್ನು ತೊಡಿಸಿ ಅಂತ್ಯಕ್ರಿಯೆ ನೆರವೇರಿಸು! ಮಗ ತನ್ನ ಕೆನ್ನೆಯ ಮೇಲೆ ಜಾರುತ್ತಿದ್ದ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಈ ಸಣ್ಣ ಆಸೆಯನ್ನು ನಾನು ಖಂಡಿತ ನೆರವೇರಿಸುತ್ತೇನೆ ಎಂದು ಅಪ್ಪನಿಗೆ ಮಾತು ಕೊಡುತ್ತಾನೆ. ತಂದೆಯು ಕೊನೆಯುಸಿರೆಳೆದ ದಿನ ವಿಧಿ– ವಿಧಾನ ಕಾರ್ಯಗಳನ್ನು ಮಾಡಿದ ಪಂಡಿತರಿಗೆ ಮಗ ಅಪ್ಪನಿಗೆ ಹಳೆಯ ಚಪ್ಪಲಿ ತೊಡಿಸಲು ಕೋರುತ್ತಾನೆ. ಅದರೆ ಪಂಡಿತರು ಸಾಧ್ಯವೇ ಇಲ್ಲ, ಇದು ಅಂತ್ಯಕ್ರಿಯೆ ಸಂಪ್ರದಾಯದಲ್ಲೇ ಇಲ್ಲವೆಂದು ನಿರಾಕರಿಸುತ್ತಾರೆ. ಎಷ್ಟೇ ಪ್ರಯತ್ನಪಟ್ಟರು. ಆ ಶ್ರೀಮಂತ ವ್ಯಕ್ತಿಗೆ ಹಳೆಯ ಚಪ್ಪಲಿ ತೊಡಿಸಲು ಸಾಧ್ಯವೇ ಆಗುವುದಿಲ್ಲ! ಈ ವಿಚಾರವಾಗೇ ಊರಿನ ಮಂದಿಯೆಲ್ಲರೂ ಸೇರಿ ಈ ವಿಷಯದ ಕುರಿತು ಚರ್ಚಿಸುತ್ತಿರುತ್ತಾರೆ. ಅಷ್ಟರಲ್ಲಿ ಅಲ್ಲಿಗೆ ಓಡೋಡಿ ಬಂದ ಆ ಶ್ರೀಮಂತನ ಸ್ನೇಹಿತ ಮಗನಿಗೆ ಪತ್ರ ನೀಡಿ ಹೇಳುತ್ತಾನೆ. ನಿಮ್ಮ ತಂದೆಯವರು ಕೆಲ ದಿನಗಳ ಹಿಂದೆ ನನ್ನನ್ನು ಕರೆದು ಈ ಪತ್ರವನ್ನು ನನ್ನ ಮಗನಿಗೆ ನನ್ನ ಅಂತ್ಯಸಂಸ್ಕಾರದ ಕೊನೆಗಳಿಗೆಯಲ್ಲಿ ನೀಡಲು ತಿಳಿಸಿದ್ದರು ಎಂದು ಹೇಳುತ್ತಾನೆ.

ತುಂಬಾ ಕುತೂಹಲದಿಂದ ಆ ಪತ್ರವನ್ನು ತೆರೆದು ನೋಡಿದಾಗ ಅವರ ತಂದೆ ಬರೆದಿರುತ್ತಾರೆ ಪ್ರಿಯ ಪುತ್ರನೇ ನೋಡಿದೆಯಾ? ದೊಡ್ಡ ಫ್ಯಾಕ್ಟರಿ, ಭವ್ಯ ಬಂಗಲೆ, ಕಾರು, ಚಿನ್ನ, ಒಡವೆ, ಫಾರಂ ಹೌಸ್ ಇದೆಲ್ಲದರ ಒಡೆಯನಾಗಿದ್ದರೂ ನಾನು ಒಂದು ಜೊತೆ ಹಳೆಯ ಚಪ್ಪಲಿಯನ್ನು ಕೂಡ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಇಷ್ಟೇ ಬದುಕಿನ ಸತ್ಯ! ನಿನಗೂ ಒಂದು ದಿನ ಸಾವು ಹತ್ತಿರವಾಗುತ್ತದೆ. ನೀನು ಕೇವಲ ಬಿಳಿ ಬಟ್ಟೆಯಲ್ಲಿ ಇಹಲೋಕ ತ್ಯಜಿಸಬೇಕು. ಈಗಲೇ ಎಚ್ಚರಗೊಳ್ಳು, ದುಡ್ಡಿಗಾಗಿ ಯಾರನ್ನು ನೋಯಿಸಬೇಡ, ಪೀಡಿಸಬೇಡ. ಅನ್ಯಾಯ ಮತ್ತು ಅಧರ್ಮದಿಂದ ಹಣ ಸಂಪಾದನೆ ಮಾಡಬೇಡ. ನೀನು ಗಳಿಸಿದ ಹಣದಲ್ಲಿ ಕೆಲ ಭಾಗವನ್ನು ನಿರ್ಗತಿಕರಿಗೆ, ಇಲ್ಲದವರಿಗೆ ದಾನ ಮಾಡು. ಸತ್ಕಾರ್ಯಗಳಿಗೆ ಹಣವನ್ನು ಬಳಸು, ಸತ್ತಾಗ ನಿನ್ನ ಹಿಂದೆ ಬರುವುದು ನಿನ್ನ ಕರ್ಮಗಳು ಮಾತ್ರ ಎಂದು ಪತ್ರ ಮುಗಿಸುತ್ತಾನೆ.

> ❝ ಮನುಷ್ಯನಿಗೆ ಹೇಳಬೇಕಾಗಿರುವುದನ್ನೆಲ್ಲಾ ಹೇಳಿ ಆಗಿದೆ. ಇನ್ನು ಏನೇ ಇದ್ದರು ಅದನ್ನು ಅನುಸರಿಸಬೇಕು ಅಷ್ಟೆ
>
> –ಶ್ರೀ ಸಿದ್ದೇಶ್ವರ ಸ್ವಾಮೀಜಿ

ಮನುಷ್ಯ ಎಷ್ಟೇ ಗಳಿಸಿದರು ಎಲ್ಲವನ್ನೂ ಇಲ್ಲೇ ಬಿಟ್ಟು ಹೋಗಬೇಕು. ಏನೇ ಆಗಿದ್ದರು ಏಕಿಷ್ಟು ಅಹಂಕಾರ, ನೀಚತನ ಕ್ರೂರತನ. ನಡೆದಾಡುವ ದೇವರು, ಜ್ಞಾನಯೋಗಿ ಎಂದು ಕರೆಸಿಕೊಳ್ಳುವ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ಒಂದು ಕಡೆ ಹೇಳುತ್ತಾರೆ. 'ಮನುಷ್ಯನಿಗೆ ಹೇಳಬೇಕಾಗಿರುವುದನ್ನೆಲ್ಲಾ ಹೇಳಿ ಆಗಿದೆ. ಇನ್ನು ಏನೇ ಇದ್ದರು ಅದನ್ನು ಅನುಸರಿಸಬೇಕು ಅಷ್ಟೆ'. ಅಶಾಶ್ವತವಾದ ಜಗತ್ತಿನಲ್ಲಿ ಶಾಶ್ವತ ನೆಲೆಗಾಗಿ ಬಡಿದಾಡುತ್ತಾ ಅಹಂಕಾರದ ಮನೆಯಲ್ಲಿ ವಾಸಿಸುತ್ತಾ ಕೆಸರಿನ ಕಾರ್ಯಗಳನ್ನೇ ಕೈಗೊಳ್ಳುತ್ತಿರುತ್ತೇವೆ. ಅಂತರಂಗ ಪರಿಶುದ್ಧವಿಲ್ಲದೆ ಅಹಂಕಾರದಿಂದ ಮಾಡುವ ಯಾವುದೇ ಕೆಲಸವು ನಮ್ಮ ಕೀರ್ತಿಯನ್ನು ವೃದ್ಧಿಗೊಳಿಸಲಾರದು. ಅದಕ್ಕೆ ಬಸವಣ್ಣನವರು ಹೇಳುತ್ತಾರೆ

ನೂರನೋದಿ ನೂರ ಕೇಳಿದರೇನು?

ಆಸೆ ಹರಿಯದು ರೋಷ ಬಿಡದು ಮಜ್ಜನಕ್ಕೆರದು ಫಲವೇನು?

ಮಾತಿನಂತೆ ಮನವಿಲ್ಲದ ಜಾತಿ–ಡೊಂಬರ ನೋಡಿ ನಗುವನಯ್ಯ ಕೂಡಲಸಂಗಮದೇವರು.

ವಿಶ್ವಗುರು ಬಸವಣ್ಣನವರು ಮನುಷ್ಯನಿಂದ ಬದಲಾವಣೆಯನ್ನು ಬಯಸುತ್ತಾ ಅಂತರಂಗ ಶುದ್ಧಿಗೆ ಪ್ರಾಧಾನ್ಯತೆಯನ್ನು ನೀಡಿದ್ದಾರೆ. ವೇದ–ಶಾಸ್ತ್ರಗಳು ಆಗಮ–ಪುರಾಣಗಳು, ಉಪನಿಷತ್ತುಗಳು ಧರ್ಮ ಗ್ರಂಥಗಳು, ಸಾಧು ಸಂತರು, ವಚನಕಾರರು, ದಾಸವರೇಣ್ಯರು ಶತ ಶತಮಾನಗಳಿಂದ ಸಾರಿ ಹೇಳಿದ ಮಾತು ಒಂದೇ. ಮನುಷ್ಯ ದೇಹ ಮನಸ್ಸು ಒಂದೇ ಬಗೆಯಾಗಿರಬೇಕೆಂದು, ತೋರಿಕೆಯ ಭಾವನೆ ಎಂದಿಗೂ ಸಲ್ಲದು ಅಂತರಂಗ ಬಹಿರಂಗ ಶುದ್ಧಿಯಾಗಿದ್ದರೆ ನಾವು ಮಾಡುವ ಪ್ರಾಮಾಣಿಕ ಕಾರ್ಯಗಳು ನಮ್ಮನ್ನು ಬಹಳ ಎತ್ತರಕ್ಕೆ ತಂದು ನಿಲ್ಲಿಸುತ್ತವೆ. ಬೇವನ್ನು ಬೆಲ್ಲದಲ್ಲಿ ಅದ್ದಿದರೆ ಅದು ಸಿಹಿಯಾಗಲು ಎಂದಿಗೂ ಸಾಧ್ಯವಿಲ್ಲ. ಅಂತೆಯೇ ನಾವು ಅಂತರಂಗದಿದ್ದ ಪರಿಶುದ್ಧವಾಗಿರಬೇಕು. ಪುಲಿಗೆರೆ ಸೋಮ ನಾಥ ತನ್ನ ಸೋಮೇಶ್ವರ ಶತಕದಲ್ಲಿ ಹೇಳುವಂತೆ

'ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲು ತಾಂ ಶುದ್ಧನೇನಪ್ಪನೇ'।

ಈ ಮಾತಿಗೆ ಸರಿಸಾಟಿ ಎನ್ನುವಂತೆ ಹಿತೋಕ್ತಿಯ ಕಥೆ ಹೀಗಿದೆ. ಗುರುಕುಲದಲ್ಲಿ ಓದುತ್ತಿದ್ದ ಶಿಷ್ಯರು ಒಮ್ಮೆ ತಮ್ಮ ಗುರುಗಳ ಬಳಿ ಬಂದು, "ಗುರುಗಳೇ ನಾವೆಲ್ಲಾ ತೀರ್ಥಯಾತ್ರೆ ಮಾಡಬೇಕು ಎಂದುಕೊಂಡಿದ್ದೇವೆ. ತಾವು ಸಮ್ಮತಿಸಿದರೆ ಪುಣ್ಯಕ್ಷೇತ್ರಗಳಿಗೆ ತೆರಳಿ ಪವಿತ್ರ ಸ್ನಾನ ಮಾಡಿ ದೇವರ ದರ್ಶನ ಮಾಡಿ ಬರುತ್ತೇವೆ" ಎಂದು ಹೇಳಿ ಯಾತ್ರೆಗೆ ಅನುಮತಿ ಕೋರಿದರು. ನೀವು ತೀರ್ಥಯಾತ್ರೆ ಕೈಗೊಳ್ಳುತ್ತಿರುವ ಉದ್ದೇಶವೇನು? ಎಂದು ಗುರುಗಳು ತಮ್ಮ ಶಿಷ್ಯರಿಗೆ ಕೇಳಿದರು. ಇದಕ್ಕೆ ಉತ್ತರಿಸಿದ ಶಿಷ್ಯರು, "ಗುರುಗಳೇ ನಾವು ಅಂತರಂಗಶುದ್ಧಿಗಾಗಿ ತೀರ್ಥಯಾತ್ರೆ ಮಾಡುತ್ತಿದ್ದೇವೆ" ಎಂದು ತಿಳಿಸಿದರು. "ಸಂತೋಷ ಹೋಗಿ ಬನ್ನಿ ಶುಭವಾಗಲಿ" ಎಂದ ಗುರುಗಳು, ಯಾತ್ರೆಗೆ ಹೊರಟ ಶಿಷ್ಯರೆಲ್ಲರಿಗೂ ಒಂದೊಂದು ಹಾಗಲಕಾಯಿ ಕೊಟ್ಟು, "ಈ ಕಾಯನ್ನೂ ನಿಮ್ಮ ಜೊತೆ ತೆಗೆದುಕೊಂಡು ಹೋಗಿ, ನೀವು ಎಲ್ಲೆಲ್ಲಿ ಸ್ನಾನ ಮಾಡುತ್ತೀರೋ ಅಲ್ಲಿ ಈ ಹಾಗಲ ಕಾಯಿಗೂ ಸ್ನಾನ ಮಾಡಿಸಿ. ನೀವು ಎಲ್ಲೆಲ್ಲಿ ದೇವರ ದರ್ಶನ ಪಡೆಯುತ್ತೀರೋ ಅಲ್ಲಿ ದೇವರ ಪಾದದ ಬಳಿ ಈ ಕಾಯಿಗಳನ್ನು ಇಟ್ಟು ಪೂಜೆ ಮಾಡಿಸಿಕೊಂಡು ಬನ್ನಿ" ಎಂದು ತಿಳಿಸಿದರು. ಸರಿ ಎಂದ ಶಿಷ್ಯರು, ಹಾಗಲಕಾಯಿಯ ಜೊತೆ ಯಾತ್ರೆ ಹೊರಟು ಒಂದು ವಾರದ ಬಳಿಕ ಹಿಂತಿರುಗಿದರು. ಶಿಷ್ಯರನ್ನು ಕಂಡ ಗುರುಗಳು, "ಏನು ಕ್ಷೇತ್ರ ದರ್ಶನದಿಂದ ನೀವೆಲ್ಲ ಪುನೀತರಾದಿರಾ, ನಿಮ್ಮ ಅಂತರಂಗ ಶುದ್ಧಿಯಾಯಿತೇ?" ಎಂದು ಕೇಳಿದರು. ಎಲ್ಲ ಶಿಷ್ಯರೂ ಒಕ್ಕೊರಲಿನಿಂದ ಹೌದೆಂದರು. ಆಗ ಗುರುಗಳು "ನೀವು ಯಾತ್ರೆಗೆ ಹೊರಡುವಾಗ ನಾನು ಕೊಟ್ಟಿದ್ದ ಹಾಗಲಕಾಯಿಗಳಿಗೆ ನದಿಯಲ್ಲಿ ಪವಿತ್ರ ಸ್ನಾನ ಮಾಡಿಸಿದಿರಾ?, ದೇವರ ಬಳಿ ಇಟ್ಟು ಪೂಜೆ ಮಾಡಿಸಿದಿರಾ?" ಎಂದು ಕೇಳಿದರು. ಶಿಷ್ಯರು ಹೌದೆಂದರು.

"ಸರಿ, ಹಾಗಾದರೆ ಈ ಕಾಯಿಗಳನ್ನು ಹಾಕಿ ಇಂದು ಅಡುಗೆ ಮಾಡಿಸಿ" ಎಂದು ಅಪ್ಪಣೆ ಕೊಡಿಸಿದರು. ಊಟಕ್ಕೆ ಕುಳಿತಾಗ ಹಾಗಲಕಾಯಿ ತಿಂದ ಗುರುಗಳು, "ಅಯ್ಯೋ! !!.. ಇದೇನು ಇಷ್ಟು ಕಹಿಯಾಗಿದೆ?" ಎಂದು ಆಕ್ರೋಶ ವ್ಯಕ್ತಪಡಿಸಿದರು. ಅದಕ್ಕೆ ಉತ್ತರ ಕೊಟ್ಟ ಶಿಷ್ಯ, "ಅಲ್ಲ ಗುರುಗಳೇ ಹಾಗಲಕಾಯಿಯ ಗುಣವೇ ಕಹಿ ಅದು ಸಿಹಿ ಆಗಲು ಹೇಗೆ ಸಾಧ್ಯ?" ಎಂದು ಕೇಳಿದರು. ಆಗ ಗುರುಗಳು ಹೇಳಿದರು "ಪವಿತ್ರ ಸ್ನಾನ ಮಾಡಿ, ದೇವರ ದರ್ಶನ ಮಾಡಿದ ಮಾತ್ರಕ್ಕೆ ನಿಮ್ಮ ಅಂತರಂಗ ಶುದ್ಧಿ ಆಗುವುದಾದರೆ ಈ ಹಾಗಲಕಾಯಿಯೂ ನಿಮ್ಮೊಂದಿಗೆ ಎಲ್ಲ ಕ್ಷೇತ್ರಗಳಲ್ಲಿ ಪವಿತ್ರ ಸ್ನಾನ ಮಾಡಿ ಪುನೀತವಾಗಿದೆ. ದೇವರ ದರ್ಶನದಿಂದ ಇದರ ಅಂತರಂಗ ಶುದ್ಧಿ ಆಗಿರಬೇಕಲ್ಲ. ಹಾಗಾದರೆ ಸಿಹಿ ಆಗುವ ಬದಲು ಕಹಿ ಏಕಾಯಿತು?" ಎಂದು ಪ್ರಶ್ನಿಸಿದರು. ಗುರುಗಳ ಆಂತರ್ಯ ಅರಿತ ಶಿಷ್ಯರು ತಲೆ ತಗ್ಗಿಸಿ ನಿಂತರು. ಆಗ ಗುರುಗಳು ಹೇಳಿದರು. "ಮಾಡುವ ಪಾಪವನ್ನೆಲ್ಲಾ ಮಾಡಿ ದೇವರ ಬಳಿ ಹೋದರೆ ನೀವು ಪುನೀತರಾಗುವುದಿಲ್ಲ. ನಿಮ್ಮಲ್ಲಿ ದುರ್ಗುಣ ತುಂಬಿಕೊಂಡು ಪುಣ್ಯ ಸ್ನಾನ ಮಾಡಿದರೆ ನಿಮ್ಮ ಅಂತರಂಗ ಶುದ್ಧಿ ಆಗುವುದಿಲ್ಲ. ಮೊದಲು ನಿಮ್ಮ ಮನಸ್ಸನ್ನು ನಿರ್ಮಲವಾಗಿಟ್ಟುಕೊಳ್ಳಿ. ಸತ್ಯವನ್ನೇ ನುಡಿಯಿರಿ, ಧರ್ಮದಿಂದ ನಡೆಯಿರಿ, ಎಲ್ಲರನ್ನೂ ನಿಮ್ಮಂತೆಯೇ ಕಾಣಿ. ಮೋಸ, ವಂಚನೆ ಮಾಡಬೇಡಿ, ಜಗತ್ತಿನಲ್ಲಿರುವ ಎಲ್ಲವೂ ನನಗೇ ಬೇಕು ಎಂದು ಕೂಡಿಡುವ ಮನೋಸ್ಥಿತಿ ಬಿಡಿ (ಭ್ರಷ್ಟಾಚಾರ), ನಿಮ್ಮ ಬದುಕನ್ನು ಪರೋಪಕಾರಕ್ಕೆ ಮೀಸಲಿಡಿ. ಆಗ ಭಗವಂತನೂ ಮೆಚ್ಚುತ್ತಾನೆ ಎಂಬ ದಿವ್ಯ ಸಂದೇಶ ಪ್ರಸ್ತುತ ಪ್ರಪಂಚಕ್ಕೆ ಅತಿ ಅಗತ್ಯವಾಗಿ ಬೇಕಾಗಿದೆ. ನಾವು ಪರಿಶುದ್ಧವಾಗಿದ್ದರೆ ನಾಡು ಪರಿಶುದ್ಧವಾಗಿರುತ್ತದೆ. ನಿಜಕ್ಕೂ ಈ ಕಥೆಯು ಅಂತಃಕರಣ ಪರಿಶುದ್ಧವಿಲ್ಲದೆ ಕಪಟಿಗಳಂತೆ ವರ್ತಿಸುತ್ತಾ ಅಲಂಕಾರದ ಬದುಕನ್ನು ಅಹಂಕಾರಕ್ಕೆ ಒಳಗು ಮಾಡಿ ಬದುಕನ್ನು ಬರ್ಬರ ಹತ್ಯೆಯಾಗಿಸಿಕೊಳ್ಳುವ ಮಂದಿಗೆ ಸರಿಯಾದ ಸೂಕ್ತ ನಿಯಮಗಳನ್ನು ಜೀವನದಲ್ಲಿ ರೂಢಿಸಿಕೊಂಡು ಬದುಕಲು ದಾರಿದೀಪವಾಗುತ್ತದೆ.



–ಪರಮೇಶ
ಕೆ.ಉತ್ತನಹಳ್ಳಿ,
ಹವ್ಯಾಸಿ ಬರಹಗಾರ,
ಮೈಸೂರು.
ದೂರವಾಣಿ–
7795862281

ಭರವಸೆ ನಾಯಕ ಜಿ.ಡಿ.ಹರೀಶ್‌ಗೌಡ



ಮೈಸೂರು ಭಾಗದ ಜೆಡಿಎಸ್ ಯುವ ನಾಯಕರಾಗಿ ಗುರುತಿಸಿಕೊಂಡಿರುವ ಶಾಸಕ ಜಿ.ಡಿ.ಹರೀಶ್‌ಗೌಡರು, ವಯಸ್ಸಿನಲ್ಲಿ ಕಿರಿಯರಾದರೂ ರಾಜಕೀಯ ಹಾಗೂ ಸಹಕಾರ ಕ್ಷೇತ್ರದಲ್ಲಿ ಸಮಾನವಾಗಿ ತೊಡಗಿಸಿಕೊಂಡು ತಮ್ಮದೇ ಆದ ಛಾಪು ಮೂಡಿಸಿರುವ ಭರವಸೆ ನಾಯಕ.

ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್‌ನ ನಿಕಟಪೂರ್ವ ಅಧ್ಯಕ್ಷರು, ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿಯೂ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲದೆ, ರಾಜಕೀಯ ಕ್ಷೇತ್ರಕ್ಕೆ ಅಡಿಯಿಟ್ಟು ಈಗ ಹುಣಸೂರು ಕ್ಷೇತ್ರದ ಶಾಸಕರಾಗಿ ಜನ ಮೆಚ್ಚುಗೆ ಗಳಿಸಿದ್ದಾರೆ.

ಸಹಕಾರಿಯಾಗಿ ಸಾಧನೆ

ಹುಣಸೂರು ತಾಲೂಕು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕನಾಗುವ ಮೂಲಕ 2012ರಲ್ಲಿ ಸಹಕಾರ ಕ್ಷೇತ್ರಕ್ಕೆ ಅಧಿಕೃತವಾಗಿ ಪ್ರವೇಶಿಸಿದ ಜಿ.ಡಿ.ಹರೀಶ್‌ಗೌಡರು, ಉತ್ತಮ ಸಹಕಾರಿಯಾಗಿ ಬೆಳೆದಿದ್ದಾರೆ. 2013ರಲ್ಲಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದರು. ಆ ವೇಳೆ ಸಹಕಾರ ಬ್ಯಾಂಕ್‌ವೊಂದರಲ್ಲಿ 27 ಕೋಟಿ ಅವ್ಯವಹಾರ ನಡೆದಿದ್ದನ್ನು ಪತ್ತೆ ಹಚ್ಚಿ, ಅದಕ್ಕೆ ಕಾರಣರಾದವರಿಗೆ ಶಿಕ್ಷೆ ಕೊಡಿಸುವಲ್ಲಿ ಸಫಲರಾದರು. 2018ರಲ್ಲಿ ಮತ್ತೆ ನಿರ್ದೇಶಕರಾದ ಇವರಿಗೆ ಅಧ್ಯಕ್ಷ ಸ್ಥಾನ ಒಲಿದುಬಂತು. ಐದು ವರ್ಷಗಳಲ್ಲಿ ಎಂಸಿಡಿಸಿಸಿ ಬ್ಯಾಂಕ್‌ನ ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಸಫಲರಾದರು. ಆ ಅವಧಿಯಲ್ಲಿ ಮೈಸೂರು–ಚಾಮರಾಜನಗರ ಜಿಲ್ಲೆಗಳ ರೈತರಿಗೆ ಯಥೇಚ್ಛವಾಗಿ ಸಾಲ ನೀಡಲಾಯಿತು. 350 ಕೋಟಿ ಇದ್ದ ಠೇವಣಿ ಮೊತ್ತ 950 ಕೋಟಿಗೆ ಏರಿಕೆಯಾಯಿತು. ಐದು ವರ್ಷದಲ್ಲಿ 1600 ಕೋಟಿ ಸಾಲ ನೀಡಲಾಯಿತು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಲಾಯಿತು. ಶಾಸಕರಾದರೂ ರಾಜಕೀಯ ಹಸ್ತಕ್ಷೇಪಕ್ಕೆ ಅನುವು ಮಾಡಿಕೊಡದೆ ಎಂಸಿಡಿಸಿಸಿ ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಿದರು. ಇದು ಕಿರಿಯ ಸಾಧಕನ ಹಿರಿದಾದ ಸಾಧನೆ.

ಜನ್ಮದಿನದ ವಿಶೇಷ

ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಜಿ.ಟಿ.ದೇವೇಗೌಡರು ಹಾಗೂ ಹಿರಿಯ ಸಹಕಾರಿ ಶ್ರೀಮತಿ ಲಲಿತಾ ದಂಪತಿ ಪುತ್ರ ಜಿ.ಡಿ.ಹರೀಶ್‌ಗೌಡರು. ತಂದೆ–ತಾಯಿ ನಾಮಬಲದ ಜೊತೆಗೆ ಸ್ವಂತ ಪರಿಶ್ರಮ, ಜನಾನುರಾಗಿ ಹಾಗೂ ಸೇವಾ ಮನೋ ಭಾವದಿಂದ ರಾಜಕೀಯ ಹಾಗೂ ಸಹಕಾರ ಕ್ಷೇತ್ರಗಳಲ್ಲಿ ಸಾಧಿಸುವ ಮೂಲಕ ಯುವ ಸಮುದಾಯಕ್ಕೆ ಸ್ಫೂರ್ತಿಯಾಗಿದ್ದಾರೆ ಎನ್ನುವುದು ಹಲವರ ಅಭಿಪ್ರಾಯ. ಹಾಗಾಗಿ ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಬಾಲ್ಯ, ಶಿಕ್ಷಣ, ರಾಜಕೀಯ ಹಾಗೂ ಸಹಕಾರ ಕ್ಷೇತ್ರದ ಪ್ರಯಾಣದ ಸಂಕ್ಷಿಪ್ತ ಮಾಹಿತಿ ನಮ್ಮ ಓದುಗರಿಗಾಗಿ;

ಬಾಲ್ಯ–ಶಿಕ್ಷಣ: ಮೈಸೂರು ತಾಲೂಕು, ಇಲವಾಲ ಸಮೀಪದ ಗುಂಗ್ರಾಲ್ ಛತ್ರದಲ್ಲಿ 1987ರ ಜ.31ರಂದು ಜನಿಸಿದ ಜಿ.ಡಿ.ಹರೀಶ್‌ಗೌಡರು, ಎಲ್ಲರಂತೆ ಕುಟುಂಬದವರು, ಸಂಬಂಧಿಗಳು, ಸ್ನೇಹಿತರೊಂದಿಗೆ ಬಾಲ್ಯ ಕಳೆದು ನಲ್ಮೆಯಿಂದ ಬೆಳೆದವರು. ಎಲ್ಲಾ ಮಕ್ಕಳಂತೆಯೇ ಶಾಲಾ ವಾಹನದಲ್ಲೇ ಮೈಸೂರಿಗೆ ಓಡಾಡಿದ್ದಾರೆ. ಸೇಂಟ್ ಜೋಸೆಫ್ ಹಾಗೂ ಮರಿಮಲ್ಲಪ್ಪ ಶಾಲೆಯಲ್ಲಿ ಶಾಲಾ ಶಿಕ್ಷಣ, ಮಹಾಜನ ಪಿಯು ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಎನ್‌ಐಇ ಸಂಸ್ಥೆಯಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವಿ ಪೂರೈಸಿದರು. ಬಳಿಕ ವಿದೇಶದಲ್ಲೂ ಉನ್ನತ ವ್ಯಾಸಂಗ ಮಾಡಿದವರು.

ಉದ್ಯಮಿಯಾಗುವ ಕನಸಿತ್ತು: ಪೋಷಕರಿಬ್ಬರೂ ಸಹಕಾರ ಮತ್ತು ರಾಜಕಾರಣದ ಮೂಲಕ ಸಾರ್ವಜನಿಕ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರೂ ಜಿ.ಡಿ.ಹರೀಶ್‌ಗೌಡರಿಗೆ ಮಾತ್ರ ಈ ಬಗ್ಗೆ ಹೆಚ್ಚು ಆಸಕ್ತಿ ಇರಲಿಲ್ಲ. ಶಿಕ್ಷಣದ ಬಳಿಕ ಸ್ವಂತ ಉದ್ದಿಮೆ ಸ್ಥಾಪಿಸಿ, ಯುವ ಜನತೆಗೆ ಉದ್ಯೋಗ ಕಲ್ಪಿಸುವುದರ ಜೊತೆಗೆ ಯಶಸ್ವಿ ಉದ್ಯಮಿಯಾಗಬೇಕು ಎಂಬ ಕನಸಿತ್ತು. ಆದರೆ ಆ ಒಂದು ಚುನಾವಣೆ ಬದುಕಿನ ದಿಕ್ಕನ್ನೇ ಬದಲಿಸಿತು ಎಂದು ಅವರೇ ಹಲವು ಬಾರಿ ಹೇಳಿಕೊಂಡಿದ್ದಾರೆ.

ರಾಜಕಾರಣ ಪ್ರವೇಶ: ರಾಜಕಾರಣದಿಂದ ದೂರವಿದ್ದ ಹರೀಶ್‌ಗೌಡರು, ಇಂಜಿನಿಯರಿಂಗ್ ಪದವಿ ನಂತರ ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್‌ಗೆ ಹೋಗಿದ್ದರು. ಆದರೆ 2010ರಲ್ಲಿ ನಡೆದ ಮೈಸೂರು ಜಿಲ್ಲಾ ಪಂಚಾಯ್ತಿ ಚುನಾವಣೆ ಅವರ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿತು. ಆ ಚುನಾವಣೆಯಲ್ಲಿ ಹುಣಸೂರು ತಾಲೂಕು ಹನಗೋಡು ಜಿಪಂ ಕ್ಷೇತ್ರದಿಂದ ಅವರ ತಾಯಿ ಲಲಿತಾ ಅವರು ಸ್ಪರ್ಧಿಸಿದ್ದರಿಂದ ಅನಿವಾರ್ಯವಾಗಿ ಇಂಗ್ಲೆಂಡ್‌ನಿಂದ ವಾಪಸ್ಸಾಗಿ ತಾಯಿ ಪರ ಪ್ರಚಾರ ಕ್ಕಿಳಿದಿದ್ದರು. ಆ ವೇಳೆ ಜನರೊಂದಿಗಿನ ಒಡನಾಟ ಮತ್ತಷ್ಟು ಗಟ್ಟಿಯಾಯಿತು. ಜನರ ಪ್ರೀತಿ–ವಿಶ್ವಾಸ ಹರೀಶ್‌ಗೌಡರನ್ನು ಇಲ್ಲಿಯೇ ಬಂಧಿಸಿತು. ಆಗಿನಿಂದ ತಂದೆ–ತಾಯಿಯೊಂದಿಗೆ ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯರಾದರು. ಹುಣಸೂರು ಹಾಗೂ ಚಾಮುಂಡೇಶ್ವರಿ ಕ್ಷೇತ್ರಗಳಲ್ಲಿ ದಶಕದಿಂದ ಕೆಲಸ ಮಾಡಿದರು. ಹಲವು ಚುನಾವಣೆಗಳಲ್ಲಿ ಹರೀಶ್‌ಗೌಡರ ಸ್ಪರ್ಧೆಗೆ ಜನ ಒತ್ತಾಯಿಸಿದ್ದರಾದರೂ ಕೆಲವೊಂದು ಕಾರಣಕ್ಕೆ ಟಿಕೆಟ್ ಕೈತಪ್ಪಿತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚುನಾವಣಾ ರಾಜಕೀಯಕ್ಕೆ ಅಡಿಯಿಟ್ಟರು. ಹುಣಸೂರು ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, 94,666 ಮತಗಳೊಂದಿಗೆ ಗೆಲುವು ಸಾಧಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ಪರಿಶ್ರಮ: ರಾಜಕೀಯ ಹಾಗೂ ಸಹಕಾರ ಕ್ಷೇತ್ರಕ್ಕೆ ಹೆಜ್ಜೆ ಇಟ್ಟು ಹುಣಸೂರು ತಾಲೂಕಿನ ಅಭಿವೃದ್ಧಿಗಾಗಿ ಜಿ.ಡಿ.ಹರೀಶ್‌ಗೌಡರು ಶ್ರಮಿಸುತ್ತಿದ್ದಾರೆ. ಹುಣಸೂರು ಎಲ್ಲಾ ಧರ್ಮ, ಜಾತಿಗಳ ಜನರಿರುವ ವಿಶೇಷ ಕ್ಷೇತ್ರ ಶಾಸಕರಾದ ಮೇಲೆ ಕ್ಷೇತ್ರದ ಸಂಪೂರ್ಣ ಹೊಣೆ ಇವರ ಹೆಗಲೇರಿದೆ. ನಿರಂತರವಾಗಿ ಜನರೊಟ್ಟಿಗಿದ್ದ ಸಮಸ್ಯೆಗಳ ಪರಿಹಾರಕ್ಕೆ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳ ಜೊತೆಗೆ ಆಶ್ರಯ ಬಡಾವಣೆಗಳ ನಿರ್ಮಾಣ, ಬಡವರಿಗೆ ನಿವೇಶನ ಹಾಗೂ ಮನೆ ಹಂಚಿಕೆ, ಕಾಲುವೆ, ಏರಿ, ರಸ್ತೆಗಳ ದುರಸ್ತಿ ಸೇರಿದಂತೆ ಆದ್ಯತೆಯ ಯೋಜನೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಮಟ್ಟದಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ. ಆಶ್ರಯ ಬಡಾವಣೆ, ನಿವೇಶನ ಕಲ್ಪಿಸುವ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಿ, ಸರ್ವೆ ನಡೆಸಿ, ಒತ್ತುವರಿ ತೆರವಿಗೂ ನಿರ್ದೇಶನ ನೀಡಿದ್ದಾರೆ. ಒಟ್ಟಾರೆ ಹುಣಸೂರು ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿ ಆಶಯದೊಂದಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ.

ಉತ್ತಮ ಸಂಘಟಕ: ಜಿ.ಡಿ.ಹರೀಶ್‌ಗೌಡರು ಆಕಸ್ಮಿಕವಾಗಿ ರಾಜಕೀಯ ಹಾಗೂ ಸಹಕಾರ ಕ್ಷೇತ್ರಕ್ಕೆ ಪ್ರವೇಶಿಸಿದರೂ ಉತ್ತಮ ಸಂಘಟಕರಾಗಿ ಹಂತ ಹಂತವಾಗಿ ಬೆಳೆದು ಬಂದಿರುವುದು ಗಮನಾರ್ಹ. 2010ರಲ್ಲಿ ಜಿಪಂ ಚುನಾವಣಾ ಪ್ರಚಾರದ ಮೂಲಕ ರಾಜಕೀಯ ಹಾಗೂ 2013ರಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ನಿರ್ದೇಶಕನಾಗುವ ಮೂಲಕ ಸಹಕಾರ ಕ್ಷೇತ್ರದಲ್ಲಿ ತಳಮಟ್ಟದಿಂದ ಪ್ರಯಾಣ ಆರಂಭಿಸಿದ ಅವರು ಜನರೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಈ ಕಾರಣದಿಂದಲೇ ಕಳೆದ ಲೋಕಸಭಾ ಚುನಾವಣೆ ಹಾಗೂ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷದ ಪರವಾಗಿ ಪ್ರಮುಖರೊಂದಿಗೆ ಕೆಲಸ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಟಿ.ಎಸ್. ರವಿಶಂಕರ್
ನಿಧನ : 27-01-2025
ನಿಕಟಪೂರ್ವ ಅಧ್ಯಕ್ಷರು
ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ

ಮೃತರ ಆತ್ಮಕ್ಕೆ ಶಾಂತಿ ಹಾಗೂ ಬಂಧುವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಹಾಗೂ ನಿರ್ದೇಶಕ ಮಂಡಳಿ ಸದಸ್ಯರು
ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘ
J.L.B ರಸ್ತೆ, ಚಾಮುಂಡಿಪುರಂ, ಮೈಸೂರು

PUBLIC NOTICE

Under the instructions of my client, M/s. Prominence India Ventures, Having its registered office at No.101, Divya Comforts, SRK Garden, Jayanagar, Bangalore-560041, Karnataka. Represented by its Managing Partner Mr. Aman Ahmed S/o Naveed Ahmed, aged 24 years, is purchasing / developing the schedule property from the current owners of the scheduled property, namely: Afsha Nayeem Aged about 52 years, Misba Habib aged about 32 years, and Abdul Kareem Khan aged about 30 years, C/o Mr. Habeeb Ulla Khan, All are residing at No. 857/C, 14thcross, 2ndStage, Rajivnagar, Mysuru 570019, to Jointly develop the schedule property for business purposes. If any person has any kind of Right, Title, interest, objection, claim or Enforceable charge over the schedule property or to the proposed Sale by them, they may lodge their claim/objection with the undersigned within 21 days from the notification with supporting documents. Due failing which my client claims / charges / objections whatsoever from whomsoever. Any claims / objections received after the stipulation period and the same will be ignored.

SCHEDULE

All the piece and parcel of site property bearing No. 39/1, situated at Devanur Village, Kasba Hobli, Mysuru Taluk, Bounded by: East by : Remaining Land of, Sy. No. 39/1, West by : MUDA road , Northby :Remaining Land of Sy.No.39/1, Southby :Government Road to N.R.Mohalla and Rajivnagar.

Sd/- **MUDASSIRALIKHAN,** ADVOCATE,
#710 HIG, 2nd stage, Alimiya Road,
Rajiv Nagar, Mysuru, **Ph.9846449854**
(Client No 9886349231)

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಜನನ: 12-10-1971

ಶ್ರೀ ಕೃಷ್ಣ ರವರು

ನಿಧನ: 22-01-2025

ದಿನಾಂಕ: 22-01-2025ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ **ಉತ್ತರ ಕ್ರಿಯಾದಿ ಕಾರ್ಯವನ್ನು** ದಿನಾಂಕ: 01-02-2025 ನೇ ಶನಿವಾರ ಬೆಳಿಗ್ಗೆ 11:30 ಗಂಟೆಗೆ
ಸ್ಥಳ : ಹೋಟೆಲ್ ಕಲ್ಯಾಣಿ ಪಕ್ಕ, ರಿಂಗ್ ರಸ್ತೆ, ಹೆಬ್ಬಾಳ್, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ.
ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
"ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಆಗಮಿಸಬೇಕಾಗಿ ಕೋರುತ್ತೇವೆ".

ಹರಿಕಥೆ: ರಾತ್ರಿ 7.00 ಗಂಟೆಗೆ | ಭೋಜನ: ಮಧ್ಯಾಹ್ನ 1.00 ಗಂಟೆಗೆ

ದುಃಖತಪ್ತರು: ತಾಯಿ ಶ್ರೀಮತಿ ಸರೋಜಮ್ಮ, ಧರ್ಮಪತ್ನಿ ಶ್ರೀಮತಿ ಸುಧಾ, ಮಕ್ಕಳಾದ ಕು.ಸವ್ಯ, ಬಿ. ಸತ್ಯನಾರಾಯಣ, ಅಕ್ಕ, ಚಿಕ್ಕಮ್ಮ, ಅಣ್ಣಂದಿರು ಮತ್ತು ಮಕ್ಕಳು, ಕುಟುಂಬವರ್ಗದವರು ಹಾಗೂ ಮಂಚೇಗೌಡನಕೊಪ್ಪಲು ಗ್ರಾಮಸ್ಥರು ಹಾಗೂ ಬಂಧುಮಿತ್ರರು

21ನೇ ವರ್ಷದ ಪುಣ್ಯಸ್ಮರಣೆ



ಕೃಷ್ಣೇಗೌಡ (ಆಟೋ ಕೃಷ್ಣಪ್ಪ)
ಪಡುವಾರಹಳ್ಳಿ
ನಿಮ್ಮ ನೆನಪಿನಲ್ಲಿ ಮಗಳು ನಾಗಲಕ್ಷ್ಮಿ, ಹೆಂಡತಿ ಸುಜಾತ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಲೇಟ್ ಶಿವಕುಮಾರ ಸ್ವಾಮಿ ಎನ್ ರವರ ವಾರಸುದಾರರಾದ 1] ಶ್ರೀಮತಿ ಚಿನ್ಮಯೀ ರಾಹುಲ್ ಕೋಂ ಲೇಟ್ ರಾಹುಲ್, 2] ಶ್ರೀಮತಿ ಪಾವನ T.E. ಕೋಂ ಲೇಟ್ ನೂತನ್‌ಕುಮಾರ್ ಎಸ್ ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ನಗರ, ನಜರ್‌ಬಾದ್ ಮೊಹಲ್ಲಾ, ಟಿ.ಎನ್. ಪುರ ರಸ್ತೆ, 2ನೇ ಹಂತ,ಸಿದ್ಧಾರ್ಥ ಬಡಾವಣೆಯಲ್ಲಿರುವ ಡೋರ್ ನಂ. 313, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟ ಸ್ವತ್ತಿನ ಸಂಖ್ಯೆ 63-3-572-48ಬಿ, ಸ್ವತ್ತಿನ ವಿಸ್ತೀರ್ಣ: ಪೂರ್ವ-ಪಶ್ಚಿಮ: 60 ಅಡಿಗಳು, ಉತ್ತರ-ದಕ್ಷಿಣ: 45 ಅಡಿಗಳು. ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 306, ಉತ್ತರಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 314 ಮತ್ತು ದಕ್ಷಿಣಕ್ಕೆ: ಖಾಸಗಿ ಸ್ವತ್ತಿನ ಸಂಖ್ಯೆ 312.

ಸಹಿ/- ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ,
ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com



ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಲೇಟ್.ಡಿ.ಎನ್.ವೆಂಕಟ ನರಸಿಂಹ ರಾವ್ ರವರ ಧರ್ಮಪತ್ನಿ ಶ್ರೀಮತಿ. ಸೀತಾ ಲಕ್ಷ್ಮಿ ರವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಮೈಸೂರು ಸಿಟಿ, ಸರಸ್ವತಿಪುರಂ, ಕಾಮಾಕ್ಷಿ ಆಸ್ಪತ್ರೆ ರಸ್ತೆ, 18ನೇ ಮೇನ್, ಮನೆ ಸಂಖ್ಯೆ.4 ರಲ್ಲಿ ವಾಸವಾಗಿರುವ ಶ್ರೀ. ಸತೀಶ್ ರಾಮಣ್ಣ ರವರ ಧರ್ಮಪತ್ನಿ ಶ್ರೀಮತಿ.ಸುಪ್ರಿಯ .ಎ. ಉರುಫ್ ಸುಪ್ರಿಯ ಅಂಬುಗ ರವರಿಂದ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಉದ್ದೇಶಿಸಿರುತ್ತಾರೆ.

ಸದರಿ ಸ್ವತ್ತಿನಲ್ಲಿ ಯಾರಿಗಾದರೂ ಯಾವುದೇ ಹಕ್ಕಾಗಲೀ, ಹಿತಾಸಕ್ತಿಯಾಗಲೀ ಇದ್ದ ಪಕ್ಷದಲ್ಲಿ ಮತ್ತು ಸದರಿ ಸ್ವತ್ತಿನ ಕ್ರಯದ ವಿಚಾರದಲ್ಲಿ ಯಾವುದಾದರೂ ಆಕ್ಷೇಪಣೆ ವಗೈರೆಗಳಿದ್ದಲ್ಲಿ ತಮ್ಮಗಳ ಹಿತಾಸಕ್ತಿ ಮತ್ತು ಆಕ್ಷೇಪಣೆಗಳನ್ನು ಪೂರಕವಾದ ದಾಖಲಾತಿಗಳ ಮತ್ತು ಮಾಹಿತಿಗಳೊಡನೆ ನಮ್ಮ ಕಕಿದಾರರಿಗಾಗಲೀ, ಈ ಆಫೀಸಿಗಾಗಲೀ ಲಿಖಿತ ಮೂಲಕವಾಗಿ ಈ ತಿಳುವಳಿಕೆ ನೋಟೀಸು ಪ್ರಚೂರವಾದ 7(ಏಳು) ದಿನಗಳೊಳಗೆ ತಿಳಿಯಪಡಿಸತಕ್ಕದ್ದು. ಅಂತಹ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸದ ಪಕ್ಷದಲ್ಲಿ ಸದರಿ ಸ್ವತ್ತು ಎಲ್ಲಾ ವಿಧವಾದ ವಿಲ್ಲಂಗುಗಳಿಗೂ ಹೊರತಾಗಿರುತ್ತೆಂದು ನಮ್ಮ ಕಕ್ಷಿದಾರರು ತೀರ್ಮಾನಿಸಿ ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆಯುವ ವಿಚಾರದಲ್ಲಿ ಸೂಕ್ತ ಕ್ರಮವನ್ನು ಕೈಗೊಳ್ಳುವವರಾಗಿರುತ್ತಾರೆ. ತದಾ, ನಂತರ ಬರಬಹುದಾದ ಯಾವ ಆಕ್ಷೇಪಣೆ ಗಳು ನಮ್ಮ ಕಕ್ಷಿಗಾರರನ್ನು ಬದ್ಧಪಡಿಸುವುದಿಲ್ಲವೆಂದು ಸಂಬಂಧಪಟ್ಟವರಿಗೆಲ್ಲ ಈ ಮೂಲಕ ಶೃತಪಡಿಸಿರುತ್ತೆ .

ಷೆಡ್ಯೂಲ್ ಎ: ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಜಯಲಕ್ಷ್ಮಿಪುರಂ ಬಡಾವಣೆ, ದೇವಸ್ಥಾನದ ರಸ್ತೆ ಬ್ಲಾಕ್-4, ಸ್ವತ್ತಿನ ಸಂಖ್ಯೆ 30 ಮತ್ತು 30ಎ ಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ 30-ಬಿ ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸ್ವತ್ತಿನ ಸಂಖ್ಯೆ 29, ದಕ್ಷಿಣಕ್ಕೆ : ರಸ್ತೆ, ವಿಸ್ತೀರ್ಣ 8649 ಚದರಡಿ.

ಷೆಡ್ಯೂಲ್ ಬಿ: ಅಪಾರ್ಟ್‌ಮೆಂಟ್ 'ಪ್ರೀಮಿಯರ್ ರೇಡಿಯೆಂಟ್' ನೆಲ ಅಂತಸ್ತಿನಲ್ಲಿರುವ ಫ್ಲಾಟ್ ನಂ. ಜಿ-3 ಕ್ಕೆ ಚಕ್ಕುಬಂದಿ : ಪೂರ್ವಕ್ಕೆ : ಕಾರಿಡಾರ್, ಪಶ್ಚಿಮಕ್ಕೆ : ಸೆಟ್ ಬ್ಯಾಕ್ ಉತ್ತರಕ್ಕೆ : ಸೆಟ್ ಬ್ಯಾಕ್ ಮತ್ತು ದಕ್ಷಿಣಕ್ಕೆ : ಸೆಟ್ ಬ್ಯಾಕ್, 1565.65 ಚದರಡಿ ಆವರಣದಲ್ಲಿ ಕಟ್ಟಿರುವ ಸ್ವತ್ತು. ಸದರಿ ಸ್ವತ್ತು ಮತ್ತು ನೆಲದಲ್ಲಿನ ಅವಿಭಜಿತ 978.53 ಚದರಡಿ ಹಕ್ಕು.

Sd/- A.N. Puttaswamygowda,
B.A.,LL.B. ADVOCATE & NOTARY
#324/1, D. Subbaiah Road,
Mysuru-570 004
Mobile: 96205 62745

ದಿನಾಂಕ: 30.01.2025

kotak Kotak Mahindra Bank

Notice

ನಂ. 150 1 ಮಹದೇಶ್ವರ ದೇವಸ್ಥಾನ ರಸ್ತೆ, ಕುಂಬಾರಕೊಪ್ಪಲು ಮೈಸೂರು-570016, ಈ ವಿಳಾಸವನ್ನು ಹೊಂದಿರುವ ಶ್ರೀ ಎಲ್ ಕಿರಣ್ ರಾಜು ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿರುತ್ತಾರೆ. ಕಳೆದ 9 ಹಣಕಾಸು ವರ್ಷಗಳು ಅಂದರೆ, 2016-17, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ ಶ್ರೀ ಎಲ್ ಕಿರಣ್ ರಾಜು ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೇ ವಾಪಾಸ್ ಬಂದಿರುತ್ತವೆ ಮತ್ತು ಅವರನ್ನು ಸಹ ಸಾಧ್ಯವಾಗಿರುವುದಿಲ್ಲ. ಈ ಪ್ರಕಟಣೆಯ ಹೊರತಾಗಿಯೂ, 2016-17, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025 ಈ ಎಲ್ಲಾ ಹಣಕಾಸು ವರ್ಷಗಳ ಲಾಕರ್ ಬಾಡಿಗೆಯನ್ನು ಶ್ರೀ ಎಲ್ ಕಿರಣ್ ರಾಜು ರವರಿಂದ ಸದರಿ ಲಾಕರಿನ ಬಾಡಿಗೆ ಪಾವತಿಯಾಗದ ಪಕ್ಷದಲ್ಲಿ, 30 ನೇ ಏಪ್ರಿಲ್, 2025 ರಂದು ಬೆಳಿಗ್ಗೆ 11.00ಕ್ಕೆ ಸದರಿ ಲಾಕರ್‌ನ ಬೀಗ ಒಡೆದು ತೆರೆಯಲಾಗುವುದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ನಂ. 748, 14 ನೇ ಎಸ್ ಜಿಎಂ ರಸ್ತೆ, ಎನ್ ಪಿಸಿ ರೆಸಿಡೆನ್ಸಿ, ವಿಜಯನಗರ 2ನೇ ಹಂತ, ಮೈಸೂರು-570017, ಈ ವಿಳಾಸವನ್ನು ಹೊಂದಿರುವ ಶ್ರೀ ಎಂ ಚಂದ್ರನಾಥ್ ಮತ್ತು ಬಿ ವಿ ಸುಮಿತ್ರ ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿರುತ್ತಾರೆ. ಕಳೆದ 8 ಹಣಕಾಸು ವರ್ಷಗಳು ಅಂದರೆ, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ ಶ್ರೀ ಎಂ ಚಂದ್ರನಾಥ್ ಮತ್ತು ಬಿ ವಿ ಸುಮಿತ್ರ ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೇ ವಾಪಾಸ್ ಬಂದಿರುತ್ತವೆ ಮತ್ತು ಅವರನ್ನು ಸಹ ಸಾಧ್ಯವಾಗಿರುವುದಿಲ್ಲ. ಈ ಪ್ರಕಟಣೆಯ ಹೊರತಾಗಿಯೂ, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025 ಈ ಎಲ್ಲಾ ಹಣಕಾಸು ವರ್ಷಗಳ ಲಾಕರ್ ಬಾಡಿಗೆಯನ್ನು ಶ್ರೀ ಎಂ ಚಂದ್ರನಾಥ್ ಮತ್ತು ಬಿ ವಿ ಸುಮಿತ್ರರವರಿಂದ ಸದರಿ ಲಾಕರಿನ ಬಾಡಿಗೆ ಪಾವತಿಯಾಗದ ಪಕ್ಷದಲ್ಲಿ, 30 ನೇ ಏಪ್ರಿಲ್, 2025 ರಂದು ಬೆಳಿಗ್ಗೆ 11.00ಕ್ಕೆ ಸದರಿ ಲಾಕರ್‌ನ ಬೀಗ ಒಡೆದು ತೆರೆಯಲಾಗುವುದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

ನಂ. 686 ಬನ್ನಿಮಂಟಪ್ ಡಿ.ಲೇಔಟ್ ಶಿವರಾತ್ರಿಸ್ವಾನಗರ ಮೈಸೂರು -570015, ಈ ವಿಳಾಸವನ್ನು ಹೊಂದಿರುವ ಶ್ರೀಮತಿ ಯಶೋದಾ ಮತ್ತು ಕಿರಣ್ ಕುಮಾರ್ ಹೆಚ್ ಎಸ್ ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿರುತ್ತಾರೆ. ಕಳೆದ 9 ಹಣಕಾಸು ವರ್ಷಗಳು ಅಂದರೆ, 2016-17, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ ಶ್ರೀಮತಿ ಯಶೋದಾ ಮತ್ತು ಕಿರಣ್ ಕುಮಾರ್ ಹೆಚ್ ಎಸ್ ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೇ ವಾಪಾಸ್ ಬಂದಿರುತ್ತವೆ ಮತ್ತು ಅವರನ್ನು ಸಹ ಸಾಧ್ಯವಾಗಿರುವುದಿಲ್ಲ. ಈ ಪ್ರಕಟಣೆಯ ಹೊರತಾಗಿಯೂ, 2016-17, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025 ಈ ಎಲ್ಲಾ ಹಣಕಾಸು ವರ್ಷಗಳ ಲಾಕರ್ ಬಾಡಿಗೆಯನ್ನು ಶ್ರೀಮತಿ ಯಶೋದಾ ಮತ್ತು ಕಿರಣ್ ಕುಮಾರ್ ಹೆಚ್ ಎಸ್‌ರವರಿಂದ ಸದರಿ ಲಾಕರಿನ ಬಾಡಿಗೆ ಪಾವತಿಯಾಗದ ಪಕ್ಷದಲ್ಲಿ, 30 ನೇ ಏಪ್ರಿಲ್, 2025 ರಂದು ಬೆಳಿಗ್ಗೆ 11.00ಕ್ಕೆ ಸದರಿ ಲಾಕರ್‌ನ ಬೀಗ ಒಡೆದು ತೆರೆಯಲಾಗುವುದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

W-O ಕೆ.ಇ.ಶಿವಪ್ಪ, ನಂ.359, ಲಕ್ಷನಾಯಕ ನಗರ, ಹೆಬ್ಬಾಳ ಮುಖ್ಯ ರಸ್ತೆ, ಮೈಸೂರು-570016, ಈ ವಿಳಾಸವನ್ನು ಹೊಂದಿರುವ ಶ್ರೀಮತಿ ನಾಗರತ್ನಮ್ಮ ಎಂಬುವವರು ನಂ. 44 ರಾಮಸ್ವಾಮಿ ಕಾಂಪ್ಲೆಕ್ಸ್ KRS ರಸ್ತೆ ಮೈಸೂರು-570016, ಈ ವಿಳಾಸದಲ್ಲಿರುವ ಕೊಟಕ್ ಮಹೀಂದ್ರಾ ಬ್ಯಾಂಕ್ ಲಿಮಿಟೆಡ್‌ನ ಮಾರೇಗೌಡನಹಳ್ಳಿ ಶಾಖೆಯಲ್ಲಿ ಲಾಕರ್‌ನ್ನು ಬಾಡಿಗೆಗೆ ಪಡೆದಿರುತ್ತಾರೆ. ಕಳೆದ 8 ಹಣಕಾಸು ವರ್ಷಗಳು ಅಂದರೆ, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025ನೇ ಸಾಲಿನಿಂದಲೂ ಸದರಿ ಲಾಕರಿನ ಬಾಡಿಗೆ ಪಾವತಿಯು ಬಾಕಿ ಇರುತ್ತದೆ. ಲಾಕರ್ ಬಾಡಿಗೆಯನ್ನು ಪಾವತಿಸುವಂತೆ ಶ್ರೀಮತಿ ನಾಗರತ್ನಮ್ಮ ಅವರಿಗೆ ಕಳುಹಿಸಲಾದ ಎಲ್ಲಾ 3 ಪತ್ರಗಳು ಬಟವಾಡೆಗೊಳ್ಳದೇ ವಾಪಾಸ್ ಬಂದಿರುತ್ತವೆ ಮತ್ತು ಅವರನ್ನು ಸಹ ಸಾಧ್ಯವಾಗಿರುವುದಿಲ್ಲ. ಈ ಪ್ರಕಟಣೆಯ ಹೊರತಾಗಿಯೂ, 2017-18, 2018-19, 2019-20, 2020-2021, 2021-2022 & 2022-2023 & 2023-2024 & 2024-2025 ಈ ಎಲ್ಲಾ ಹಣಕಾಸು ವರ್ಷಗಳ ಲಾಕರ್ ಬಾಡಿಗೆಯನ್ನು ಶ್ರೀಮತಿ ನಾಗರತ್ನಮ್ಮ ರವರಿಂದ ಸದರಿ ಲಾಕರಿನ ಬಾಡಿಗೆ ಪಾವತಿಯಾಗದ ಪಕ್ಷದಲ್ಲಿ, 30 ನೇ ಏಪ್ರಿಲ್, 2025 ರಂದು ಬೆಳಿಗ್ಗೆ 11.00ಕ್ಕೆ ಸದರಿ ಲಾಕರ್‌ನ ಬೀಗ ಒಡೆದು ತೆರೆಯಲಾಗುವುದು ಎಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

45 ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ಶುಕ್ರವಾರ 31 ಜನವರಿ 2025

ಮೂರನೇ ಪುಟದಿಂದ

ಸಂಪುಟ ಅನುಮೋದನೆ

ಕರ್ನಾಟಕವನ್ನು ಪಾರು ಮಾಡಲು ಜಲ ಭದ್ರತೆಗಾಗಿ 5,000 ಕೋಟಿ ರೂಗಳ ಬೃಹತ್ ಯೋಜನೆಗೆ ಸಂಪುಟ ಹಸಿರು ನಿಶಾನೆ ತೋರಿದೆ. ವಿಶ್ವಬ್ಯಾಂಕ್ ನಿಂದ 3,500 ಕೋಟಿ ರೂ ಸಾಲ ಪಡೆದು ಅದಕ್ಕೆ ಸರಿಸಮನಾಗಿ ರಾಜ್ಯ ಸರ್ಕಾರ 1,500 ಕೋಟಿ ರೂ. ಒದಗಿಸಿ ಯೋಜನೆ ಕೈಗೆತ್ತಿಕೊಳ್ಳಲು ನಿರ್ಧರಿಸಿದೆ. ಮಳೆನೀರಿನಿಂದಲ್ಲೆ ಹೆಚ್ಚುವರಿಯಾಗಿ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ತಡೆದು ಅಣೆಕಟ್ಟೆ, ಚೆಕ್‌ಡ್ಯಾಂ ನಿರ್ಮಾಣ ಮತ್ತು ಕೆರೆ ತುಂಬಿಸುವುದು ಇದರ ಉದ್ದೇಶವಾಗಿದೆ.

ಬೆಂಗಳೂರು ಅರಮನೆ ಮೈದಾನ ಜಾಗ ಬಳಕೆ ಮತ್ತು ನಿಯಂತ್ರಣಕ್ಕೆ ಕಳೆದ ಸಂಪುಟ ಸಭೆಯಲ್ಲಿ ಹೊರಡಿಸಿದ ಸುಗ್ರೀವಾಜ್ಞೆ ಅನುಷ್ಠಾನಕ್ಕೆ ಸಂಪುಟ ಸಮ್ಮತಿಸಿದೆ.

ರಾಜಧಾನಿ ಹೊರವಲಯದ ಹೆಸರಘಟ್ಟದ 5,678 ಎಕರೆ ಪ್ರದೇಶವನ್ನು ವನ್ಯ ಜೀವಿ ಸಂರಕ್ಷಣಾ ನಿಯಮದಡಿ ಮೀಸಲು ಪ್ರದೇಶ ಎಂದು ಘೋಷಣೆ ಮಾಡಲಾಗಿದೆ.

ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 19 ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಾಲೇಜು ಕಟ್ಟಡಗಳನ್ನು 304 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಸರ್ಕಾರದಿಂದ ನೇರವಾಗಿ ಮತ್ತು ಪರೋಕ್ಷವಾಗಿ ನೇಮಕಗೊಂಡಿರುವ ವಿವಿಧ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತಾ ವ್ಯವಸ್ಥೆ ಜಾರಿಗೆ ತರಲು ತೀರ್ಮಾನಿಸಿದೆ.

ಸಿಎಂ ನೇತೃತ್ವದ ಉನ್ನತ ಸಭೆ ನಿರ್ಧಾರ

ಲೋಪ ದೋಷಗಳನ್ನು ಹೊಂದಿರಬಾರದು. ಸಾಲಗಾರರು ಎದುರಿಸುತ್ತಿರುವ ಕಿರುಕುಳವನ್ನು ತಪ್ಪಿಸಲು ಹಾಗೂ ಸಾಲ ನೀಡಿದವರು ಬಲವಂತದ ವಸೂಲಿ ಮಾಡುವುದನ್ನು ನಿಯಂತ್ರಿಸುವ ಉದ್ದೇಶದಿಂದ ಬಲಿಷ್ಠ ಕಾಯ್ದೆ ರಚಿಸಲಾಗುತ್ತಿದೆ. ಇದರಿಂದ ಕಾಯ್ದೆಯಲ್ಲಿ ಪೊಲೀಸರಿಗೆ ಹೆಚ್ಚಿನ ಅಧಿಕಾರ ದೊರೆಯಲಿದೆ. ಒಂಬುಡ್ಸ್‌ಮನ್‌ಗಳ ನೇಮಕ ಮಾಡಲಾಗುವುದು. ಅಮಾನವೀಯವಾಗಿ ಬಲವಂತ ಸಾಲ ವಸೂಲಾತಿ ಮಾಡುವವರಿಗೆ ಜಾಮೀನುರಹಿತ ಪ್ರಕರಣ ದಾಖಲು ಸೇರಿದಂತೆ ಕಠಿಣ ಶಿಕ್ಷೆ ಹಾಗೂ ದಂಡ ವಿಧಿಸುವ ಅವಕಾಶ ಸಿಗಲಿದೆ. ನೋಂದಣಿಯಾಗದ ಲೇವಾದೇವಿಗಾರರ ಕಿರುಕುಳವನ್ನು ತಪ್ಪಿಸಲು ಕಠಿಣ ಕಾನೂನು ಜಾರಿ ಮಾಡಲಾಗುತ್ತಿದೆ. ಪ್ರಸ್ತುತ ಇರುವ ಕಾನೂನಿನಲ್ಲಿ ಮೈಕ್ರೋ ಫೈನಾನ್ಸ್‌ಗಳ ಕಿರುಕುಳ ನಿಯಂತ್ರಿಸಲು ಹಲವು ಅವಕಾಶಗಳಿವೆ. ಅದನ್ನು ಯಾಕೆ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲ. ದೂರು ದಾಖಲು ಮಾಡುವ ತನಕ ಕಾಯದೆ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಮುಖ್ಯಮಂತ್ರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಮೈಕ್ರೋ ಫೈನಾನ್ಸ್ ಹಾವಳಿಗೆ ಮತ್ತೊಂದು ಬಲಿ

ಹಣ ಕಟ್ಟುವಂತೆ ಪೀಡಿಸುವುದರಿಂದ ಎಷ್ಟೋ ಮನೆಗೆ ಬೀಗ ಹಾಕುತ್ತಿರುವುದರಿಂದ ಸಾಕಷ್ಟು ಮಂದಿ ಮರ್ಯಾದೆಗೋಸ್ಕರ ಗ್ರಾಮ ತೊರೆದಿದ್ದಾರೆ. ಇಂತಹ ಘಟನೆಗಳಿಗೆ ಸರ್ಕಾರ ಅವಕಾಶ ನೀಡಬಾರದು. ಒಂದು ವೇಳೆ ಮೈಕ್ರೋ ಫೈನಾನ್ಸ್‌ನವರ ಹಾವಳಿಗೆ ಕಡಿವಾಣ ಹಾಕದಿದ್ದರೆ ರೈತ ಸಂಘದಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಕೆ.ಎಸ್. ಮಂಜುನಾಥ್, ಗ್ರಾಪಂ ಸದಸ್ಯ ಗಿರೀಗೌಡ, ತಾಪಂ ಮಾಜಿ ಸದಸ್ಯ ಲಕ್ಷ್ಮಣಗೌಡ, ಸಂತೋಷ, ಯೋಗೇಶ್‌ಗೌಡ, ಪ್ರಭಾ, ಆರ್ದರ್, ವೆಂಕಟೇಶ್ ಸೇರಿದಂತೆ ಇನ್ನಿತರರು ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು.

ಸುತ್ತೂರು ಕುಮಾರ ಪ್ರಶಸ್ತಿ

ಪಂದ್ಯವನ್ನು ಸಮ ಬಲವೆಂದು ಘೋಷಿಸಿ, ಇಬ್ಬರೂ ಪೈಲ್ವಾನರಿಗೂ ಪಾರಿತೋಷಕ ನೀಡಲಾಯಿತು. ಉಳಿದಂತೆ ಮೈಸೂರು, ಚಾಮರಾಜನಗರ, ಹಾಸನ ಹಾಗೂ ರಾಜ್ಯದ ವಿವಿಧ ಭಾಗಗಳ ಕುಸ್ತಿಪಟುಗಳು ಪಂದ್ಯಾವಳಿಯಲ್ಲಿ ಸೆಣಸಾಡಿದರು. ಎಲ್ಲರಿಗೂ ತಲಾ 5 ನಿಮಿಷ ನಿಗದಿ ಮಾಡಿ ಕಣಕ್ಕಿಳಿಸಲಾಗಿತ್ತು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ಹಾಗೂ ಪಾರಿತೋಷಕ ನೀಡಿ ಗೌರವಿಸಲಾಯಿತು. ಕುಸ್ತಿ ಕಣ್ತುಂಬಿಕೊಳ್ಳಲು ನೆರೆದಿದ್ದ ಸಾವಿರಾರು ಜನರು ಶಿಳ್ಳೆ, ಚಪ್ಪಾಳೆ ಮೂಲಕ ಪೈಲ್ವಾನರನ್ನು ಹುರಿದುಂಬಿಸಿದರು. ಪೈಲ್ವಾನರ ಸೆಣಸಾಟದಲ್ಲಿ ಪಟ್ಟುಗಳನ್ನು ಹಾಕಿ ಗೆಲುವಿಗಾಗಿ ಹೋರಾಡಿದ್ದನ್ನು ಕಂಡು ಖುಷಿಪಟ್ಟರು.

ಪೈ.ಸಿದ್ದರಾಜು, ಪೈ.ಶಂಕರ್ ಜಾನಿ, ಹೊಸಹಳ್ಳಿ ಶಿವಣ್ಣ ಕುಸ್ತಿ ಪಂದ್ಯಾವಳಿ ತೀರ್ಪುಗಾರರಾಗಿದ್ದರು. ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್, ಶಾಸಕರಾದ ಪುಟ್ಟರಂಗಶೆಟ್ಟಿ, ಕೆ.ಹರೀಶ್‌ಗೌಡ, ಶರಣಗೌಡ ಕುಂದಾಪುರ, ಎಂಎಲ್‌ಸಿಗಳಾದ ಡಾ.ಯತೀಂದ್ರ, ಡಾ.ತಿಮ್ಮಯ್ಯ, ಬೆಂಗಳೂರು ಜಿಲ್ಲೆ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಎಸ್.ಗುರುಸ್ವಾಮಿ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಸಮಾಜ ಸೇವಕರಾದ ಪದ್ಮನಾಭರಾವ್, ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕಂಬಳೀಶ್ವರ ಮಠದ ಚೆನ್ನಬಸವ ಸ್ವಾಮೀಜಿ ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.

ಕೇಂದ್ರ ಸಂಪುಟ ಅನುಮೋದನೆ

2016ರಲ್ಲಿ 7,000 ರೂ.ಗಳಿಂದ (6ನೇ ವೇತನ ಆಯೋಗದ ಅಡಿಯಲ್ಲಿ) 18,000 ರೂ.ಗಳಿಗೆ ಹೆಚ್ಚಿಸಲಾಗಿತ್ತು.

ಇದು ನೌಕರರ ಟೇಕ್-ಹೋಮ್ ಸಂಬಳ ಅಲ್ಲ ಎಂಬುದನ್ನು ಇಲ್ಲಿ ಗಮನಿಸಬೇಕು. 18,000 ರೂ.ಗಳ ಮೂಲ ವೇತನಕ್ಕೆ ತುಟ್ಟಿ ಭತ್ಯೆ (DA), ಮನೆ ಬಾಡಿಗೆ ಭತ್ಯೆ (HRA) ಮತ್ತು ಸಾರಿಗೆ ಭತ್ಯೆ, ಇತರ ಪ್ರಯೋಜನಗಳನ್ನು ಸೇರಿಸಿದಾಗ, 7ನೇ ವೇತನ ಆಯೋಗದ ಅಡಿಯಲ್ಲಿ ಒಟ್ಟು ವೇತನ 36,020 ರೂ.ಗಳಾಗಿತ್ತು. ಪ್ರಸ್ತುತ ವರದಿಗಳು ಫಿಟ್‌ಮೆಂಟ್ ಫ್ಯಾಕ್ಟರ್ 2.86ಕ್ಕೆ ಏರಬಹುದು ಎಂದು ಸೂಚಿಸುತ್ತವೆ. ಇದು ಲೆವೆಲ್ 1ರಲ್ಲಿ ಮೂಲ ವೇತನವನ್ನು 18,000 ರೂ.ಗಳಿಂದ 51,480 ರೂ.ಗಳಿಗೆ ಹೆಚ್ಚಿಸುತ್ತದೆ. ಅದರಂತೆ ಎಲ್ಲಾ 10 ಹಂತಗಳಲ್ಲಿ ನೌಕರರು ವೇತನ ಮತ್ತು ಪಿಂಚಣಿಗಳಲ್ಲಿ ಪರಿಷ್ಕರಣೆಯನ್ನು ಕಾಣಲಿದ್ದಾರೆ.

ಶ್ರೀಮತಿ ಪಾರ್ವತಿ ಹೆಸರು ಉಲ್ಲೇಖ

ಅವರು 2024ರ ಅಕ್ಟೋಬರ್ 1ರಂದು 14 ನಿವೇಶನಗಳನ್ನು ಮುಡಾಗೆ ಹಿಂತಿರುಗಿಸಿದ್ದಾರೆಯಾದರೂ, ಈ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆಗೆ ಯತ್ನಿಸಲಾಗಿದೆ ಎಂಬುದು ತನಿಖೆ ವೇಳೆ ತಿಳಿದು ಬಂದಿದೆ. ಅಕ್ರಮ ಹಣ ವರ್ಗಾವಣೆ ಮೂಲಕ ಬಿ.ಎಂ.ಪಾರ್ವತಿ ಅವರ ಪ್ರಕರಣ ಮಾತ್ರವಲ್ಲದೆ, 1095 ನಿವೇಶನಗಳನ್ನು ಮುಡಾದಿಂದ ಹಂಚಿಕೆ ಮಾಡಲಾಗಿದೆ. ಈ ವ್ಯವಹಾರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಸ್ಥರು, ಪ್ರಭಾವಿ ವ್ಯಕ್ತಿಗಳು ಶಾಮೀಲಾಗಿದ್ದಾರೆ ಎಂಬುದು ತನಿಖೆಯಲ್ಲಿ ಗೊತ್ತಾಗಿದೆ ಎಂದು ಇಡಿ ವರದಿಯಲ್ಲಿ ತಿಳಿಸಲಾಗಿದ್ದು, ಅಕ್ರಮವಾಗಿ ಯಾರ್‍ಯಾರಿಗೆ ಯಾವ ಪ್ರಮಾಣದಲ್ಲಿ ನಿವೇಶನಗಳನ್ನು ಹಂಚಲಾಗಿದೆ ಎಂಬುದರ ಬಗ್ಗೆ ಹಾಗೂ ಮುಡಾ ಹಿಂದಿನ ಆಯುಕ್ತ ಡಿ.ಬಿ.ನಟೇಶ್ ಅವರ ಪಾತ್ರ ಏನು ಎಂಬುದರ ಬಗ್ಗೆಯೂ ವರದಿಯಲ್ಲಿ ವಿವರಿಸಲಾಗಿದೆ.

ವಾಹನ ನಿಷೇಧಿತ ವಲಯ

ಪ್ರವೇಶಕ್ಕೆ ಅನುಮತಿ ನೀಡ ಬಹುದು ಎಂದು ಅವರು ಹೇಳಿದರು.

ವಿವಿಐಪಿ ಪಾಸ್‌ಗಳು ರದ್ದು: ವಿವಿಐಪಿ ಪಾಸ್‌ಗಳನ್ನು ರದ್ದುಗೊಳಿಸಲಾಗಿದೆ. ಯಾವುದೇ ವಿಶೇಷ ಪಾಸ್ ಮೂಲಕ ವಾಹನಗಳಿಗೆ ಪ್ರವೇಶವಿಲ್ಲ. ಮಹಾಕುಂಭದ ಸುಗಮ ನಿರ್ವಹಣೆಗೆ ಪೊಲೀಸ್ ಆಡಳಿತ ವಾಹನಗಳು, ಆಂಬ್ಯುಲೆನ್ಸ್‌ಗಳು ಮತ್ತು ಸೆಕ್ಷನ್ ಮೆಷಿನ್‌ಗಳಂತಹ ಅಗತ್ಯ ಸೇವೆಗಳು ನಿರ್ಣಾಯಕವಾಗಿರುವುದರಿಂದ ಅವುಗಳ ಪ್ರವೇಶಕ್ಕೆ ಅನುಮತಿ ನೀಡಲಾಗುವುದು ಎಂದು ಮಿಶ್ರಾ ಸ್ಪಷ್ಟಪಡಿಸಿದರು.

ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಯಾತ್ರಿಕರು ಕಠಿಣ ಪರಿಸ್ಥಿತಿಯಲ್ಲಿಯೂ ವಿವಿಧ ಘಾಟ್‌ಗಳಿಗೆ ನಡೆದುಕೊಂಡು ಹೋಗುತ್ತಿರುವುದು ಕಂಡುಬಂದಿದೆ. ಹಲವರು ತಮ್ಮ ದೇಹವನ್ನು ಮುಚ್ಚಿಕೊಳ್ಳಲು ತೆಳುವಾದ ಕಂಬಳಿಗಳನ್ನು ಹೊದ್ದುಕೊಂಡಿದ್ದರು. ಆದರೆ ಕೆಲವರು ತಮ್ಮನ್ನು ಬೆಚ್ಚಗಿಡಲು ಮಾರ್ಗಗಳಲ್ಲಿ ದೀಪೋತ್ಸವ ನಡೆಯುವಲ್ಲಿ ನಿಂತುಕೊಂಡು ಹೋಗುವುದು ಕಂಡುಬಂತು.

ಉತ್ತರಪ್ರದೇಶದ ಮುಖ್ಯ ಕಾರ್ಯದರ್ಶಿ ಮನೋಜ್‌ಕುಮಾರ್ ಸಿಂಗ್ ಮತ್ತು ಪೊಲೀಸ್ ಮಹಾ ನಿರ್ದೇಶಕ ಪ್ರಶಾಂತ್ ಕುಮಾರ್ ಅವರು ಕಾಲ್ತುಳಿತದ ಬಗ್ಗೆ ವಿವರವಾದ ತನಿಖೆ ಗಾಗಿ ಇಲ್ಲಿಗೆ ಆಗಮಿಸಿದ್ದಾರೆ. ಮೇಳ ಪ್ರದೇಶದಲ್ಲಿನ ವ್ಯವಸ್ಥೆಗಳ ಬಗ್ಗೆ ಉನ್ನತ ಅಧಿಕಾರಿಗಳು ಕೂಲಂಕುಷ ಪರಿಶೀಲನೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ. ಬಸಂತ್ ಪಂಚಮಿ (ಫೆಬ್ರವರಿ 3 – ಅಮೃತ ಸ್ನಾನ) ಗಾಗಿ ಸುಗಮ ವ್ಯವಸ್ಥೆಗಳನ್ನು ಖಚಿತಪಡಿಸಿಕೊಳ್ಳಲು ಭದ್ರತೆ ಮತ್ತು ಸಾರ್ವಜನಿಕ ಅನುಕೂಲಕ್ಕೆ ಸಂಬಂಧಿಸಿದ ಪ್ರತಿಯೊಂದು ಅಂಶ ವನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಎಂದು ಅವರು ಹೇಳಿದರು.

ವ್ಯವಸ್ಥೆಗಳನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನದಲ್ಲಿ, ಉತ್ತರ ಪ್ರದೇಶ ಸರ್ಕಾರವು ಇಬ್ಬರು ಮಾಜಿ ಹಿರಿಯ ಅಧಿಕಾರಿಗಳನ್ನು ಮೇಳದ ಕರ್ತವ್ಯಕ್ಕೆ ನಿಯೋಜಿಸಲಿದೆ –2019ರ ಕುಂಭಕ್ಕಾಗಿ ಪ್ರಯಾಗ್‌ರಾಜ್‌ನ ವಿಭಾಗೀಯ ಆಯುಕ್ತರಾಗಿ ಸೇವೆ ಸಲ್ಲಿಸಿದ ಆಶಿಶ್ ಗೋಯಲ್ ಮತ್ತು ಆಗ್ರಾ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಉಪಾಧ್ಯಕ್ಷ ಭಾನು ಗೋಸ್ವಾಮಿ ಇರಲಿದ್ದಾರೆ. ಹೆಚ್ಚುವರಿಯಾಗಿ, ಕಾರ್ಯಾಚರಣೆಗಳ ಮೇಲ್ವಿಚಾರಣೆಗೆ ಐದು ವಿಶೇಷ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ. ವ್ಯವಸ್ಥೆಗಳನ್ನು ಸುಗಮಗೊಳಿಸಲು ಅವರೆಲ್ಲರೂ ಫೆಬ್ರವರಿ 12ರವರೆಗೆ ಪ್ರಯಾಗ್ ರಾಜ್‌ನಲ್ಲಿಯೇ ಇರುತ್ತಾರೆ ಎಂದು ಮುಖ್ಯಮಂತ್ರಿ ಆದಿತ್ಯನಾಥ್ ಹೇಳಿದರು.

ಹಿಂದೂ ಪಂಚಾಂಗದ ಅತ್ಯಂತ ಶುಭ ದಿನಗಳಲ್ಲಿ ಒಂದಾದ ಮೌನಿ ಅಮಾವಾಸ್ಯೆಯ ಸಂದರ್ಭದಲ್ಲಿ ಪವಿತ್ರ ಸ್ನಾನ ಮಾಡಲು ಕೋಟ್ಯಂತರ ಯಾತ್ರಿಕರು ಆಗಮಿಸಿದ್ದರಿಂದ ಮಹಾ ಕುಂಭದ ಸಂಗಮ ಪ್ರದೇಶದಲ್ಲಿ ನಿನ್ನೆ ನಸುಕಿನ ಜಾವ ಸಂಭವಿಸಿದ ಕಾಲ್ತುಳಿತದಲ್ಲಿ 30 ಜನರು ಮೃತಪಟ್ಟು 60ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಗಾಂಧೀಜಿ ವಿಚಾರಧಾರೆ ರಾಜ್ಯಾದ್ಯಂತ ತಿಳಿಸಲು 100 ಕೋಟಿ ರೂ. ಕಾರ್ಯಕ್ರಮ

ಮೈಸೂರಲ್ಲಿ ನಡೆದ 77ನೇ ಸರ್ವೋದಯ ದಿನಾಚರಣೆಯಲ್ಲಿ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್ ಮಾಹಿತಿ

● ಸಚಿವ ಹೆಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ ● ಗಾಂಧಿ ಜಯಂತಿ ಒಳಗೆ ಕಾರ್ಯಕ್ರಮ ಅನುಷ್ಠಾನಕ್ಕೆ ತಾಕೀತು ● 2035ರ ವೇಳೆಗೆ 400 ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಗುರಿ ● ಗಾಂಧಿ ಹಾದಿಯಲ್ಲಿ ಸಾಗಿ ಉನ್ನತ ವ್ಯಕ್ತಿಗಳಾಗಿ

ಮೈಸೂರು, ಜ.30 (ಬಿಎಲ್‌ಯು)– ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ವಿಚಾರಧಾರೆ ಹಾಗೂ ತತ್ವಾದರ್ಶಗಳನ್ನು ಜನತೆಗೆ ತಿಳಿಸುವ ಉದ್ದೇಶದಿಂದ ರಾಜ್ಯ ಸರ್ಕಾರ 100 ಕೋಟಿ ರೂಪಾಯಿಯ ಮಹತ್ವದ ಕಾರ್ಯಕ್ರಮ ರೂಪಿಸಿದೆ ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ್ ತಿಳಿಸಿದರು.

ಮೈಸೂರಿನ ಮಾನಸಗಂಗೋತ್ರಿಯ ಗಾಂಧಿ ಭವನದಲ್ಲಿ ಗಾಂಧಿ ಅಧ್ಯಯನ ಕೇಂದ್ರ ಹಾಗೂ ನಗರದ ಶೇಷಾದ್ರಿಪುರಂ ಪದವಿ ಕಾಲೇಜು ಸಂಯುಕ್ತವಾಗಿ ಆಯೋಜಿಸಿದ್ದ 77ನೇ ಸರ್ವೋದಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಒಂದು ವರ್ಷದ ಅವಧಿ ಈ ಕಾರ್ಯಕ್ರಮದಲ್ಲಿ ಮೈಸೂರು ಸೇರಿದಂತೆ ರಾಜ್ಯಾದ್ಯಂತ ಮಹಾತ್ಮ ಗಾಂಧೀಜಿ ಅವರ ವಿಚಾರಧಾರೆಗಳನ್ನು ಜನರಿಗೆ ಮನದಟ್ಟು ಮಾಡಿಕೊಡಲಾಗುವುದು ಎಂದು ಹೇಳಿದರು.

ಬೆಳಗಾವಿಯಲ್ಲಿ ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ 100 ವರ್ಷವಾಗಿದೆ. ಈ ಹಿನ್ನೆಲೆ ಮಹಾತ್ಮ ಗಾಂಧೀಜಿ ಅವರ ವಿಚಾರಧಾರೆಗಳನ್ನು ಜನರಿಗೆ ತಿಳಿಸಲು ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ 30 ತಜ್ಞರ ಸಮಿತಿಯನ್ನು ಸರ್ಕಾರ ರಚನೆ ಮಾಡಿದೆ ಎಂದರು.

100 ಕೋಟಿ ರೂಪಾಯಿ ವೆಚ್ಚದ ಅನುದಾನದಲ್ಲಿ ಏನೇನು ಕಾರ್ಯಕ್ರಮ ಅನುಷ್ಠಾನಗೊಳಿಸಬೇಕು ಎಂಬ ಪಟ್ಟಿಯನ್ನು ಈಗಾಗಲೇ ವಿಶ್ವವಿದ್ಯಾನಿಲಯ ಸೇರಿದಂತೆ ಹಲವು ಇಲಾಖೆಗಳಿಗೆ ಕಳುಹಿಸಲಾಗಿದೆ. ಇದರ ಪ್ರಕಾರ ರಾಜ್ಯದ ಪ್ರತಿ ವಿಶ್ವವಿದ್ಯಾನಿಲಯದಲ್ಲಿ ಗಾಂಧಿ ಭವನ ನಿರ್ಮಾಣ ಮಾಡಬೇಕು. ಜೊತೆಗೆ ಉನ್ನತ ಶಿಕ್ಷಣ ಇಲಾಖೆ ಮೂಲಕ ಕೂಡ ಹಲವು ಕಾರ್ಯಕ್ರಮ ರೂಪಿಸಿದ್ದು, ಅಕ್ಟೋಬರ್ 2, 2025ರೊಳಗೆ ಇದನ್ನು ಪೂರ್ಣಗೊಳಿಸಲು ತಾಕೀತು ಮಾಡಲಾಗಿದೆ ಎಂದು ಪ್ರೊ.ನಿರಂಜನ್ ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಈ ಸ್ಥಳದಲ್ಲಿ ಈಗಾಗಲೇ ಗಾಂಧಿ ಭವನ ನಿರ್ಮಾಣ ಮಾಡಲಾಗಿದೆ. ಆದ ಕಾರಣ ಇಲ್ಲಿರುವ ಗಾಂಧಿ ಭವನವನ್ನು ನವೀಕರಣ ಮಾಡಬೇಕು. ಜೊತೆಗೆ ಲ್ಯಾಂಡ್‌ಸ್ಕೇಪ್ ಮಾಡಬೇಕು. ಇದಕ್ಕಾಗಿ 100 ಕೋಟಿ ರೂಪಾಯಿ ಅನುದಾನದಲ್ಲಿ ನೀಡುವ ಹಣದ ಜೊತೆಗೆ ಮತ್ತಷ್ಟು ಹಣದ ಅವಶ್ಯವಿದ್ದರೆ ಅದನ್ನು ನಾನು ಸರ್ಕಾರದ ವತಿಯಿಂದ ಬಿಡುಗಡೆ ಮಾಡಿಸುತ್ತೇನೆ ಎಂದು ಭರವಸೆ ನೀಡಿದರು.

ಭಾರತ 2035ರ ವೇಳೆಗೆ 400 ಮೆಟ್ರಿಕ್ ಟನ್ ಆಹಾರ ಉತ್ಪಾದಿಸಬೇಕಿದೆ. ಇದರ ಜೊತೆಗೆ ಶೇಕಡ 80ರಷ್ಟಿರುವ ಶಿಕ್ಷಣದ ಒಳಗೊಳ್ಳುವಿಕೆ ಶೇಕಡ 100ಕ್ಕೆ ತಲುಪಬೇಕು. ಈ ಸವಾಲುಗಳನ್ನು ದಿಟ್ಟವಾಗಿ ಎದುರಿಸಲು ಶಿಕ್ಷಣ ಮತ್ತು ತಂತ್ರಜ್ಞಾನದ ಜೊತೆಗೆ ಇತಿಹಾಸದ ಜ್ಞಾನ ಕೂಡ ಮುಖ್ಯವಾಗಿದ್ದು, ಈ ಹಾದಿಯಲ್ಲಿ ನಮ್ಮ ಯುವ ಜನತೆ ಸಾಗಬೇಕು ಎಂದು ಹೇಳಿದರು.

77ನೇ ಸರ್ವೋದಯ ದಿನಾಚರಣೆಯಲ್ಲಿ ಇಂದಿನ ಬದುಕಿಗೆ ಗಾಂಧೀಜಿ ಪ್ರಸ್ತುತತೆ ಕುರಿತು ಉಪನ್ಯಾಸ ನೀಡಿದ ನಿವೃತ್ತ ಕನ್ನಡ ಪ್ರಾಧ್ಯಾಪಕಿ ಪ್ರೊ.ಹೆಚ್.ಜೆ. ಸರಸ್ವತಿ, ಶ್ರೀರಾಮ ಪಿತೃವಾಕ್ಯ ಪರಿಪಾಲಕರಾಗಿದ್ದರೆ, ಗಾಂಧಿ ಮಾತೃ ವಾಕ್ಯ ಪರಿಪಾಲಕರಾಗಿದ್ದರು. ಗಾಂಧಿ ತಮಗೆ ಎದುರಾದ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದರು. ಜೊತೆಗೆ ಪರರ ನೋವಿಗೆ ಸ್ಪಂದಿಸುವ ಉದಾತ್ತಗುಣ ಹೊಂದಿದ್ದರು. ಗಾಂಧಿಯಂತೆ ಪರರ ಕಷ್ಟಗಳಿಗೆ ನಾವು ಕೂಡ ಸ್ಪಂದಿಸಿದರೆ ಉನ್ನತ ಸ್ಥಾನಕ್ಕೆ ಹೋಗಬಹುದು ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಪೌರಬಂಧು ಯಶೋಧ ಅವರನ್ನು ಸನ್ಮಾನಿಸಲಾಯಿತು. ನೂರಾರು ವಿದ್ಯಾರ್ಥಿಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎನ್. ನರೇಂದ್ರ ಕುಮಾರ್, ಶೇಷಾದ್ರಿಪುರಂ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ.ಕೆ.ಸೌಮ್ಯ ಈರಪ್ಪ, ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರದ ಪ್ರೊ.ಕೃಪಲಾನಿ ವೇದಿಕೆಯಲ್ಲಿದ್ದರು.



ಮೈಸೂರಿನ ಮಾನಸಗಂಗೋತ್ರಿಯ ಗಾಂಧಿ ಭವನದಲ್ಲಿ ಗುರುವಾರ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಶೇಷಾದ್ರಿಪುರಂ ಪದವಿ ಕಾಲೇಜು ಸಂಯುಕ್ತವಾಗಿ ಆಯೋಜಿಸಿದ್ದ 77ನೇ ಸರ್ವೋದಯ ದಿನಾಚರಣೆ ಕಾರ್ಯಕ್ರಮವನ್ನು ರಾಜ್ಯ ಉನ್ನತ ಶಿಕ್ಷಣ ಪರಿಷತ್‌ನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ್ ಉದ್ಘಾಟಿಸಿದರು.

ಫೆ.17ರಂದು ಧರ್ಮಸ್ಥಳಕ್ಕೆ ಮಾಲಾಧಾರಿಗಳ ಪಾದಯಾತ್ರೆ

ಶಿವರಾತ್ರಿಯಂದು ಧರ್ಮಸ್ಥಳ ತಲುಪಲಿರುವ ಪಾದಯಾತ್ರೆ

ಮೈಸೂರು, ಜ.30(ಜಿಎ)–ಕುಡುಮ ಶ್ರೀ ಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಸೇವಾ ಟ್ರಸ್ಟ್ ವತಿಯಿಂದ ಫೆ.17ರಂದು ಸಂಜೆ 7 ಗಂಟೆಗೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿಯಿಂದ ಧರ್ಮಸ್ಥಳಕ್ಕೆ ಮಾಲಾಧಾರಿಗಳು ಪಾದಯಾತ್ರೆ ಹೊರಡುತ್ತಾರೆ ಎಂದು ಅಧ್ಯಕ್ಷ ಎಂ.ಕೆ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ದೇವಸ್ಥಾನದಲ್ಲಿ ಪೂಜೆ ನೆರವೇರಿಸಿ ರಾತ್ರಿ 9.30ಕ್ಕೆ ನೂರಾರು ಸಂಖ್ಯೆಯಲ್ಲಿ ಪಾದಯಾತ್ರೆ ಆರಂಭಿಸಿ, ಮಹಾ ಶಿವರಾತ್ರಿಯ ದಿನವಾದ ಫೆ.26ರಂದು ಧರ್ಮಸ್ಥಳ ತಲುಪಲಿದ್ದಾರೆ. ಮಾರ್ಗದುದ್ದಕ್ಕೂ ಇವರಿಗೆ ಊಟ, ತಿಂಡಿ ವ್ಯವಸ್ಥೆ ಇರಲಿದೆ. ಜೊತೆಗೆ ಅನಾರೋಗ್ಯ ಉಂಟಾದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಧರ್ಮಸ್ಥಳದ ವತಿಯಿಂದ ಅಲ್ಲಲ್ಲಿ ಆಂಬುಲೆನ್ಸ್ ಸಹ ಇರಲಿದೆ. ಹೀಗಾಗಿ 15 ವರ್ಷ ಮೀರಿದವರು ಯಾರು ಬೇಕಾದರೂ ಈ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು. ಗೋಷ್ಠಿಯಲ್ಲಿ ಕಾಂಕ್ರೀಟ್ ರಾಜಣ್ಣ, ಚಂದ್ರಶೇಖರ್, ಕುಮರೇಶ್, ರಾಜಮ್ಮ, ಚಿನ್ನಸ್ವಾಮಿ ಉಪಸ್ಥಿತರಿದ್ದರು.

ಅರಮನೆ ಆಸ್ತಿಗೆ ಸಂಬಂಧಿಸಿದ ಸುಗ್ರೀವಾಜ್ಞೆ ವಾಪಸ್ ಪಡೆಯಬೇಕು, ಇಲ್ಲದಿದ್ದರೆ ಹೋರಾಟ

ಸರ್ಕಾರಕ್ಕೆ ಅರಸು ಮಂಡಳಿ ನಿಕಟಪೂರ್ವ ಅಧ್ಯಕ್ಷ ಲಿಂಗರಾಜೇ ಅರಸ್ ಎಚ್ಚರಿಕೆ

ಮೈಸೂರು, ಜ.30(ಜಿಎ)–ರಾಜ್ಯ ಸರ್ಕಾರ ಅರಮನೆ ಆಸಿಗೆ ಸಂಬಂಧಿಸಿದ ಸುಗ್ರೀವಾಜ್ಞೆ ವಾಪಸು ಪಡೆಯಬೇಕು. ಇಲ್ಲದಿದ್ದರೆ ಇತರೆ ಸಮುದಾಯಗಳನ್ನು ಒಗ್ಗೂಡಿಸಿಕೊಂಡು ಹೋರಾಟ ನಡೆಸಬೇಕಾಗುತ್ತದೆ ಎಂದು ಅರಸು ಮಂಡಳಿ ನಿಕಟಪೂರ್ವ ಅಧ್ಯಕ್ಷ ಲಿಂಗರಾಜೇ ಅರಸ್ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಸು ಸಮುದಾಯದ ರಾಜವಂಶಸ್ಥರ ಬೆಂಗಳೂರು ಮತ್ತು ಮೈಸೂರು ಅರಮನೆಗಳ ಮೇಲೆ ನಿರಂತರವಾಗಿ ಅನೈತಿಕ ಕ್ರಮ ಕೈಗೊಳ್ಳುತ್ತಿದೆ. ಇದರಿಂದಾಗಿ ರಾಜವಂಶಸ್ಥರು ತಮ್ಮ ಜೀವನವನ್ನೆಲ್ಲ ನ್ಯಾಯಾಲಯಕ್ಕೆ ಅಲೆಯುವಂತಾಗಿದೆ. ಹೀಗಾಗಿ ಇದೇ ಧೋರಣೆ ಮುಂದುವರೆದಲ್ಲಿ ಈ ಭಾಗದಲ್ಲಿ ಮಾತ್ರವಲ್ಲದೆ, ರಾಜ್ಯದ ಇತರೆಡೆಯೂ ಜನರನ್ನು ಒಗ್ಗೂಡಿಸಿ ಚಳವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದರು.

ಸಿಎಂ ಸಿದ್ದರಾಮಯ್ಯ ಅವರು ತಮ್ಮ ಮೂರು ಎಕರೆ ಜಾಗಕ್ಕೆ 60 ಕೋಟಿ ಕೇಳುತ್ತಾರೆ, ಆದರೆ ರಾಜವಂಶದ ಸುಮಾರು 475 ಎಕರೆಗೆ ಕೇವಲ 11 ಕೋಟಿ ಮೌಲ್ಯ ಮಾಡುವುದು ಯಾವ ನ್ಯಾಯ ಎಂದು ಪ್ರಶ್ನಿಸಿ, ನ್ಯಾಯಾಲಯ ಸಹ ರಾಜವಂಶಸ್ಥರ ಪರವಾಗಿ ಆದೇಶ ನೀಡಿದ್ದು, ಬಳಿಕ ಯಥಾಸ್ಥಿತಿ ಕಾಯ್ದುಕೊಳ್ಳಬೇಕೆಂದು ಸೂಚಿಸಲಾಗಿದೆ. ಹೀಗಿರುವಾಗ ಅಧಿಸೂಚನೆಗೆ ಸಂಬಂಧಿಸಿದಂತೆ ರಾಜ್ಯಪಾಲರ ದಿಕ್ಕು ತಪ್ಪಿಸಲಾಗಿದೆ ಎಂದು ಆರೋಪಿಸಿದರು.

ಅರಸು ಸಮುದಾಯ ಅಲ್ಪಸಂಖ್ಯಾತರಲ್ಲಿ ಅಲ್ಪಸಂಖ್ಯಾತವಾಗಿದೆ. ಅಹಿಂದ ನಾಯಕರೆನ್ನುವ ಸಿದ್ದರಾಮಯ್ಯ ಅವರು ಈ ಸಮುದಾಯದ ನೆರವಿಗೆ ಬರುವ ಬದಲು ಅಧಿಕಾರಕ್ಕೆ ಬಂದಾಗಲೆಲ್ಲ ಏನಾದರೂ ಒಂದು ವಿಭಿನ್ನ ಸಮಸ್ಯೆ ಹುಟ್ಟು ಹಾಕುತ್ತಾರೆ ಎಂದರು. ಗೋಷ್ಠಿಯಲ್ಲಿ ಮನೋಜ್, ಶ್ರೀಧರ್‌ರಾಜೇ ಅರಸ್, ಶ್ರೀಕಾಂತ್ ರಾಜೇ ಅರಸ್, ಮಲ್ಲರಾಜೇ ಅರಸ್ ಇದ್ದರು.

ಶಿಕ್ಷ ಕಾಲೇಜಿನ ಶಿಕ್ಷೋತ್ಸವ ನಾಳೆ

ಮೈಸೂರು, ಜ.30(ಜಿಎ)– ಟಿ. ನರಸೀಪುರ ಮುಖ್ಯ ರಸ್ತೆ ವರಕೋಡು ಗೇಟ್ ಬಳಿಯ ಶಿಕ್ಷ ಶಾಲೆ ಮತ್ತು ಪದವಿ ಪೂರ್ವ ಕಾಲೇಜು ವತಿಯಿಂದ ಫೆ.1ರಂದು ಸಂಜೆ 5.30ಕ್ಕೆ ಶಿಕ್ಷಣ ಸಂಸ್ಥೆ ಆವರಣದಲ್ಲಿ ಶಿಕ್ಷೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಾಚಾರ್ಯ ಪಿ.ದೇವರಾಜು ಈ ವಿಷಯ ತಿಳಿಸಿ, ತ್ರಿಲೋಚನ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸುವರು. ಖ್ಯಾತ ಸಂಗೀತ ನಿರ್ದೇಶಕ ಡಾ. ಹಂಸಲೇಖ ಉದ್ಘಾಟಿಸುವರು. ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ವಿ.ಸಿ.ರವಿಕುಮಾರ್, ಎಸ್.ಎಂ.ಶಿವನಾಗ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶರಭೇಶ್ವರ ವಿದ್ಯಾಪೀಠದ ಅಧ್ಯಕ್ಷ ಎಸ್.ಎಂ. ದಕ್ಷಿಣಾಮೂರ್ತಿ ಅಧ್ಯಕ್ಷತೆ ವಹಿಸುವರು. ಶಾಲಾ, ಕಾಲೇಜು ಮಕ್ಕಳಿಂದ ಈ ವೇಳೆ ಸಾಂಸ್ಕೃತಿಕ ಕಾರ್ಯಕ್ರಮವೂ ಇರಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ಚಂದ್ರಶೇಖರ್, ರಾಕೇಶ್, ರವಿಕಿರಣ್ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.01.2025 ಶುಕ್ರವಾರ, ಮಳೆ ನಕ್ಷತ್ರ: ಶ್ರವಣ 24.01.2025 ರಿಂದ 05.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಹಿಮ್ಮಡಿ ಮುಳ್ಳು, ಪಿತ್ತಗಂಧೆ (ಶೀತ ಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಗೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಶ್ವಾಸ (ಉಬ್ಬಸ, ದಮ್ಮು ಕಾಯಿಲೆ) ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 10 ರಿಂದ.

■ **ಪ್ರಾದೇಶಿಕ ಶಿಕ್ಷಣ ಸಂಸ್ಥೆ:** ಇನ್ನೋವೇಟಿವ್ ಪ್ರಾಕ್ಟೀಸಸ್ ಅಂಡ್ ಎಕ್ಸ್‌ಪೀರಿಯೆನ್ಸಸ್ ಇನ್ ಸ್ಕೂಲ್ ಬೇಸ್ಡ್ ಕೇರಿಯರ್ ಡೆವಲಪ್‌ಮೆಂಟ್ ಪ್ರೋಗ್ರಾಮ್ಸ್ ಫಾರ್ ಸ್ಟೂಡೆಂಟ್ಸ್ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ : ಆರ್‌ಐಇ ಪ್ರಿನ್ಸಿಪಾಲ್ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್, ಸ್ಥಳ: ಎ.ವಿ. ಹಾಲ್ ಟೆಕ್ನಾಲಜಿ ಬ್ಲಾಕ್, ಬೆಳಗ್ಗೆ 10ಕ್ಕೆ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ಸಾಮಾಜಿಕ ಪರಿವರ್ತನೆಗಾಗಿ ಆರೋಗ್ಯ ವಿಜ್ಞಾನಗಳಲ್ಲಿ ಮೌಲ್ಯ ಶಿಕ್ಷಣ ಮತ್ತು ನಾವೀನ್ಯತೆಗಳ ಅನುವಾದನ ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣ, ಉದ್ಘಾಟನೆ : ಡಾ. ಸುಬರ್ಣಾ ರಾಯ್, ಮುಖ್ಯ ಅತಿಥಿಗಳು : ಚಾಮರಾಜನಗರ ವಿವಿ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ. ಸುಬ್ರಾಯ, ಡಾ. ಮಿಲಿಂದ್ ಪಾರ್ಲೆ, ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯದ ಟೀಚರ್ಸ್ ಅಸೋಸಿಯೇಷನ್:** ಉಪನ್ಯಾಸ ಸಮಾರಂಭ: ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಖ್ಯ ಅತಿಥಿ: ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11 ಗಂಟೆಗೆ.

■ **ಜೆಎಸ್‌ಎಸ್ ಮಹಿಳಾ ಕಾಲೇಜು:** 17ನೇ ಪದವೀಧರರ ದಿನ, ದಿವ್ಯ ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿ: ಸೆಲ್ವ ಜಯರಾಮನ್, ಉಪಸ್ಥಿತರು: ಡಾ.ಸಿ.ಜಿ.ಬೆಟಸೂರಮಠ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 11.30ಕ್ಕೆ

■ **ಮಾತೃ ಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು :** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ: ಮಾತೃ ಮಂಡಲಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀಮತಿ ವಾಣಿ ಪ್ರಸಾದ್, ಮುಖ್ಯ ಅತಿಥಿಗಳು : ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ ಅರಸ್, ಸದಸ್ಯರಾದ ಶೋಭಾ ಶ್ರೀನಾಥ್, ಶುಭ ಶಶಿಕಾಂತ್, ಸ್ಥಳ: ವಜ್ರ ಮಹೋತ್ಸವ ಸಭಾಂಗಣ, ಮಾತೃ ಮಂಡಲಿ ವಿದ್ಯಾಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಸಂಸ್ಕೃತ ಭಾರತಿ ಕರ್ನಾಟಕ ದಕ್ಷಿಣ ಸಂಸ್ಕೃತ ಕಾವೇರಿ:** ಪ್ರಾಂತ ಸಮ್ಮೇಳನ–ಮೈಸೂರು, ಪ್ರದರ್ಶಿನಿ ಉದ್ಘಾಟನೆ: ಸರ್ಕಾರಿ ಆಯುರ್ವೇದ ಮಹಾ ವಿದ್ಯಾಲಯದ ಪ್ರಾಂಶುಪಾಲ ಡಾ.ರಾಧಾಕೃಷ್ಣ ರಾವ್, ದಿವ್ಯ ಸಾನ್ನಿಧ್ಯ: ಮೈಸೂರಿನ ಇಸ್ಕಾನ್ ಉಪಾಧ್ಯಕ್ಷ ಶ್ರೀ ಕಾರುಣ್ಯ ಸಾಗರ್ ದಾಸ್, ಸ್ಥಳ : ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ಮೈಸೂರು.

ಸುತ್ತೂರಿನಲ್ಲಿಂದು, ನಂಜನಗೂಡು ತಾ., ಸುತ್ತೂರು ಜಾತ್ರಾ ಮಹೋತ್ಸವ

ಕರ್ತೃ ಗದ್ದುಗೆ: ಮಹಾರುದ್ರಾಭಿಷೇಕ, ಪ್ರಾತಃಕಾಲ 4 ಗಂಟೆಗೆ, ಬೆಳಗ್ಗೆ 6.30ಕ್ಕೆ ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥ ಸಂಚಲನ, ಬೆಳಗ್ಗೆ 7.30ಕ್ಕೆ, ಷಟ್‌ಸ್ಥಲ ಧ್ವಜಾರೋಹಣ–ಜಗದ್ಗುರು ಶ್ರೀ ಸೋಮಶಂಕರ ಸ್ವಾಮೀಜಿ, ಧರ್ಮ ಸಂದೇಶ: ಬರಡನಪುರದ ಶ್ರೀ ಚನ್ನಬಸವ ಸ್ವಾಮೀಜಿ, ಬೆಳಗ್ಗೆ 8ಕ್ಕೆ ಸುತ್ತೂರಮ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ, ಬೆಳಗ್ಗೆ 10 ಗಂಟೆಗೆ ಶ್ರೀ ಶಿವರಾತ್ರಿ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಮಹಾರುದ್ರಾಭಿಷೇಕ, ಅಷ್ಟೋತ್ತರಶತ ಕುಂಭೋತ್ಸವ, ಮಧ್ಯಾಹ್ನ 12ಕ್ಕೆ ಅನ್ನ ಬ್ರಹ್ಮೋತ್ಸವ, ಮಹಾಮಂಗಳಾರತಿ, ಸಂಜೆ 6.30ಕ್ಕೆ ಉತ್ಸವಮೂರ್ತಿಯನ್ನು ಶ್ರೀ ಮಠಕ್ಕೆ ಬಿಜಯಂಗೈಸುವುದು.

■ **ಬೆಳಗ್ಗೆ 10.30ಕ್ಕೆ ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ :** ಸಮ್ಮುಖ : ತುಮಕೂರು ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಕನಕಗಿರಿಯ ಜೈನ ಮಠದ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ, ಸಮಾರೋಪ ಭಾಷಣ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಾಂಸ್ಕೃತಿಕ ಮೇಳ ಬಹುಮಾನ ವಿತರಣೆ: ಸಚಿವರಾದ ಎಂ.ಬಿ.ಪಾಟೀಲ್, ಹೆಚ್.ಕೆ.ಪಾಟೀಲ್, ಭೈರತಿ ಸುರೇಶ್, ಮುಖ್ಯ ಅತಿಥಿಗಳು: ಮಾಜಿ ಸಚಿವರೂ ಆದ ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ, ಶಾಸಕರಾದ ಡಾ.ಕೆ.ಗೋವಿಂದರಾಜು, ಎಸ್.ಟಿ.ಸೋಮಶೇಖರ್, ಹೆಚ್.ಎಂ.ಗಣೇಶ್ ಪ್ರಸಾದ್, ಕೆ.ವೈ.ನಂಜೇಗೌಡ, ಕೆ.ಸಿ.ವೀರೇಂದ್ರ ಪಪ್ಪಿ, ಡಿ.ರವಿಶಂಕರ್.

ನೇರಳೆಯಲ್ಲಿಂದು (ಹೆಚ್.ಡಿ.ಕೋಟೆ ತಾ.)

■ **23ನೇ ವಾರ್ಷಿಕ ವಿಶೇಷ ಶಿಬಿರ–2025,** ರಾಷ್ಟ್ರೀಯ ಸೇವಾ ಯೋಜನೆ ಘಟಕ 1, 2, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಶಿಬಿರ ಉದ್ಘಾಟನೆ: ಮೈಸೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಎಂ.ಬಿ.ಸುರೇಶ್, ದಿವ್ಯ ಸಾನ್ನಿಧ್ಯ: ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರ ಸ್ವಾಮೀಜಿ, ಪುಷ್ಪಾರ್ಚನೆ: ಶಾಸಕ ಅನಿಲ್ ಚಿಕ್ಕಮಾದು, ಅಧ್ಯಕ್ಷತೆ: ಬೀಚನಹಳ್ಳಿ ಗ್ರಾಪಂ ಅಧ್ಯಕ್ಷೆ ಶ್ರೀಮತಿ ರತ್ನಮ್ಮ ನಾಗನಾಯಕ, ಉಪಸ್ಥಿತರು: ಶ್ರೀಮತಿ ಡಾ.ಪವಿತ್ರ, ಪ್ರಕಾಶ್, ಪ್ರೊ.ಕಾಳಚನ್ನೇಗೌಡ, ಡಾ.ಚಂದ್ರಶೇಖರ್, ಪ್ರಭಾಕರ್, ಕೆ.ಪಿ.ಬಸವೇಗೌಡ, ಪ್ರೊ.ಚಂದ್ರೇಗೌಡ, ಸ್ಥಳ: ನೇರಳೆ ಗ್ರಾಮ, ಬೆಳಗ್ಗೆ 11 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ: ಡಾ.ಕಲೀಂವುಲ್ಲಾ, ಪ್ರಸ್ತುತಿ: ಜಿ.ಶಾಂತಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎನ್.ಅಶ್ವಿನಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50–ರೈತರಿಗೆ ಸಲಹೆ, 7.15KABHI –ಕರ್ನಾಟಕ, ಮೆದುಳು ಆರೋಗ್ಯ ಕುರಿತ ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ನಿಮ್ಹಾನ್ಸ್ ಸಂಸ್ಥೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.05–ಗರ್ಭಕಂಠದ ಕ್ಯಾನ್ಸರ್ ಕುರಿತು ಮಾಹಿತಿ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, 9.10–ನಮ್ಮ ಆರೋಗ್ಯ 'ಆಸ್ಟಿಯೋಪೋರೋಸಿಸ್–ಕಾರಣಗಳು ಮತ್ತು ಚಿಕಿತ್ಸೆ' ಕುರಿತು ಡಾ.ಬಲರಾಮ್ ಪಾಟೀಲ್ ಎಂ. ಅವರೊಂದಿಗೆ ಮಾತುಕತೆ ಮತ್ತು 'ಮನೆಯಂಗಳದಲ್ಲಿ ಔಷಧೀಯ ಸಸ್ಯಗಳು' ಕುರಿತು ಡಾ.ಟಿ.ಶಿವಕುಮಾರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.40–ಗಾಂಧಿ ಸ್ಮೃತಿ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಕಲಾವತಿ ಅವಧೂತ್. ವಿ–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ? ಸೈಕಲ್ ಸವಾರಿ ಮಾತಿನ ಲಹರಿ", ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 12.35–ದೇವರನಾಮ, 12.45–ಕಾದಂಬರಿ ವಿಹಾರ –ಎಂ.ಆರ್.ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು', ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್ ಎಸ್.ಎಸ್., 1.00–ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ 1.20–ಭಾವಗೀತೆಗಳು, 1.30–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40–ದಾರಿದೀಪ, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55–ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ. ಕೆ. ರವೀಂದ್ರಕುಮಾರ್, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ : ಕರ್ನಾಟಕ ಪೋಲೀಸ್ ಬ್ಯಾಂಡ್, 4.00–ಮಹಿಳಾರಂಗ–ಸಖೀ ಸಂವಾದ –ನಮ್ಮ ದೈನಂದಿನ ಬದುಕಿನಲ್ಲಿ ಹವ್ಯಾಸಗಳ ಮಹತ್ವ ಏನು, ಪ್ರಸ್ತುತಿ : ಕೀರ್ತನಾ 4.30–ವೃತ್ತಿ ಮಾರ್ಗದರ್ಶನ, 6.50–ಕೃಷಿರಂಗ: ಕೃಷಿ ಮಾರುಕಟ್ಟೆ ಸವಾಲುಗಳು ಮತ್ತು ಅವಕಾಶಗಳು. ಈ ಕುರಿತು ಹೈದರಾಬಾದ್‌ನ MANAGE (ಮ್ಯಾನೇಜ್) ಸಂಸ್ಥೆಯ ನಿರ್ದೇಶಕ ಡಾ.ಕೆ.ಸಿ.ಗುಮ್ಮಗೋಳ ಮಠ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00–ಚರ್ಚೆ– ಗ್ರಾಹಕ ಚಳುವಳಿ ಎಲ್ಲಿದೆ? ಹೇಗಿದೆ? ಭಾಗವಹಿಸುತ್ತಾರೆ–ಡಾ.ಭೂಮಿ ವಿ.ಶೆಣೈ, ಗೀತಾವೇಲು ಮಣಿ, ಹರ್ಷಿತಾ. ಜಿ.ಎಂ, ಶೃತಿ. ಪಿ.ಎಸ್., 8.30–ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಾರುಮತಿ ರಾಮಚಂದ್ರನ್–ಹಾಡುಗಾರಿಕೆ, 10.00–ತತ್ವ ಸಂಚಾರ: ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.30–ಸವಿನೆನಪು

ಮೈಸೂರಲ್ಲಿ ರಾಷ್ಟ್ರೀಯ ಸ್ವಚ್ಛತಾ ದಿವಸ್ ಅಂಗವಾಗಿ ಮಾನವ ಸರಪಳಿ



ರಾಷ್ಟ್ರೀಯ ಸ್ವಚ್ಛತಾ ದಿವಸ್ ಕಾರ್ಯಕ್ರಮವನ್ನು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಅವರು ಗುರುವಾರ ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜ.30(ಆರ್‌ಕೆ)– ರಾಷ್ಟ್ರೀಯ ಸ್ವಚ್ಛತಾ ದಿವಸ್‌ನ ಅಂಗವಾಗಿ ಮೈಸೂರಿನ ದೇವರಾಜ ಮಾರುಕಟ್ಟೆ ಆವರಣದ ಚಿಕ್ಕಗಡಿಯಾರದ ಬಳಿ ಇಂದು ಜನ ಜಾಗೃತಿಗಾಗಿ ಮಾನವ ಸರಪಳಿ ನಿರ್ಮಿಸಲಾಯಿತು.

ಮೈಸೂರು ಮಹಾನಗರಪಾಲಿಕೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಸ್ವಚ್ಛತಾ ದಿವಸ್ ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ.ದಿನೇಶ್ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು.

ಈ ಸಂದರ್ಭ ಮಾತನಾಡಿದ ಅವರು, ಸ್ವಚ್ಛತೆ, ನೈರ್ಮಲ್ಯ ಹಾಗೂ ಪರಿಸರ ಸಂರಕ್ಷಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಆ ನಿಟ್ಟಿನಲ್ಲಿ ಜಾರಿಗೆ ತಂದಿರುವ ಕಾನೂನುಗಳನ್ನು ಪರಿಪಾಲನೆ ಮಾಡುವಂತೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್ ಮಾತನಾಡಿ, ಪ್ಲಾಸ್ಟಿಕ್ ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿರುವುದರಿಂದ ಅವುಗಳ ಬದಲಿಗೆ ಬಳಸಬಹುದಾದ ಪರಿಸರಕ್ಕೆ ಹಾನಿಕಾರಕವಲ್ಲದ ವಸ್ತುಗಳು ಜನರಿಗೆ ಸಿಗುವಂತೆ ಮಾಡಬೇಕು. ಪ್ರತಿಯೊಬ್ಬರೂ ತಮ್ಮ ಮನೆ, ಸುತ್ತಲಿನ ಪ್ರದೇಶ ಹಾಗೂ ಸಾರ್ವಜನಿಕ ಸ್ಥಳವನ್ನು ಸ್ವಚ್ಛವಾಗಿರಿಸಿಕೊಳ್ಳುವಂತೆ ಸಲಹೆ ನೀಡಿದರು.

ಹೋಟೆಲ್, ಅಂಗಡಿ, ಕಲ್ಯಾಣ ಮಂಟಪ ಸೇರಿದಂತೆ ಇನ್ನಿತರ ಸ್ಥಳಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ವಿಲೇವಾರಿ, ಮರು ಬಳಕೆ ಮಾಡುವ ಬಗ್ಗೆ ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ. ವೆಂಕಟೇಶ್ ಅವರು ಮಾಹಿತಿ ನೀಡಿದರಲ್ಲದೆ ಸ್ವಚ್ಛತೆ ಕಾಪಾಡುವ ಬಗ್ಗೆ ಇದೇ ವೇಳೆ ಪ್ರತಿಜ್ಞಾ ವಿಧಿ ಬೋಧಿಸಿದರು.

ನಂತರ ಗಣ್ಯರು, ಪಾಲಿಕೆ ಆರೋಗ್ಯ ವಿಭಾಗದ ಹೆಲ್ತ್ ಇನ್ಸ್‌ಪೆಕ್ಟರ್‌ಗಳು, ಪರಿಸರ ಇಂಜಿನಿಯರ್‌ಗಳು, ಎಲ್ಲಾ ವಲಯ ಕಚೇರಿಗಳ ವಲಯಾಧಿಕಾರಿಗಳು, ಸಿಬ್ಬಂದಿ ಸೇರಿ ಚಿಕ್ಕ ಗಡಿಯಾರದ ಸುತ್ತ ಮಾನವ ಸರಪಳಿ ನಿರ್ಮಿಸಿ ಸ್ವಚ್ಛತೆ ಕಾಪಾಡುವ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು.

ನಾಳೆ 'ನೈಪುಣ್ಯೋತ್ಸವ'ದಲ್ಲಿ ಪರಿಸರ ಜಾಗೃತಿ

ಮೈಸೂರು, ಜ.30– ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ತನ್ನ ವಾರ್ಷಿಕೋತ್ಸವ 'ನೈಪುಣ್ಯೋತ್ಸವ' ಕಾರ್ಯಕ್ರಮದಲ್ಲಿ ಈ ಬಾರಿ ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಪ್ರಸ್ತುತಪಡಿಸಲಿದೆ. ನೈಪುಣ್ಯ ಸಂಸ್ಥೆಯ ಕನಕದಾಸನಗರ ಹಾಗೂ ಆರ್‌ಟಿ ನಗರದ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ಶಾಲೆಗಳು ಜಂಟಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದು, ಫೆ.1 (ಶನಿವಾರ) ರಂದು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಮುಂಜಾನೆ 10 ಗಂಟೆಗೆ ಆರಂಭವಾಗುವ ಈ ಕಾರ್ಯಕ್ರಮವನ್ನು ಶ್ರೀ ಜಯದೇವ ಹೃದ್ರೋಗ ಸಂಶೋಧನಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ॥ ಕೆ.ಎಸ್.ಸದಾನಂದ ಉದ್ಘಾಟಿಸಲಿದ್ದು, ಪೂರ್ವ ಪ್ರಾಥಮಿಕ ವಿಭಾಗದ (ಕಿಂಡರ್‌ಗಾರ್ಟನ್) ಪುಟ್ಟ ಮಕ್ಕಳಿಂದ 'ಜನನಿ' ಹೆಸರಿನ ಕಾರ್ಯಕ್ರಮದಡಿಯಲ್ಲಿ ಮಕ್ಕಳು ಮತ್ತು ಮಾತೃ ಸಂಬಂಧದ ಕುರಿತ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದೇ ಸಂದರ್ಭದಲ್ಲಿ 'ಬೇರು-ಬಳ್ಳಿ' ಹೆಸರಿನಲ್ಲಿ ಕೂಡು ಕುಟುಂಬವನ್ನು ವೇದಿಕೆಯ ಮೇಲೆ ತಂದು ನಮ್ಮ ನೆಲದ ಕುಟುಂಬ ಸಂಸ್ಕೃತಿಯನ್ನು ಪರಿಚಯಿಸುವ ಕಾರ್ಯಕ್ರಮವನ್ನೂ ಜೋಡಿಸಲಾಗಿದೆ.

ಸಂಜೆ 4 ಗಂಟೆಯ ಕಾರ್ಯಕ್ರಮವನ್ನು ರಾಜ್ಯ ಚುನಾವಣಾ ಆಯೋಗದ ಮಾಜಿ ಆಯುಕ್ತರು ಹಾಗೂ ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಪಿ. ಎನ್. ಶ್ರೀನಿವಾಸಾಚಾರಿ ಉದ್ಘಾಟಿಸಲಿದ್ದಾರೆ. ಗೌರವ ಅತಿಥಿಗಳಾಗಿ ಗದಗದ ಶ್ರೀ ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರು ಉಪಸ್ಥಿತರಿದ್ದು, ಶಿಕ್ಷಣದ ಕುರಿತು ಉಪನ್ಯಾಸ ನೀಡಲಿದ್ದಾರೆ.

ಈ ಎರಡೂ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ನೈಪುಣ್ಯ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ರಘು ವಹಿಸಲಿದ್ದು, ಸಂಜೆ 4ರ ಕಾರ್ಯಕ್ರಮದಲ್ಲಿ ಪರಿಸರ ಜಾಗೃತಿಯನ್ನು ಪಡಿಮೂಡಿಸುವ ನಿಟ್ಟಿನಲ್ಲಿ 'ಆಯಾಮ ಫೈನ್ ಆರ್ಟ್ಸ್' ಅಕಾಡೆಮಿಯ ನಿರ್ದೇಶಕಿ ಡಾ. ಶಾಂಭವಿ ಸ್ವಾಮಿ ಅವರ ನಿರ್ದೇಶನದಲ್ಲಿ 'ಸೃಷ್ಟಿ-ದೃಷ್ಟಿ' ನೃತ್ಯರೂಪಕವನ್ನು ನೈಪುಣ್ಯ ವಿದ್ಯಾರ್ಥಿಗಳು ಪ್ರಸ್ತುತಪಡಿಸಲಿದ್ದಾರೆ.

ಇಂಗ್ಲಿಷ್ ಎಂಪವರ್‌ಮೆಂಟ್ ಕಾರ್ಯಕ್ರಮ



ಶ್ರೀ ಜೈನ್ ಎಜುಕೇಶನ್ ಸೊಸೈಟಿ ಮಹಾವೀರ ವಿದ್ಯಾಮಂದಿರದಲ್ಲಿ ಗುರುವಾರ ಸಾರ್ವಜನಿಕ ಶಿಕ್ಷಣ ಇಲಾಖೆ ದಕ್ಷಿಣ ವಲಯದಿಂದ ಆಯೋಜಿಸಿದ್ದ ಇಂಗ್ಲೀಷ್ ಎಂಪವರ್‌ಮೆಂಟ್ ಕಾರ್ಯಕ್ರಮವನ್ನು ಸಂಪನ್ಮೂಲ ಸಮನ್ವಯ ಅಧಿಕಾರಿ ಶ್ರೀಕಂಠಸ್ವಾಮಿ ಎಂ.ಬಿ., ಸಮೂಹ ಸಂಪನ್ಮೂಲ ವ್ಯಕ್ತಿ ವಸಂತ್‌ಕುಮಾರ್, ಶಾಲೆಯ ಪ್ರಾಂಶುಪಾಲರಾದ ಅನಿತ ಡಿ., ಉಪಪ್ರಾಂಶುಪಾಲರಾದ ಆಶಾ ಎಸ್. ಅವರೊಂದಿಗೆ ಶಾಲಾ ಮಕ್ಕಳು ಜೊತೆಯಾಗಿ ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಬಣ್ಣ ಬದಲಿಸುತ್ತಿವೆ ಮೈಸೂರು ನಗರ ಸಾರಿಗೆ ಬಸ್ಸುಗಳು!

● ಆಕರ್ಷಕ ಆಕಾಶ ನೀಲಿ, ಬಿಳಿ ಬಣ್ಣ ● ಪ್ರಯಾಣಿಕರ ಆಶಯದಂತೆ ಬಣ್ಣ ಬದಲು

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಜ.30– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಸಂಚರಿಸುವ ನಗರ ಸಾರಿಗೆ ಬಸ್ಸುಗಳು 15 ವರ್ಷದ ಬಳಿಕ ಬಣ್ಣ ಬದಲಾಯಿಸುತ್ತಿದ್ದು, ಹೊಸ ಬಣ್ಣದಲ್ಲಿ ಸಂಚರಿಸುತ್ತಿರುವ ನಗರ ಸಾರಿಗೆ ಬಸ್ಸುಗಳು ಪ್ರಯಾಣಿಕರ ಪ್ರಶಂಸೆಗೆ ಪಾತ್ರವಾಗಿವೆ.

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಶಕ್ತಿ ಯೋಜನೆಯಿಂದಾಗಿ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದರಲ್ಲೂ ಮಹಿಳಾ ಪ್ರಯಾಣಿಕರ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ [illegible] ನಡುವೆ ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳು ಹೊಸ ಬಣ್ಣದೊಂದಿಗೆ ಪ್ರಯಾಣಿಕರ ಗಮನ ಸೆಳೆಯುತ್ತಿವೆ. ಕಳೆದ 15 ವರ್ಷದಿಂದ ಕೆಲವು ಬಸ್ಸುಗಳು ಹಸಿರು ಬಣ್ಣದಲ್ಲಿ, ಮತ್ತೆ ಕೆಲವು ಬಸ್ಸುಗಳು ತಿಳಿ ಕೆಂಪು ಬಣ್ಣದಿಂದ ಸಂಚರಿಸುತ್ತಿದ್ದ ನಗರ ಸಾರಿಗೆ ಬಸ್ಸುಗಳು ಇದೀಗ ಆಕಾಶ ನೀಲಿ(ಸ್ಕೈ ಬ್ಲೂ) ಹಾಗೂ ಬಿಳಿ ಬಣ್ಣಕ್ಕೆ ಮಾರ್ಪಾಡಾಗುತ್ತಿವೆ.

ಪ್ರಯಾಣಿಕರು ಇಷ್ಟಪಟ್ಟ ಬಣ್ಣ: ಈ ಹಿಂದೆ ನರ್ಮ್ ಯೋಜನೆಯಿಂದ ಖರೀದಿಸಿದ್ದ ಬಸ್ಸುಗಳಲ್ಲಿ 10 ಲಕ್ಷ ಕಿ.ಮೀ. ದೂರಕ್ಕಿಂತ ಹೆಚ್ಚು ದೂರ ಕ್ರಮಿಸಿದ 100ಕ್ಕೂ ಹೆಚ್ಚು ಬಸ್ಸುಗಳನ್ನು ಕಳೆದ ನಾಲ್ಕು ತಿಂಗಳ ಹಿಂದೆ ನಿಯಮಾನುಸಾರ ಗುಜರಿಗೆ(ಸ್ಕ್ರಾಪ್) ಹಾಕಲಾಗಿತ್ತು. ಅದಕ್ಕೆ ಬದಲಾಗಿ ರಾಜ್ಯ ಸರ್ಕಾರ ಹಂತ ಹಂತವಾಗಿ ಹೊಸ ಬಸ್‌ಗಳನ್ನು ನೀಡಿತ್ತು. ಹೊಸದಾಗಿ ಸಾರಿಗೆ ಇಲಾಖೆ ಸೇರಿದ ಟಾಟಾ ಸಂಸ್ಥೆಯ ಬಸ್ಸುಗಳು ಆಕಾಶ ನೀಲಿ ಮತ್ತು ಬಿಳಿ ಬಣ್ಣದ್ದಾಗಿತ್ತು. ಹೊಸ ಬಸ್ಸುಗಳನ್ನು ಕಂಡ ಪ್ರಯಾಣಿಕರು ಅವುಗಳ ಬಣ್ಣಕ್ಕೆ ಮಾರುಹೋಗಿದ್ದರು. ಅಲ್ಲದೆ, ಹೊಸ ಬಣ್ಣದ ಬಸ್‌ಗಳಿಗೆ ಪ್ರಶಂಸೆ ವ್ಯಕ್ತಪಡಿಸಿದ್ದರು.



ಹೊಸ ಬಣ್ಣದಲ್ಲಿ ಕಂಗೊಳಿಸುತ್ತಿರುವ ಮೈಸೂರು ನಗರ ಸಾರಿಗೆ ಹಳೆಯ ಬಸ್ಸು.

ಇದನ್ನೇ ಮುಂದಿಟ್ಟುಕೊಂಡ ಸಾರಿಗೆ ಇಲಾಖೆ ಮೈಸೂರು ನಗರ ಸಾರಿಗೆ ಬಸ್‌ಗಳ ಬಣ್ಣ ಬದಲಿಸಲು ಮುಂದಾಗಿದೆ. ಪ್ರಯಾಣಿಕರ ಅಭಿಪ್ರಾಯಕ್ಕೆ ಮನ್ನಣೆ ನೀಡಿ, ಹಂತ ಹಂತವಾಗಿ ಬಸ್ಸುಗಳ ಬಣ್ಣ ಬದಲಿಸುತ್ತಿದೆ. ಮೈಸೂರು ನಗರ ವಿಭಾಗದಲ್ಲಿ ಒಟ್ಟು ನಾಲ್ಕು ಡಿಪೋಗಳಿದ್ದು 575 ಬಸ್‌ಗಳಿದ್ದು, ಅವುಗಳಲ್ಲಿ ನಂಜನಗೂಡು ಡಿಪೋಗೆ 25 ಬಸ್ ಸೇರಿವೆ. ಉಳಿದ 550 ಬಸ್‌ಗಳು ನಗರ ಪ್ರದೇಶ ಹಾಗೂ ಮೈಸೂರು ತಾಲೂಕಿನ ವಿವಿಧ ಗ್ರಾಮಗಳಿಗೆ ಸಂಚರಿಸುತ್ತಿವೆ. ಆ ಎಲ್ಲಾ ಬಸ್‌ಗಳು ಬಣ್ಣ ಬದಲಿಸಿಕೊಳ್ಳುತ್ತಿವೆ.

ತಿಂಗಳಿಗೆ 30 ಬಸ್‌ಗೆ ಹೊಸ ಬಣ್ಣ: ನಗರ ವಿಭಾಗದಲ್ಲಿ ಪ್ರತಿ ತಿಂಗಳು 30ರಿಂದ 40 ಬಸ್‌ಗಳು ಎಫ್‌ಸಿಗೆ ಬರುತ್ತವೆ. ಪ್ರತಿವರ್ಷವೂ ಸಾರಿಗೆ ಬಸ್‌ಗಳನ್ನು ಎಫ್‌ಸಿ ಮಾಡಿಸಬೇಕಾದ ನಿಯಮವಿದ್ದು, ಅದಕ್ಕೆ ಅನುಗುಣವಾಗಿ ಪ್ರತಿ ತಿಂಗಳು ನಿಗದಿತ ಬಸ್ಸುಗಳು ಎಫ್‌ಸಿಗೆ ಬರುತ್ತವೆ. ಎಫ್‌ಸಿ ಪರೀಕ್ಷೆಗೆ ಬರುವ ಮುನ್ನವೇ ನಗರ ಸಾರಿಗೆ ಬಸ್ಸುಗಳು ಹೊಸ ಬಣ್ಣದಲ್ಲಿ ಗಮನ ಸೆಳೆಯುತ್ತಿವೆ. ಹೀಗಾಗಿ ಪ್ರತಿ ತಿಂಗಳು 30ಕ್ಕೂ ಹೆಚ್ಚು ಬಸ್ಸುಗಳು ಹೊಸ ಬಣ್ಣಕ್ಕೆ ತಿರುಗುತ್ತಿವೆ.

ಗುಜರಿ ಸೇರುವ ಬಸ್ಸಿಗೆ ಹೊಸ ಬಣ್ಣವಿಲ್ಲ: ಮುಂದಿನ 2–3 ತಿಂಗಳಲ್ಲಿ ಗುಜರಿಗೆ ಸೇರುವ ಬಸ್‌ಗಳಿಗೆ ಹೊಸ ಬಣ್ಣ ಬಳಿಯದಿರಲು ನಿರ್ಧರಿಸಲಾಗಿದೆ. ಈ ಕಾರಣದಿಂದ ತಿಂಗಳಿಗೆ ಒಂದೆರಡು ಬಸ್‌ಗಳು ಹಳೆ ಬಣ್ಣದಲ್ಲಿಯೇ ಎಫ್‌ಸಿಗೆ ಬರುತ್ತವೆಯಾದರೂ, ಎರಡು–ಮೂರು ತಿಂಗಳಲ್ಲೇ ಗುಜರಿಯತ್ತ ಮುಖ ಮಾಡಲಿವೆ.

ಹಳೆ ಬಸ್ಸಿಗೆ ಹೊಸ ಬಾಡಿ: ಮೈಸೂರು ನಗರ ವಿಭಾಗದಲ್ಲಿ ಇಂಜಿನ್ ಸುಸ್ಥಿತಿಯಲ್ಲಿದ್ದು, ಅದರ ಬಾಡಿ ಹಾಳಾಗಿದ್ದ ಬಸ್‌ಗಳಿಗೆ ಹೊಸದಾಗಿ ಬಾಡಿ ಕಟ್ಟಲು ಇಲಾಖೆ ಮುಂದಾಗಿದೆ. ಈಗಾಗಲೇ ನಗರ ವಿಭಾಗದ 6 ಬಸ್‌ಗಳಿಗೆ ಹೊಸದಾಗಿ ಬಾಡಿ ಕಟ್ಟಿ ಪ್ರಯಾಣಿಕರ ಸೇವೆಗೆ ಬಳಸಲಾಗುತ್ತಿದೆ. ಸುಮಾರು 3 ರಿಂದ 4 ಲಕ್ಷ ರೂ. ವೆಚ್ಚದಲ್ಲಿ ಬಾಡಿ ಕಟ್ಟಲಾಗುತ್ತಿದ್ದು, ಆ ಹಳೆಯ ಬಸ್ಸುಗಳು ಹೊಸ ಬಸ್‌ಗಳಂತೆ ಕಾಣುತ್ತಿವೆ.

> “ ಮೈಸೂರು ನಗರ ಸಾರಿಗೆ ಬಸ್‌ಗಳ ಬಣ್ಣವನ್ನು ಹಲವು ವರ್ಷದ ಬಳಿಕ ಬದಲಿಸಲಾಗುತ್ತಿದೆ. ಕಳೆದ 3–4 ತಿಂಗಳ ಹಿಂದೆಯಷ್ಟೇ ನಗರ ವಿಭಾಗಕ್ಕೆ ಬಂದ ಹೊಸ ಬಸ್ಸುಗಳು ಬಿಳಿ ಹಾಗೂ ಆಕಾಶ ನೀಲಿ ಬಣ್ಣದಿಂದ ಕೂಡಿತ್ತು. ಆ ಬಸ್ಸುಗಳ ಬಣ್ಣವನ್ನು ಪ್ರಯಾಣಿಕರು ಹೆಚ್ಚಾಗಿ ಇಷ್ಟಪಟ್ಟಿದ್ದರು. ಆ ಕಾರಣದಿಂದ ಹಳೆಯ ಬಸ್‌ಗಳಿಗೂ ಹೊಸ ಬಣ್ಣಕ್ಕೆ ಮಾರ್ಪಡಿಸಲಾಗುತ್ತಿದೆ. ಎಫ್‌ಸಿಗೆ ಬಂದ ಸಂದರ್ಭದಲ್ಲಿ ಎಲ್ಲಾ ಬಸ್ಸುಗಳು ಬಿಳಿ ಹಾಗೂ ಆಕಾಶ ನೀಲಿ ಬಣ್ಣ ಹೊಂದಿರುತ್ತವೆ. ಇದರಿಂದ ನಗರ ಸಾರಿಗೆ ಬಸ್ಸುಗಳು ಪ್ರಯಾಣಿಕರ ಗಮನ ಸೆಳೆಯುತ್ತಿವೆ.
>
> –ಹೆಚ್.ಟಿ.ವೀರೇಶ್, ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು ನಗರ ವಿಭಾಗ

ಫೆ.4, ಶ್ರೀ ಚಾಮುಂಡೇಶ್ವರಿ ಅಮ್ಮನವರ ಕುಂಭಾಭಿಷೇಕ

ಮೈಸೂರು: ಮೈಸೂರಿನ ಕುಂಬಾರಕೊಪ್ಪಲಿನ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ಚಾಮುಂಡೇಶ್ವರಿ ಅಮ್ಮನವರ 35ನೇ ವರ್ಷದ ಕುಂಭಾಭಿಷೇಕ ಫೆ.4ರಂದು ಹಮ್ಮಿಕೊಳ್ಳಲಾಗಿದೆ. ಅಂದು ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ, ನಂತರ 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮೈಸೂರು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮುಡಾ ಮಾಜಿ ಅಧ್ಯಕ್ಷರಾದ ಹೆಚ್.ವಿ.ರಾಜೀವ್, ಸಿ.ಬಸವೇಗೌಡ, ಮಾಜಿ ಮೇಯರ್ ಆರ್.ಲಿಂಗಪ್ಪ, ಹಿರಿಯ ವಕೀಲ ಸಿ.ಬಸವರಾಜು, ಮುಖಂಡರಾದ ಸೋಮಣ್ಣ, ಗಣೇಶ್ ಪ್ರಭು, ವೆಂಕಟೇಶ್ ಭಾಗವಹಿಸುವರು. ದೇವಸ್ಥಾನದ ಧರ್ಮದರ್ಶಿ ನಿಂಗಪ್ಪ, ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ಗೌರವಾಧ್ಯಕ್ಷ ನಿಂಗಣ್ಣ, ಅಧ್ಯಕ್ಷ ಗಿರೀಶ್‌ಗೌಡ, ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಕಾರ್ಯದರ್ಶಿ ಮಲ್ಲೇಗೌಡ, ಖಜಾಂಚಿ ರಾಜಣ್ಣ, ಸಹ ಕಾರ್ಯದರ್ಶಿ ಲಕ್ಷ್ಮಣ, ದೇವಸ್ಥಾನ ಜೀರ್ಣೋದ್ಧಾರದ ದಾನಿ ಎಂ.ದೇಸಿಗೌಡ ಉಪಸ್ಥಿತರಿರುವರು.

ನಟನದಲ್ಲಿ 'ಹುಚ್ಚರ ಸಂತೆ'

ಮೈಸೂರು,ಜ.30–ರಾಮಕೃಷ್ಣನಗರದಲ್ಲಿರುವ ಮಂಡ್ಯ ರಮೇಶ್ ಅವರ ನಟನ ರಂಗಶಾಲೆಯಲ್ಲಿ ಫೆ.2ರಂದು ಸಂಜೆ 6.30ಕ್ಕೆ ಧಾರವಾಡದ ಟೂರಿಂಗ್ ಟಾಕೀಸ್ ಪ್ರಸ್ತುತಪಡಿಸುವ ಹಾಸ್ಯ ನಾಟಕ 'ಹುಚ್ಚರ ಸಂತೆ' ನಾಟಕ ಪ್ರದರ್ಶನಗೊಳ್ಳಲಿದೆ. ನಾಟಕದ ರಚನೆ ಮತ್ತು ನಿರ್ದೇಶನ ಉಮೇಶ್ ತೇಲಿ ಅವರದ್ದು. ಉತ್ತರ ಕರ್ನಾಟಕ ಭಾಷೆಯ ದೇಸೀ ಸೊಗಡಿನ ಈ ನಾಟಕ 204ನೇ ಪ್ರದರ್ಶನದತ್ತ ದಾಪುಗಾಲಿಡುತ್ತಿದೆ. ರಂಗಾಸಕ್ತರು ಮಾಹಿತಿಗಾಗಿ ಮೊ.7259537777 ಸಂಪರ್ಕಿಸಬಹುದು.

ಫೆ.2, ಜಿಲ್ಲಾ 255ರ ಪ್ರಥಮ ವಾರ್ಷಿಕೋತ್ಸವ

ಮೈಸೂರು, ಜ.30(ಜಿಎ)–ಅಸೋಸಿಯೇಷನ್ ಆಫ್ ಅಲಯನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಸಂಸ್ಥೆ ವತಿಯಿಂದ ಜಿಲ್ಲೆ 255ರ ಪ್ರಥಮ ವಾರ್ಷಿಕ ಜಿಲ್ಲಾ ಸಮಾವೇಶವನ್ನು ಫೆ.2ರಂದು ಬೆಳಗ್ಗೆ 9 ಗಂಟೆಗೆ ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕ್ಲಬ್‌ನ ಜಿಲ್ಲಾ ಗವರ್ನರ್ ಎಂ.ಎನ್.ಬಾಲಕೃಷ್ಣರಾಜು ಈ ವಿಷಯ ತಿಳಿಸಿ, ಇದು ಭಾರತದಲ್ಲಿಯೇ ಹುಟ್ಟಿ, ವಿದೇಶಗಳಲ್ಲಿಯೂ ಹರಡಿರುವ ಸೇವಾ ಸಂಸ್ಥೆಯಾಗಿದೆ. ಅಂದಿನ ಕಾರ್ಯಕ್ರಮದಲ್ಲಿ ಸಂಸ್ಥಾಪಕರಾದ ತಿರುಪತಿರಾಜ್, ನಾಗರಾಜ ವಿ.ಬೈರಿ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಇನ್ನಿತರರು ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲಾ 30 ಕ್ಲಬ್‌ನ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಸುಮಾರು 300 ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಗರಾಜ ವಿ.ಬೈರಿ, ಕೃಷ್ಣೋಜಿರಾವ್, ಡಾ.ರಾಜು, ಬೆಟ್ಟೇಗೌಡ, ಉಷಾ ನಂದಿನಿ ಉಪಸ್ಥಿತರಿದ್ದರು.

ಸಾಧನೆ-ಕೊಡುಗೆ ಮೂಲಕ ವಿಶ್ರಾಂತ ಕುಲಪತಿ

ಪ್ರೊ.ಕೆ.ಎಸ್.ರಂಗಪ್ಪ ಮೈಸೂರಿನ ಸ್ಫೂರ್ತಿ

ಪ್ರೊ.ಕೆ.ಎಸ್.ರಂಗಪ್ಪ ಅಭಿಮಾನಿ ಬಳಗದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಸಂಸದ ಯದುವೀರ ಒಡೆಯರ್



ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಗುರುವಾರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು.

ಮೈಸೂರು,ಜ.30(ಪಿಎಂ)– ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತಮ್ಮ ಅವಧಿಯಲ್ಲಿ ಮೈಸೂರು ವಿವಿಗೆ ಅನೇಕ ಕೊಡುಗೆಗಳನ್ನು ನೀಡಿದ್ದು, ವಿಜ್ಞಾನಿಯಾಗಿಯೂ ಸಂಶೋಧನಾ ಕ್ಷೇತ್ರದಲ್ಲಿ ಅಗಾಧ ಸಾಧನೆ ಮೆರೆದಿದ್ದಾರೆ. ಆ ಮೂಲಕ ಅವರು ಮೈಸೂರಿನ ಸ್ಫೂರ್ತಿಯಾಗಿದ್ದಾರೆ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮಾನ ವ್ಯಕ್ತಪಡಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಜ್ಞಾನ ವಿಜ್ಞಾನ ಸಾಮ್ರಾಟ್ ಪ್ರೊ.ಕೆ.ಎಸ್.ರಂಗಪ್ಪ ಅಭಿಮಾನಿ ಬಳಗದ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ಸನ್ಮಾನ ಮತ್ತು 9ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಹಲವು ವರ್ಷಗಳಿಂದ ಪ್ರೊ.ಕೆಎಸ್.ರಂಗಪ್ಪ ನನಗೆ ಪರಿಚಿತರು. ಮೈಸೂರು ವಿವಿ ಶತಮಾನೋತ್ಸವ ಆಚರಣೆಯನ್ನು ಬಹಳ ಯಶಸ್ವಿಯಾಗಿ ಮಾಡಿದರು. ಜೊತೆಗೆ ಅನೇಕ ಅಭಿವೃದ್ಧಿಗೂ ನಾಂದಿ ಹಾಡಿ, ಮೈಸೂರು ವಿವಿಗೆ ಅಗತ್ಯವಿರುವ ಮೂಲಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು ಎಂದು ಹೇಳಿದರು.

ಭಾರತೀಯ ಪರಂಪರೆಯಲ್ಲಿ ನಮಗೆ ಯುಗಾದಿ ಹೊಸ ವರ್ಷದ ಆರಂಭವಾಗಿದೆ. ಈ ಸಂದರ್ಭದಲ್ಲಿ ನಾವು ಪಂಚಾಂಗಕ್ಕೆ ಪೂಜೆ ಮಾಡಿ ಅದರಲ್ಲಿರುವ ಮಾಹಿತಿಯಂತೆ ನಮ್ಮ ಕಾರ್ಯಕ್ರಮಗಳು ರೂಪಿಸಿಕೊಳ್ಳುತ್ತೇವೆ. ಆದರೂ 250 ವರ್ಷದಿಂದ ರೂಢಿಗೆ ಬಂದಿರುವ ಆಂಗ್ಲ ಸಂವತ್ಸರದ ಕ್ಯಾಲೆಂಡರ್ ಅನ್ನೂ ಜೊತೆಯಲ್ಲಿ ಕೊಂಡೊಯ್ಯುತ್ತಿದ್ದೇವೆ. ಆ ಮೂಲಕ ಭಾರತದಲ್ಲಿ ಅದರದ್ದೂ ಒಂದು ಪರಂಪರೆ ಸೃಷ್ಟಿಯಾಗಿದೆ. ಆಂಗ್ಲ ಸಂವತ್ಸರ ಕ್ಯಾಲೆಂಡರ್ ಪಾಲನೆ ಮಾಡುವುದು ಅನಿವಾರ್ಯವಾಗಿದೆ ಎಂದರು.

ಅತಿಥಿಯಾಗಿ ಪಾಲ್ಗೊಂಡಿದ್ದ ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ರಾಜು ಮಾತನಾಡಿ, ಕೇವಲ ಒಂದೇ ಜಾತಿಗೆ ಸೀಮಿತವಾಗಿದ್ದ ಮೈಸೂರು ಸಂಸ್ಥಾನದ ಆಡಳಿತದ ಉದ್ಯೋಗಗಳು ಮತ್ತು ಶಿಕ್ಷಣವನ್ನು ಸಾರ್ವಜನಿಕ ಹಕ್ಕೆಂದು ಘೋಷಿಸಿ ಹಿಂದುಳಿದವರು, ಪರಿಶಿಷ್ಟ ಸಮುದಾಯಗಳಿಗೂ ಅವಕಾಶ ಕಲ್ಪಿಸಿದವರು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್. ಅವರ ಕುಡಿ (ಯದುವೀರ ಒಡೆಯರ್) ನಮ್ಮೊಂದಿಗೆ ಇಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ನಿಜಕ್ಕೂ ಒಂದು ಗೌರವವೇ ಸರಿ ಎಂದು ಹೇಳಿದರು.

ನಾನು ಮೈಸೂರು ಪ್ರಾಂತ್ಯದಲ್ಲಿ 18 ವರ್ಷಗಳ ಕಾಲ ಹಲವು ಹುದ್ದೆಗಳನ್ನು ನಿಭಾಯಿಸಿದ್ದೇನೆ. ಬಂಡೀಪುರ ಯೋಜನಾ ನಿರ್ದೇಶಕನಾಗಿದ್ದ ಅವಧಿಯಲ್ಲೇ ಅಲ್ಲಿನ ಎರಡು ರಸ್ತೆಗಳಲ್ಲಿ ರಾತ್ರಿ ಸಂಚಾರಕ್ಕೆ ನಿರ್ಬಂಧ ವಿಧಿಸಲು ಕ್ರಮ ವಹಿಸಲಾಯಿತು. ಇನ್ನೂ ಅದೇ ಆದೇಶ ಮುಂದುವರೆದಿದೆ. ಈಗ ವಯನಾಡು ಸಂಸದರು ರಾತ್ರಿ ಸಂಚಾರಕ್ಕೆ ಮುಕ್ತಗೊಳಿಸುವ ಹೇಳಿಕೆ ನೀಡಿದ್ದಾರೆ. ಇದಕ್ಕೆ ಅವಕಾಶವಾಗದಂತೆ ತಾವು ಗಮನ ಹರಿಸಬೇಕೆಂದು ಯದುವೀರ ಒಡೆಯರ್ ಅವರಲ್ಲಿ ಕೋರಿದರು.

ಮೈಸೂರು ವಿವಿ ವಿಶ್ರಾಂತ ಕುಲಪತಿಗಳಾದ ಪ್ರೊ.ಕೆಎಸ್.ರಂಗಪ್ಪ ಪ್ರೊ.ಹೇಮಂತ್ ಕುಮಾರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಶ್ರೀಕಂಠಸ್ವಾಮಿ, ಅಭಿಮಾನಿ ಬಳಗದ ಅಧ್ಯಕ್ಷ ಯರಿಯೂರು ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

ನಮ್ಮ ದೇಶ ಮೊದಲಾಗಲು ಯದುವೀರ್, ಡಾ.ಮಂಜುನಾಥ್ ಅವರಂತಹವರು ಸಂಸತ್‌ನಲ್ಲಿರಬೇಕು

ಸನ್ಮಾನ ಸ್ವೀಕರಿಸಿದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಮಾತನಾಡಿ, ಸಂಸದ ಯದುವೀರ ಒಡೆಯರ್ ಕಾರ್ಯಕ್ರಮಕ್ಕೆ ಬಂದಿರುವುದೇ ಒಂದು ಗೌರವ. ದೇಶದ ರಾಜಕಾರಣಕ್ಕೆ ಯದುವೀರ ಒಡೆಯರ್, ಡಾ.ಸಿ.ಎನ್.ಮಂಜುನಾಥ್ ಅವರಂತಹವರು ಪ್ರವೇಶಿಸಿರುವುದು ಶುಭ ಸೂಚಕ. ದೇಶದ ಪ್ರಗತಿಗಾಗಿ ಇಂತಹವರು ಸಂಸತ್‌ಗೆ ಪ್ರವೇಶ ಮಾಡುವುದು ಅಗತ್ಯವಾಗಿದೆ ಎಂದು ಹೇಳಿದರು.


ನಾನು 25 ದೇಶಗಳಲ್ಲಿ ರಾಜಕೀಯ ವ್ಯವಸ್ಥೆ ನೋಡಿದ್ದೇನೆ. 10 ದೇಶಗಳ ವಿದ್ಯಾಭ್ಯಾಸ ಕಂಡಿದ್ದೇನೆ ಆದರೆ ಅಮ ಸ್ಥಿತಿಗೆ ಹೋಲಿಸಿದರೆ ನಮ್ಮ ದೇಶ ಸಾಕಷ್ಟು ಹಿಂದೆಯೇ ಉಳಿದಿದೆ. ಅದಾಗ್ಯೂ ನಮ್ಮ ದೇಶದಲ್ಲಿರುವ ಬುದ್ಧಿವಂತಿಕೆ ಮತ್ತು ಸಂಸ್ಕೃತಿ ಬೇರೆ ಯಾವುದೇ ದೇಶದಲ್ಲಿ ಇಲ್ಲ. ನಮ್ಮ ದೇಶ ಪ್ರಪಂಚಕ್ಕೆ ಮೊದಲಾಗಬೇಕಾದರೆ ಯದುವೀರ್ ಒಡೆಯರ್, ಡಾ.ಮಂಜುನಾಥ್ ಅವರಂತಹವರು ಸಂಸತ್ ಪ್ರವೇಶಿಸಬೇಕು. ನಾವೆಲ್ಲರೂ ಇಂತಹವರನ್ನು ರಾಜಕಾರಣದಲ್ಲಿ ಬೆಂಬಲಿಸಬೇಕು. ದೇಶದ ಅಭಿವೃದ್ಧಿಗೆ ಇಂತಹವರು ಅಗತ್ಯ. ಆದರೆ ಇಂದಿನ ನಮ್ಮ ದೇಶದ ರಾಜಕಾರಣದಲ್ಲಿ ಎಂಥೇಂತವರೋ ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವರಿಂದ ದೇಶದ ಪ್ರಗತಿ ಸಾಧ್ಯವಿಲ್ಲ ಎಂದರು.

ಲ್ಯಾಪ್‌ಟಾಪ್, ಮೊಬೈಲ್ ವಾರಸುದಾರರ ಪತ್ತೆಗೆ ಮನವಿ

ಮೈಸೂರು, ಜ.30– ಮೈಸೂರು ರೈಲ್ವೆ ಪೊಲೀಸರು ಕಳೆದ ವರ್ಷ ಆರೋಪಿಯಿಂದ ವಶಪಡಿಸಿಕೊಂಡಿರುವ ಲ್ಯಾಪ್‌ಟಾಪ್ ಹಾಗೂ ಮೊಬೈಲ್‌ಗಳ ವಾರಸುದಾರರು ಸಂಬಂಧಪಟ್ಟ ದಾಖಲೆಗಳೊಂದಿಗೆ ಮೈಸೂರು ರೈಲ್ವೆ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ. ವಾರಸುದಾರರು ಪತ್ತೆಯಾಗದ ಹಿನ್ನೆಲೆಯಲ್ಲಿ ನ್ಯಾಯಾಲಯದ ಆದೇಶದಂತೆ ರೈಲ್ವೆ ಪೊಲೀಸರು ಪತ್ರಿಕಾ ಪ್ರಕಟಣೆ ನೀಡಿದ್ದು, ವಿವಿಧ ಮಾಡೆಲ್‌ನ ಮೂರು ಹೆಚ್‌ಪಿ ಕಂಪನಿಯ ಲ್ಯಾಪ್‌ಟಾಪ್, ಒಂದು ಲೆನೋವಾ ಕಂಪನಿ ಲ್ಯಾಪ್‌ಟಾಪ್, ವಿವಿಧ ಕಂಪನಿಯ ಆರು ಮೊಬೈಲ್‌ಗಳು ಮತ್ತು ಕಪ್ಪು ಬಣ್ಣದ ನಾಲ್ಕು ಬ್ಯಾಗ್‌ಗಳ ವಾರಸುದಾರರು 15 ದಿನಗಳೊಳಗೆ ತಮ್ಮ ವಸ್ತುಗಳಿಗೆ ಸಂಬಂಧಿಸಿದ ದಾಖಲೆಗಳೊಂದಿಗೆ ಸಂಪರ್ಕಿಸಲು ಮನವಿ ಮಾಡಿದ್ದಾರೆ.

ದೇಶ - ವಿದೇಶ

ಅಮೆರಿಕನ್ ಏರ್‌ಲೈನ್ಸ್ ಅಪಘಾತ: 64 ಮಂದಿ ಸಾವಿನ ಶಂಕೆ




ವಾಷಿಂಗ್ಟನ್: ಪಿಎಸ್‌ಎ ನಿರ್ವಹಣೆಯ ಅಮೆರಿಕನ್ ಏರ್‌ಲೈನ್ಸ್ ವಾಣಿಜ್ಯ ವಿಮಾನ ನಿನ್ನೆ ರಾತ್ರಿ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಮಿಲಿಟರಿ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಪೊಟೊಮ್ಯಾಕ್ ನದಿಗೆ ಬಿದ್ದು ವಿಮಾನದಲ್ಲಿದ್ದ ಎಲ್ಲಾ 64 ಮಂದಿ ಮೃತಪಟ್ಟಿರುವ ಶಂಕೆಯಿದೆ. ಈಗಾಗಲೇ ಇಬ್ಬರ ಮೃತದೇಹಗಳನ್ನು ರಕ್ಷಣಾ ಕಾರ್ಯ ತಂಡ ಹೊರತೆಗೆದಿದೆ. ನದಿಯಿಂದ ಇಬ್ಬರ ಶವಗಳನ್ನು ಹೊರತೆಗೆಯಲಾಗಿದ್ದು, ಅಧಿಕಾರಿಗಳು ಇನ್ನುಳಿದವರಿಗೆ ಹುಡುಕಾಟ ನಡೆಸುತ್ತಿದ್ದಾರೆ ಎಂದು ಡಬ್ಲ್ಯೂಬಿಎಎಲ್ ಟಿವಿ ವರದಿ ಮಾಡಿದೆ. ಸುಮಾರು 64 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ವಿಚಿಟಾ, ಕೆಎಸ್‌ನಿಂದ ರಾಷ್ಟ್ರದ ರಾಜಧಾನಿಗೆ ಪ್ರಯಾಣಿಸುತ್ತಿದ್ದ ವಿಮಾನವು ಮಿಲಿಟರಿ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದಿದೆ ಎಂದು ಸೆನೆಟರ್ ರೋಜರ್ ಮಾರ್ಷಲ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಕಾನ್ಸಾಸ್‌ನ ವಿಚಿಟಾದಿಂದ ಹೊರಟ ಪ್ರಾದೇಶಿಕ ಜೆಟ್ ವಿಮಾನ ನಿಲ್ದಾಣದ ರನ್‌ವೇ ಸಮೀಪಿಸುತ್ತಿದ್ದಾಗ ಮಿಲಿಟರಿ ಬ್ಲ್ಯಾಕ್‌ಹಾಕ್ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದಾಗ ರಾತ್ರಿ 9 ಗಂಟೆ ಸುಮಾರಿಗೆ ಮಿಡ್‌ಏರ್ ಅಪಘಾತ ಸಂಭವಿಸಿದೆ ಎಂದು ಎಫ್‌ಎಎ ತಿಳಿಸಿದೆ.

ಲೋಕಸಭಾ ಸ್ಪೀಕರ್‌ಗೆ ವಕ್ಫ್ ತಿದ್ದುಪಡಿ ಮಸೂದೆ ಸಲ್ಲಿಸಿದ ಜೆಪಿಸಿ

ನವದೆಹಲಿ: ವಕ್ಫ್ (ತಿದ್ದುಪಡಿ) ಮಸೂದೆಯನ್ನು ಪರಿಶೀಲಿಸುತ್ತಿರುವ ಸಂಸತ್ ಜಂಟಿ ಸಮಿತಿ (ಜೆಪಿಸಿ)ಯು ತನ್ನ ಕರಡು ವರದಿ ಮತ್ತು ಪ್ರಸ್ತಾವಿತ ಕಾನೂನಿನ ತಿದ್ದುಪಡಿ ಮಾಡಿದ ಆವೃತ್ತಿಯನ್ನು ಗುರುವಾರ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಲ್ಲಿಸಿದೆ.

ಜೆಪಿಸಿ ಅಧ್ಯಕ್ಷ ಜಗದಾಂಬಿಕಾ ಪಾಲ್ ಅವರು ಇಂದು ಓಂ ಬಿರ್ಲಾ ಅವರನ್ನು ಸಂಸತ್ ಭವನದ ಸ್ಪೀಕರ್ ಕಚೇರಿಯಲ್ಲಿ ಭೇಟಿಯಾಗಿ, ಪ್ರಸ್ತಾವಿತ ಕಾನೂನಿನ ತಿದ್ದುಪಡಿ ಮಸೂದೆಯ ಕರಡನ್ನು ಹಸ್ತಾಂತರಿಸಿದರು. ಆಡಳಿತಾರೂಢ ಬಿಜೆಪಿ ಸದಸ್ಯರು ಸೂಚಿಸಿದ ಬದಲಾವಣೆಗಳನ್ನು ಒಳಗೊಂಡಿರುವ ಜೆಪಿಸಿ ವರದಿಯನ್ನು ಸಮಿತಿಯು ಬುಧವಾರ ಬಹುಮತದಿಂದ ಅಂಗೀಕರಿಸಿತು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿರುವ ಪ್ರತಿಪಕ್ಷಗಳು, ಈ ಪ್ರಕ್ರಿಯೆಯು ಪ್ರಜಾಪ್ರಭುತ್ವ ವಿರೋಧಿ ಎಂದು ಟೀಕಿಸಿದ್ದಾರೆ. ವಕ್ಫ್(ತಿದ್ದುಪಡಿ) ಮಸೂದೆ–2024 ಅನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಕಳೆದ ವರ್ಷ ಆಗಸ್ಟ್‌ನಲ್ಲಿ ಲೋಕಸಭೆಯಲ್ಲಿ ಮಂಡಿಸಿದ್ದರು. ಇದಕ್ಕೆ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಮಸೂದೆಯನ್ನು 2024ರ ಆಗಸ್ಟ್ 8ರಂದು ಜಂಟಿ ಸಂಸದೀಯ ಸಮಿತಿಗೆ(ಜೆಪಿಸಿ) ಉಲ್ಲೇಖಿಸಲಾಗಿತ್ತು.

ಸೌದಿಯಲ್ಲಿ ಭೀಕರ ಅಪಘಾತ: 9 ಭಾರತೀಯರು ಸೇರಿ 15 ಮಂದಿ ಸಾವು



ಸೌದಿ ಅರೇಬಿಯಾ: ಸೌದಿ ಅರೇಬಿಯಾದ ಪಶ್ಚಿಮ ಪ್ರದೇಶದ ಜೆಡ್ಡಾ ಬಳಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ 9 ಭಾರತೀಯರು ಸೇರಿದಂತೆ 15 ಮಂದಿ ದುರಂತ ಸಾವನ್ನಪ್ಪಿದ್ದಾರೆ. ಈ ಅಪಘಾತದಲ್ಲಿ ನೇಪಾಳ ಮತ್ತು ಘಾನಾದ ತಲಾ ಮೂವರು ನಾಗರಿಕರು ಪ್ರಾಣ ಕಳೆದುಕೊಂಡಿದ್ದಾರೆ. ಇಂದು ಭಾರತೀಯ ರಾಯಭಾರ ಕಚೇರಿ ಅಪಘಾತವನ್ನು ದೃಢಪಡಿಸಿದ್ದು, ಮೃತರ ಕುಟುಂಬಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದೆ.

ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಕೂಡ ಈ ಅಪಘಾತದ ಬಗ್ಗೆ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಜೆಡ್ಡಾದಲ್ಲಿ ನಡೆದ ಈ ಭೀಕರ ರಸ್ತೆ ಅಪಘಾತದ ಬಗ್ಗೆ ಕೇಳಿ ದುಃಖಿತನಾಗಿದ್ದೇನೆ ಎಂದು ಇನ್ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ. ಈ ಎಲ್ಲಾ ಕಾರ್ಮಿಕರು ದಕ್ಷಿಣ ಬಂದರು ನಗರವಾದ ಜಿಜಾನ್‌ನಲ್ಲಿರುವ ತಮ್ಮ ಕೆಲಸದ ಸ್ಥಳದ ಕಡೆಗೆ ಹೋಗುತ್ತಿದ್ದರು. ಈ ಸಮಯದಲ್ಲಿ ಅವರ ಬಸ್ ಟ್ರೇಲರ್‌ಗೆ ಡಿಕ್ಕಿ ಹೊಡೆದಿದೆ. ಬಸ್ಸಿನಲ್ಲಿ ಒಟ್ಟು 26 ಜನರಿದ್ದು ಸ್ಥಳದಲ್ಲೇ 15 ಮಂದಿ ಸಾವನ್ನಪ್ಪಿದ್ದಾರೆ. ಇನ್ನುಳಿದ ಪ್ರಯಾಣಿಕರು ಗಾಯಗೊಂಡಿದ್ದು ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಪತ್ನಿಗೆ ಗುಂಡಿಕ್ಕಿ ಹತ್ಯೆ ನಂತರ, ತಾನೂ ಆತ್ಮಹತ್ಯೆಗೆ ಶರಣಾದ ಯೋಧ

ಭೋಪಾಲ್: ಭೋಪಾಲ್‌ನ ಮಿಸ್ರೋಡ್ ಪ್ರದೇಶದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ ಕೇಂದ್ರ ಮೀಸಲು ಪೊಲೀಸ್ ಪಡೆ(CRPF)ಯ ಯೋಧನೊಬ್ಬ ತನ್ನ ಪತ್ನಿಯನ್ನು ಗುಂಡಿಕ್ಕಿ ಕೊಂದು, ಬಳಿಕ ಅದೇ ರೈಫಲ್‌ನಿಂದ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಭೋಪಾಲ್ ಪೊಲೀಸ್ ನಿಯಂತ್ರಣ ಕೊಠಡಿ ಮತ್ತು ಡಯಲ್ 100 ತುರ್ತು ಸೇವೆಗೆ ಇಂದು ಬೆಳಗಿನ ಜಾವ 1.30 ರ ಸುಮಾರಿಗೆ ಕರೆ ಬಂದಿದೆ. ತನ್ನನ್ನು ತಾನು ಸಿಆರ್‌ಪಿಎಫ್ ಯೋಧ ರವಿಕಾಂತ್ ವರ್ಮಾ ಎಂದು ಹೇಳಿಕೊಂಡು ಕರೆ ಮಾಡಿದ್ದ ವ್ಯಕ್ತಿ, ತನ್ನ ಪತ್ನಿ ರೇಣು ವರ್ಮಾ ಅವರನ್ನು ಗುಂಡಿಕ್ಕಿ ಕೊಂದಿರುವುದಾಗಿ ಪೊಲೀಸರಿಗೆ ಮಾಹಿತಿ ನೀಡಿದ್ದಾನೆ.

ಮನೆಗೆ ಆಗಮಿಸಿದ ಅಧಿಕಾರಿಗಳು ಒಂದು ಕೋಣೆಯಲ್ಲಿ ಇಬ್ಬರು ಮಕ್ಕಳು ಅಳುತ್ತಿರುವುದನ್ನು ಕಂಡರು. ಆದರೆ 35 ವರ್ಷದ ರವಿಕಾಂತ್ ವರ್ಮಾ ಮತ್ತು 32 ವರ್ಷದ ರೇಣು ವರ್ಮಾ ಅವರ ರಕ್ತಸಿಕ್ತ ಶವಗಳು ಇನ್ನೊಂದು ಕೋಣೆಯಲ್ಲಿ ಬಿದ್ದಿದ್ದವು. ಶವಗಳ ಬಳಿ INSAS ರೈಫಲ್ ಪತ್ತೆಯಾಗಿದೆ. ಪ್ರಾಥಮಿಕ ತನಿಖೆ ಪ್ರಕಾರ ಸಿಆರ್‌ಪಿಎಫ್ ಯೋಧ ಮೊದಲು ತನ್ನ ಹೆಂಡತಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ನಂತರ ತಾನೂ ಶೂಟ್ ಮಾಡಿಕೊಂಡು ಸಾವಿಗೆ ಶರಣಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಾಕಿಸ್ತಾನಕ್ಕೆ ವಿದೇಶಿ ನೆರವು ಸ್ಥಗಿತಗೊಳಿಸಿದ ಟ್ರಂಪ್



ಇಸ್ಲಾಮಾಬಾದ್: ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಮೆರಿಕದ ಅಧ್ಯಕ್ಷರಾದ ಮೇಲೆ ಪಾಕಿಸ್ತಾನಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅವರು ಹೊರಡಿಸಿರುವ ಕಾರ್ಯನಿರ್ವಾಹಕ ಆದೇಶದ ನಂತರ ಅಮೆರಿಕ ಪಾಕಿಸ್ತಾನಕ್ಕೆ ನೀಡುವ ವಿದೇಶಿ ನೆರವನ್ನು ಮರು ಮೌಲ್ಯಮಾಪನದ ಉದ್ದೇಶದಿಂದ ತಾತ್ಕಾಲಿಕವಾಗಿ ಅಮಾನತುಗೊಳಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಅಮೆರಿಕದ ಈ ನಿರ್ಧಾರದಿಂದ ಸಾಂಸ್ಕೃತಿಕ ಪರಂಪರೆ ಸಂರಕ್ಷಣೆ ಪ್ರೋತ್ಸಾಹಿಸುವ 'ಸಾಂಸ್ಕೃತಿಕ ಸಂರಕ್ಷಣೆಗಾಗಿ ರಾಯಭಾರಿಗಳ ನಿಧಿ' ಯೋಜನೆ ಸೇರಿದಂತೆ ಪಾಕಿಸ್ತಾನದಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಅಭಿವೃದ್ಧಿಗಾಗಿನ ಅಮೆರಿಕದ ಏಜೆನ್ಸಿಯ ಹಲವು ಯೋಜನೆಗಳು ಸ್ಥಗಿತಗೊಂಡಿವೆ. ಟ್ರಂಪ್ ನಿರ್ಧಾರದಿಂದ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿದ 4 ಯೋಜನೆಗಳು, ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದ 5 ಯೋಜನೆಗಳು ಕೂಡ ಸ್ಥಗಿತಗೊಂಡಿವೆ ಎಂದು ವರದಿ ತಿಳಿಸಿದೆ. ಅವುಗಳಲ್ಲಿ ಸಾಮಾಜಿಕ ರಕ್ಷಣಾ ಚಟುವಟಿಕೆಗೆ ಸಂಬಂಧಿಸಿದ ಕಾರ್ಯಕ್ರಮ 2025ರ ಅಂತ್ಯದಲ್ಲಿ ರದ್ದಾಗಬಹುದು. ಅಮೆರಿಕದ ಕ್ರಮವು ಆರೋಗ್ಯ, ಕೃಷಿ, ಜೀವನೋಪಾಯ ಮತ್ತು ಆಹಾರ ಭದ್ರತೆ, ಪ್ರವಾಹ, ಹವಾಮಾನ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಅನೇಕ ಯೋಜನೆಗಳಿಗೂ ಹೊಡೆತ ನೀಡಿದೆ.

ಗಾಂಧೀಜಿ ಪುಣ್ಯತಿಥಿ ಭಾವಪೂರ್ಣ ಆಚರಣೆ

● ಮಡಿಕೇರಿಯಲ್ಲಿ ಚಿತಾಭಸ್ಮಕ್ಕೆ ಗೌರವ ಸಲ್ಲಿಕೆ ● ಗಾಂಧಿ ಮೈದಾನದವರೆಗೆ ಮೆರವಣಿಗೆ

ಮಡಿಕೇರಿ, ಜ.30–ಮಹಾತ್ಮ ಗಾಂಧೀಜಿ ಚಿತಾಭಸ್ಮಕ್ಕೆ ಗೌರವ ಸಲ್ಲಿಸುವ ಮೂಲಕ ಅವರ 77ನೇ ಪುಣ್ಯತಿಥಿಯನ್ನು ಹುತಾತ್ಮರ ದಿನವನ್ನಾಗಿ ನಗರದಲ್ಲಿ ಗುರುವಾರ ಭಾವಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾ ಖಜಾನೆಯಲ್ಲಿದ್ದ ಚಿತಾಭಸ್ಮದ ಕರಂಡಿಕೆಯನ್ನು ಜಿಲ್ಲಾಡಳಿತ, ಸರ್ವೋದಯ ಸಮಿತಿ ಪ್ರಮುಖರು ಜಿಲ್ಲಾ ಪೊಲೀಸ್ ಬ್ಯಾಂಡ್‌ನೊಂದಿಗೆ ನಗರದ ಜ.ತಿಮ್ಮಯ್ಯ ವೃತ್ತದ ಮೂಲಕ ಗಾಂಧಿ ಮಂಟಪದವರೆಗೆ ಮೆರವಣಿಗೆಯಲ್ಲಿ ಕೊಂಡೊಯ್ದು ಗಾಂಧಿ ಮೈದಾನಕ್ಕೆ ಆಗಮಿಸಿದರು. ಬಳಿಕ ಗಾಂಧಿ ಮಂಟಪದ ಮುಂಭಾಗ ಗಾಂಧೀಜಿ ಚಿತಾಭಸ್ಮಕ್ಕೆ ಜಿಲ್ಲಾ ಸಶಸ್ತ್ರ ಪೊಲೀಸ್ ಸಿಬ್ಬಂದಿ ಆಕಾಶಕ್ಕೆ ಗುಂಡು ಹಾರಿಸುವ ಹಾಗೂ ಮೌನಾಚರಣೆ ಮೂಲಕ ಗೌರವ ಸಲ್ಲಿಸಿದರು.



ಮಡಿಕೇರಿ ಜಿಲ್ಲಾ ಖಜಾನೆಯಿಂದ ಗಾಂಧೀಜಿ ಚಿತಾಭಸ್ಮದ ಕರಂಡಿಕೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ, ಗಾಂಧಿ ಮಂಟಪದವರೆಗೆ ಮೆರವಣಿಗೆಯಲ್ಲಿ ಕೊಂಡೊಯ್ದರು.

ಪುಷ್ಪಾರ್ಚನೆಯೊಂದಿಗೆ ನಮನ: ಗಾಂಧೀಜಿ ಚಿತಾಭಸ್ಮ ಮತ್ತು ಭಾವಚಿತ್ರಕ್ಕೆ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಸರ್ವೋದ ಸಮಿತಿ ಅಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಎಡಿಸಿ ಐಶ್ವರ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಪ್ರೊಬೇಷನರಿ ಐಪಿಎಸ್ ಅಧಿಕಾರಿ ಬೆನಕ ಪ್ರಸಾದ್, ತಹಸೀಲ್ದಾರ್ ಪ್ರವೀಣ್, ನಗರಸಭೆ ಪೌರಾಯುಕ್ತ ರಮೇಶ್, ಸರ್ವೋದಯ ಸಮಿತಿ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಎಸ್.ಐ.ಮುನೀರ್ ಅಹಮ್ಮದ್, ಅಂಬೆಕಲ್ಲು ನವೀನ್, ಪುದಿಯನೆರವನ ರೇವತಿ ರಮೇಶ್, ಎ.ಸಿ.ದೇವಯ್ಯ, ವಾಸು ಪುಟ್ಟಯ್ಯ, ಪ್ರಭು ರೈ, ವೆಂಕಟೇಶ್, ಕಾನೆಹಿತ್ಲು ಮೊಣ್ಣಪ್ಪ, ಮೊಂತಿ ಗಣೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ್, ಮಣಜೂರು ಮಂಜುನಾಥ್, ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಮ್ಮಿ ಸಿಕ್ವೇರಾ ಮತ್ತಿತರ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ಸರ್ವಧರ್ಮ ಪ್ರಾರ್ಥನೆ: ಗಾಂಧೀಜಿ ಪುಣ್ಯತಿಥಿ ಅಂಗವಾಗಿ ಶ್ರೀ ಓಂಕಾರೇಶ್ವರ ದೇವಾಲಯ ಪ್ರಧಾನ ಅರ್ಚಕ ಸಂತೋಷ್ ಭಟ್ ಅವರಿಂದ ಭಗವದ್ಗೀತೆ, ಸಂತ ಮೈಕೆಲರ ಚರ್ಚ್‌ನ ರೆ.ಫಾ.ದೀಪಕ್ ರಾಜ್ ಅವರಿಂದ ಬೈಬಲ್ ಮತ್ತು ಮೌಲಾನಾ ಇಜಾಜ್ ಅವರಿಂದ ಕುರಾನ್ ಪಠಿಸಲಾಯಿತು. ಇದೇ ಸಂದರ್ಭ ಸಂತ ಮೈಕೆಲರ ಶಾಲಾ ವಿದ್ಯಾರ್ಥಿಗಳು, ಭಾರತೀಯ ಸೇವಾದಳ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳು ಗಾಂಧೀಜಿಗೆ ಪ್ರಿಯವಾದ ಭಜನೆಗಳನ್ನು ಹಾಡಿದರು.

ಗಾಂಧಿ ಸ್ಮಾರಕ ನಿರ್ಮಾಣ

ಮುಂದಿನ ವರ್ಷ ಜ.30ರ ಒಳಗಾಗಿ ಗಾಂಧಿ ಸ್ಮಾರಕ ಮತ್ತು ಉದ್ಯಾನ ನಿರ್ಮಿಸಿ, ಚಿತಾಭಸ್ಮವನ್ನು ಸ್ಮಾರಕದಲ್ಲಿ ಸಂರಕ್ಷಿಸಿ ಸಾರ್ವಜನಿಕರ ವೀಕ್ಷಣೆಗೆ ಅನುವು ಮಾಡಿಕೊಡಲಾಗುವುದು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆರಾಮ ರಾಜನ್ ಮಾತನಾಡಿ, ಮಹಾತ್ಮ ಗಾಂಧಿ ಅವರ ಅಹಿಂಸೆ ಮಾರ್ಗ, ಸತ್ಯ ನಿಷ್ಠೆ ಆದರ್ಶಗಳ ಪಾಲನೆಯೇ ನಾವು ಅವರಿಗೆ ನೀಡುವ ನಿಜವಾದ ಗೌರವವಾಗಿದೆ. ಗಾಂಧಿ ಪುಣ್ಯತಿಥಿಯಂತಹ ಕಾರ್ಯಕ್ರಮ ಮೂಲಕ ಅವರ ಸಂದೇಶಗಳನ್ನು ಸಮಾಜಕ್ಕೆ ತಲುಪಿಸುವ ಕಾರ್ಯವಾಗಲಿ ಎಂದು ಹಾರೈಸಿದರು.

ಎಡಿಸಿ ಐಶ್ವರ್ಯ ಮಾತನಾಡಿ, ಕಳೆದ ಶತಮಾನದ ಅದ್ಭುತವೇ ಮಹಾತ್ಮ ಗಾಂಧೀಜಿ ಅವರಾಗಿದ್ದಾರೆ. ಬುದ್ಧನ ನೆಲದಲ್ಲಿ ಅಹಿಂಸಾ ತತ್ವವನ್ನು ಹುಟ್ಟು ಹಾಕಿದ ಮಹಾನ್ ಚೇತನ ಗಾಂಧೀಜಿ ಮಹಿಳಾ ಸಬಲೀಕರಣಕ್ಕೂ ಹೆಚ್ಚಿನ ಒತ್ತು ನೀಡಿದ್ದರು ಎಂದು ಸ್ಮರಿಸಿದರು.

ಅರ್ಚಕರ ಆರೋಗ್ಯ ವಿಚಾರಿಸಿದ ಶಾಸಕ ಪೊನ್ನಣ್ಣ



ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅರ್ಚಕ ವಿಘ್ನೇಶ್ ಭಟ್ ಅವರನ್ನು ಶಾಸಕ ಎ.ಎಸ್.ಪೊನ್ನಣ್ಣ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಮಡಿಕೇರಿ, ಜ.30–ಹಲ್ಲೆಗೆ ಒಳಗಾಗಿ ನಗರದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಟ್ಟೆಮಾಡು ಶ್ರೀ ಮಹಾಮೃತ್ಯುಂಜಯ ದೇವಾಲಯ ಪ್ರಧಾನ ಅರ್ಚಕ ವಿಘ್ನೇಶ್ ಭಟ್ ಮತ್ತು ಅವರ ತಾಯಿಯನ್ನು ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಇದೇ ವೇಳೆ ವೈದ್ಯರಿಂದ ಮಾಹಿತಿ ಪಡೆದ ಶಾಸಕರು, ಅರ್ಚಕರ ಕುಟುಂಬಕ್ಕೆ ಧೈರ್ಯ ತುಂಬಿ ಶೀಘ್ರ ಗುಣಮುಖರಾಗುವಂತೆ ಆಶಿಸಿದರು. ಅರ್ಚಕರ ಮೇಲೆ ನಡೆದ ಹಲ್ಲೆ ಘಟನೆ ಖಂಡಿಸಿದರು. ಹಲ್ಲೆ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು.

ಜಿಲ್ಲೆಯಲ್ಲಿ ಇಂತಹ ಘಟನೆಗಳು ನಡೆದಾಗ ಭಾವನೆಗಳಿಗೆ ಧಕ್ಕೆ ಆಗುವುದು ಸಹಜ. ಅದನ್ನೇ ಆಧಾರವಾಗಿಟ್ಟುಕೊಂಡು ಜಾತಿ, ಜನಾಂಗದ ನಡುವೆ ದ್ವೇಷ ಹರಡಿಸುವಂತಹ ಕೆಲಸ ಆಗಬಾರದು. ಇದು ಜನಾಂಗದ ನಡುವಿನ ಸಂಘರ್ಷವಲ್ಲ, ಯಾರೋ ಅಪರಾಧ ಮನಸ್ಥಿತಿಯ ಜನರು ಮಾಡಿರುವ ಕೆಲಸ ಎಂದರು. ಈ ಸಂದರ್ಭ ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಉಪಸ್ಥಿತರಿದ್ದರು.

ನಾಳೆ ವಿರಾಜಪೇಟೆಯಲ್ಲಿ ಪರಿಸರ ಸಂರಕ್ಷಣಾ ಜಾಥಾ



ಸುದ್ದಿಗೋಷ್ಠಿಯಲ್ಲಿ ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಬಿ.ಯು.ಮಾಚಯ್ಯ ಮಾತನಾಡಿದರು.

ವಿರಾಜಪೇಟೆ: ಕೊಡಗಿನ ನೆಲ–ಜಲ, ಪ್ರಕೃತಿ ರಕ್ಷಿಸುವ ನಿಟ್ಟಿನಲ್ಲಿ ಫೆ.1ರಂದು ನಗರದಲ್ಲಿ ಬೃಹತ್ ಪರಿಸರ ಸಂರಕ್ಷಣಾ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಕೊಡಗು ಪರಿಸರ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಬಿ.ಯು.ಮಾಚಯ್ಯ ತಿಳಿಸಿದರು.

ಪಟ್ಟಣದ ಪರಿಸರ ರಕ್ಷಣಾ ಹೋರಾಟ ಸಮಿತಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಡಗು ಚಿಕ್ಕಜಿಲ್ಲೆಯಾದರು ನೆಲ–ಜಲ, ಪ್ರಕೃತಿ ರಕ್ಷಣೆ ಮಾಡಬೇಕಾಗಿದೆ. ಆದ್ದರಿಂದ ನಗರದ ತೆಲುಗರ ಬೀದಿ ಮಾರಿಯಮ್ಮ ದೇವಸ್ಥಾನ ಬಳಿಯಿಂದ ಜಾಥಾ ನಡೆಸಲಾಗುವುದು. ಜೈನರ ಬೀದಿ, ಮುಖ್ಯರಸ್ತೆಯಲ್ಲಿ ಜಾಥಾ ಸಾಗಿ ಗಡಿಯಾರ ಕಂಬದ ಬಳಿ ಪರಿಸರದ ಬಗ್ಗೆ ಬೀದಿ ನಾಟಕದ ಮೂಲಕ ಜಾಗೃತಿ ಮೂಡಿಸಲಾಗುವುದು. ಜಾಥಾ ನಂತರ ತಾಲೂಕು ಮೈದಾನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಪರಿಸರ ಪ್ರೇಮಿಗಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಬೇಕೆ ಎಂದು ಮನವಿ ಮಾಡಿದರು.

ಸಮಿತಿ ಸಂಚಾಲಕ ಶಶಿ ಅಚ್ಚಪ್ಪ ಮಾತನಾಡಿ, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಪಕ್ಷಿಗಳ ಪ್ರೇಮಿ ಎಸ್.ವಿ.ನರಸಿಂಹನ್ ಭಾಷಣ ಮಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಉಪಾಧ್ಯಕ್ಷ ಟಿ.ಎನ್.ಕರುಣ್ ಕುಮಾರ್ ಶೆಟ್ಟಿ, ಕಾರ್ಯದರ್ಶಿ ಸುನಿತಾ ದಿನೇಶ್, ಸಹಕಾರ್ಯದರ್ಶಿ ಪಾಲೇಕಂಡ ರತ್ನಾ ಕರುಂಬಯ್ಯ ಉಪಸ್ಥಿತರಿದ್ದರು.



ಮಹೇಶ್ ಕುಮಾರ್ ಅಧಿಕಾರ ಸ್ವೀಕಾರ...

ವಿರಾಜಪೇಟೆ ನೂತನ ಡಿವೈಎಸ್‌ಪಿಯಾಗಿ ಅಧಿಕಾರ ಸ್ವೀಕರಿಸಿದ ಮಹೇಶ್ ಕುಮಾರ್ ಅವರನ್ನು ವಿರಾಜಪೇಟೆ ನಗರ ಠಾಣಾಧಿಕಾರಿ ಪ್ರಮೋದ್, ಹೂಗುಚ್ಛ ನೀಡಿ ಸ್ವಾಗತಿಸಿದರು.

ಕಡೆ ಭಾಗಕ್ಕೆ ಕಾವೇರಿ ನೀರು ಹರಿಸಲು ಆಗ್ರಹಿಸಿ ರೈತರ ಪ್ರತಿಭಟನೆ



ಮದ್ದೂರು ಕೊಪ್ಪ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸುತ್ತಿರುವ ರೈತರು.

ಮದ್ದೂರು: ಬೆಸಗರಹಳ್ಳಿ ಹಾಗೂ ಕೊಪ್ಪ ಹೋಬಳಿಯ ಕೊನೆ ಭಾಗದ ಗ್ರಾಮಗಳಿಗೆ ವಿಶ್ವೇಶ್ವರಯ್ಯ ನಾಲೆಯ ಮೂಲಕ ನೀರು ಹರಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಏಕೀಕರಣ ಸಮಿತಿ ವತಿಯಿಂದ ಬೆಸಗರಹಳ್ಳಿ ಅಡ್ಡ ರಸ್ತೆಯಲ್ಲಿ ಗುರುವಾರ ಪ್ರತಿಭಟನೆ ಮಾಡಲಾಯಿತು.

ರಸ್ತೆಗೆ ಜಾನುವಾರುಗಳ ಸಮೇತ ಎತ್ತಿನ ಗಾಡಿಗಳು ಹಾಗೂ ಟ್ರ್ಯಾಕ್ಟರ್‌ಗಳನ್ನು ತಂದು ಒಂದು ಗಂಟೆಗೂ ಅಧಿಕ ಕಾಲ ಮದ್ದೂರು ಕೊಪ್ಪ ಮಾರ್ಗದ ರಸ್ತೆ ಸಂಚಾರ ತಡೆದು ನೀರು ಹರಿಸದ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿದರು. ಇದರಿಂದ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ರೈತ ಮುಖಂಡ ಕೀಳಘಟ್ಟ ನಂಜುಂಡಯ್ಯ ಮಾತನಾಡಿ, ಬೆಸಗರಹಳ್ಳಿಯ ಕೊನೆ ಭಾಗ ಹಾಗೂ ಕೊಪ್ಪ ಕೊನೆಯ ಭಾಗಕ್ಕೆ ವಿಶ್ವೇಶ್ವರಯ್ಯ ನಾಲೆಯ ಮೂಲಕ ನೀರು ತಲುಪದಿರುವ ಕಾರಣ ಬೆಳೆಗಳು ಹಾಗೂ ತೆಂಗಿನ ಮರಗಳು ಒಣಗುತ್ತಿದೆ. ಶೀಘ್ರವಾಗಿ ನೀರು ಹರಿಸದೆ ಹೋದರೆ ಬೆಳೆಗಳು ಸಂಪೂರ್ಣವಾಗಿ ಒಣಗಿ ರೈತರಿಗೆ ಹೆಚ್ಚಿನ ಮಟ್ಟದಲ್ಲಿ ಆರ್ಥಿಕ ನಷ್ಟ ಉಂಟಾಗಲಿದೆ. ಆದ್ದರಿಂದ ಅಧಿಕಾರಿಗಳು ನೀರು ಹರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಮಾಡಿದರು.

ರೈತ ಮುಖಂಡ ಮಾತನಾಡಿ, ರೈತರಿಗೆ ಕೊಟ್ಟ ಭರವಸೆಯಂತೆ ಕೊನೆ ಭಾಗಕ್ಕೆ ನೀರುಣಿಸಲು ಮತ್ತು ಉಪ ನಾಲೆಗಳನ್ನು ದುರಸ್ತಿ ಮಾಡಿಸಿ ನಾಳೆಯಿಂದಲೇ ನೀರು ಸರಾಗವಾಗಿ ಕೊನೆ ಭಾಗಕ್ಕೆ ಹರಿಯುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕಾವೇರಿ ನೀರಾವರಿ ಇಲಾಖೆಯ ಕಾರ್ಯ ನಿರ್ವಾಹಕ ಅಭಿಯಂತರ ನಂಜುಂಡೇಗೌಡ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ ಮಾತನಾಡಿ, ಮಗು ನಾಲೆಗೆ ಬಿದ್ದಿದ್ದ ಕಾರಣ ನೀರನ್ನು ನಿಲ್ಲಿಸಲಾಗಿತ್ತೆ ವಿನಃ ಬೇರೆ ಯಾವ ಕಾರಣದಿಂದಲ್ಲ. ಇಂದಿನಿಂದಲೇ ನಾಲೆಗಳಿಗೆ ನೀರನ್ನು ಬಿಡುತ್ತಿದ್ದೇವೆ ಶುಕ್ರವಾರ ಬೆಸಗರಹಳ್ಳಿ ಹಾಗೂ ಕೊಪ್ಪದ ಕೊನೆ ಭಾಗಕ್ಕೆ ನೀರು ತಲುಪುವ ತನಕ ನೀರು ಹರಿಸುತ್ತೇವೆ ಎಂದು ಭರವಸೆ ನೀಡಿದರು ತದನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ರೈತ ಮುಖಂಡರಾದ ಸೊ.ಸಿ.ಪ್ರಕಾಶ್, ಪ್ರಭುಲಿಂಗು, ವೆಂಕಟೇಶ್, ರಾಮೇಗೌಡ, ಮರಿಲಿಂಗ, ದಿನೇಶ್, ಶಿವರಾಮು, ಚನ್ನಪ್ಪ ಮರಿಲಿಂಗು, ಲಿಂಗರಾಜು, ಯೋಗಾನಂದ, ಕೃಷ್ಣ ಉಮೇಶ್, ರಾಮಕೃಷ್ಣಯ್ಯ, ರಾಜು ಇದ್ದರು.

ಚಲಿಸುತ್ತಿದ್ದ ರೈಲಿಗೆ ಸಿಲುಕಿ 17 ಕುರಿಗಳ ಸಾವು

ಮಂಡ್ಯ: ನಾಯಿಗಳು ಅಟ್ಟಾಡಿಸಿದ ಪರಿಣಾಮ ಆತಂಕಗೊಂಡ ಕುರಿ ಮಂದೆ ದಿಕ್ಕಾಪಾಲಾಗಿ ಓಡಿದ್ದರಿಂದ 17 ಕುರಿಗಳು ರೈಲಿಗೆ ಸಿಲುಕಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಹೊಸಬೂದನೂರು ಬಳಿ ಸಂಭವಿಸಿದೆ.

ಹೊಸಬೂದನೂರು ಗ್ರಾಮದ ಜಯಮ್ಮ ಅವರಿಗೆ ಸೇರಿದ 17 ಕುರಿಗಳು ಮೃತಪಟ್ಟಿದ್ದು, ಸುಮಾರು 2 ಲಕ್ಷ ರೂ. ಗಳಿಗೂ ಹೆಚ್ಚು ನಷ್ಟ ಉಂಟಾಗಿದೆ.

ಜಯಮ್ಮ ಅವರು ಬಯಲಿನಲ್ಲಿ ಕುರಿ ಮಂದೆಯನ್ನು ಮೇಯಿಸಿಕೊಂಡು ಮನೆಗೆ ವಾಪಸ್ ಆಗುತ್ತಿದ್ದ ವೇಳೆ ನಾಯಿಗಳು ಅಟ್ಟಾಡಿಸಿದಾಗ ಚದುರಿದ ಕುರಿಗಳು ರೈಲ್ವೆ ಹಳಿ ದಾಟಲೆತ್ನಿಸಿದಾಗ ರೈಲಿಗೆ ಸಿಲುಕಿ ಮೃತಪಟ್ಟಿವೆ ಎಂದು ತಿಳಿಸಿದ್ದಾರೆ. ಸ್ಥಳಕ್ಕೆ ರೈಲ್ವೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಶಾಸಕರಿಂದ ವೈಯಕ್ತಿಕ ಪರಿಹಾರ: ಘಟನೆಯ ಸುದ್ದಿ ತಿಳಿದ ಶಾಸಕ ಪಿ.ರವಿಕುಮಾರ್‌ಗೌಡ ಅವರು ಕುರಿಗಳನ್ನು ಕಳೆದುಕೊಂಡು ನಷ್ಟಕ್ಕೀಡಾಗಿರುವ ಜಯಮ್ಮ ಅವರಿಗೆ ವೈಯಕ್ತಿಕವಾಗಿ ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

ನಾಳೆ ಉದ್ಯೋಗ ನೇರ ಸಂದರ್ಶನ

ಮಂಡ್ಯ, ಜ.30– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ॥ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಪಾಂಡವಪುರ, ಮೆ॥ಎಚ್.ಡಿ.ಎಫ್.ಸಿ ಲೈಫ್ ಇನ್ಶೂರೆನ್ಸ್, ಮೆ॥ ರಾಜ್ ಬಯೋ ಆರ್ಗಾನಿಕ್ಸ್ ಮತ್ತು ಮೆ॥ ಬಿ.ಜೆಟ್ ಫೈನಾನ್ಸ್ ಸಂಸ್ಥೆಗಳಲ್ಲಿ ಉದ್ಯೋಗ ಖಾಲಿಯಿದ್ದು, ಬೋಧನಾ ಅಧ್ಯಾಪಕರು, ಫೈನಾನ್ಷಿಯಲ್ ಕನ್ಸಲ್ಟೆಂಟ್, ಟೆಲಿಕಾಲಿಂಗ್ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಪದವಿ, ಸ್ನಾತಕೋತ್ತರ ಪದವಿ ಮತ್ತು ಬಿ.ಇ ಅಥವಾ ಡಿಪ್ಲೋಮೋ (ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್) ಉತ್ತೀರ್ಣರಾದ 18 ರಿಂದ 45 ವರ್ಷದೊಳಗಿನ ಅಭ್ಯರ್ಥಿಗಳು ಭಾಗವಹಿಸಬಹುದಾಗಿದ್ದು, ಆಸಕ್ತರು ಫೆ.1 ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಆರ್.ಟಿ.ಓ ಎದುರು ತಮ್ಮ ರೆಸ್ಯೂಮೆ/ ಬಯೋಡೇಟಾಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ರ 08232–295124,/9164642684/ 8970646629 ಸಂಪರ್ಕಿಸಬಹುದು.

ಫೆ.8ಕ್ಕೆ ಪಿಎಲ್‌ಡಿ ಬ್ಯಾಂಕ್ ಚುನಾವಣೆ: ಒಂದೇ ದಿನ 17 ಮಂದಿ ನಾಮಪತ್ರ ಸಲ್ಲಿಕೆ





ಕಾಂಗ್ರೆಸ್ ಮತ್ತು ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಗಳು ಚುನಾವಣಾಧಿಕಾರಿಗೆ ನಾಮಪತ್ರ ಸಲ್ಲಿಸುತ್ತಿರುವುದು.

ಕೆ.ಆರ್.ಪೇಟೆ, ಜ.30– ಫೆ.8ರಂದು ತಾಲೂಕು ಪ್ರಾಥಮಿಕ ಕೃಷಿ ಭೂ ಅಭಿವೃದ್ಧಿ ಸಹಕಾರ ಬ್ಯಾಂಕ್(ಪಿ.ಎಲ್.ಡಿ ಬ್ಯಾಂಕ್) ನೂತನ ಆಡಳಿತ ಮಂಡಳಿಯ 14 ನಿರ್ದೇಶಕರ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷಗಳ ಅಭ್ಯರ್ಥಿಗಳು ಸೇರಿದಂತೆ ಇಂದು ಒಂದೇ ದಿನ 17 ಮಂದಿ ನಾಮಪತ್ರ ಸಲ್ಲಿಸಿದ್ದು, ಇದೂವರೆವಿಗೂ 14 ಕ್ಷೇತ್ರಗಳಿಗೆ 29ಮಂದಿ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ.

1ನೇ ವೃತ್ತ(ಹೊಸಹೊಳಲು, ಕೆಆರ್.ಪೇಟೆ) ಕಾಂಗ್ರೆಸ್ ಅಭ್ಯರ್ಥಿಯಾಗಿ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಅವರ ಸಹೋದರ ವಿವೇಕಾನಂದ.ಕೆ.ಬಿ, 2ನೇ ವೃತ್ತದಿಂದ(ಅಗ್ರಹಾರಬಾಚಹಳ್ಳಿ–ಮಾಕವಳ್ಳಿ, ಹಿರೀಕಳಲೆ.ಗ್ರಾ.ಪಂ.) ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಕರೋಟಿ ಅನಿಲ್ ಮತ್ತು ಅಣ್ಣೇಚಾಕನಹಳ್ಳಿ ನಾಗರಾಜು ಹಾಗೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಿ.ಜೆ.ಮಂಜೇಗೌಡ, 3ನೇ ವೃತ್ತದಿಂದ(ಬಂಡಿಹೊಳೆ, ಹರಿಹರಪುರ ಗ್ರಾ.ಪಂ.) ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಪಿ.ಎಲ್.ಡಿ.ಬ್ಯಾಂಕ್ ಅಧ್ಯಕ್ಷ ಬಂಡಿಹೊಳೆ ಅಶೋಕ್‌ಕುಮಾರ್ ತಮ್ಮ ಅಪಾರ ಬೆಂಬಲಿಗರೊಂದಿಗೆ ತೆರಳಿ ಪಿ.ಎಲ್.ಡಿ ಬ್ಯಾಂಕ್ ಕಚೇರಿಯಲ್ಲಿ ನಾಮಪತ್ರ ಸಲ್ಲಿದ್ದಾರೆ.

4ನೇ ವೃತ್ತದಿಂದ(ಭಾರತೀಪುರ, ಚೌಡೇನಹಳ್ಳಿ, ಸಾರಂಗಿ, ಅಘಲಯ ಗ್ರಾಪಂ.) ಸುರೇಶ್.ಬಿ.ಎಸ್, 5ನೇ ವೃತ್ತದಿಂದ (ಮಾದಾಪುರ, ಕಿಕ್ಕೇರಿ, ಆನೆಗೊಳ, ದಬ್ಬೇಘಟ್ಟ, ಐಕನಹಳ್ಳಿ ಗ್ರಾಪಂ.): ದೇವೇಂದ್ರ 6ನೇ ವೃತ್ತದಿಂದ(ಸಂತೇಬಾಚಹಳ್ಳಿ, ರಂಗನಾಥಪುರ ಕ್ರಾಸ್ ಗ್ರಾ.ಪಂ) ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯ ಗೊರವಿ ಕುಮಾರ್ ತಮ್ಮ ಅಪಾರ ಬೆಂಬಲಿ ಗರೊಂದಿಗೆ ನಾಮಪತ್ರ ಸಲ್ಲಿಸಿದರು.

7ನೇ ವೃತ್ತದಿಂದ (ಶೀಳನೆರೆ, ಹರಳಹಳ್ಳಿ, ಸಿಂಧುಘಟ್ಟ) ಬೊಮ್ಮನಾಯಕನಹಳ್ಳಿ ಬಸವರಾಜು, ಎನ್.ಕೆ.ನಟರಾಜು, 8ನೇ (ಬಲ್ಲೇನಹಳ್ಳಿ, ಗಂಜಿಗೆರೆ) ವೃತ್ತದಿಂದ ಚಂದ್ರಶೇಖರ್, ಮತ್ತೀಕೆರೆ ಮಂಜು, ಕಾಶಿಮುರುಕನಹಳ್ಳಿ ಮಹದೇವಸ್ವಾಮಿ, 9ನೇ ವೃತ್ತದಿಂದ (ಬಳ್ಳೇಕೆರೆ–ಮುರುಕನಹಳ್ಳಿ) ಲಕ್ಷ್ಮಿದೇವಮ್ಮ, ಮಂಜುಳ.ಪಿ.ಜೆ, 10ನೇ ವೃತ್ತ (ತೆಂಡೇಕೆರೆ, ಬೂಕನಕೆರೆ, ಐಚನಹಳ್ಳಿ): ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಪಿಎಲ್‌ಡಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಬಣ್ಣೇನಹಳ್ಳಿ ಧನಂಜಯ.ಬಿ.ಜಿ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. 11ನೇ ವೃತ್ತದಿಂದ (ವಿಠಲಾಪುರ–ಮಡುವಿನಕೋಡಿ) ಕಾಂತರಾಜೇಗೌಡ, ಯಗಚಗುಪ್ಪೆ ಕುಮಾರ್, 12ನೇ ವೃತ್ತದಿಂದ(ಅಕ್ಕಿಹೆಬ್ಬಾಳು–ಸೋಮನಹಳ್ಳಿ,ಆಲಂಬಾಡಿಕಾವಲು ಗ್ರಾ.ಪಂ) ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಜಿ.ಪಂ.ಮಾಜಿ ಸದಸ್ಯ ಅಕ್ಕಿಹೆಬ್ಬಾಳು ಶ್ರೀನಿವಾಸ್ ತಮ್ಮ ನಾಮಪತ್ರ ಸಲ್ಲಿಸಿದರು. 13ನೇ ವೃತ್ತ(ಬೀರುವಳ್ಳಿ, ಮಂದಗೆರೆ ಗ್ರಾ.ಪಂ) ಇದೂವರೆವಿಗೂ ಯಾರೂ ನಾಮಪತ್ರ ಸಲ್ಲಿಸಿಲ್ಲ. 14ನೇ ವೃತ್ತದಿಂದ ತಾಲ್ಲೂಕು ವ್ಯಾಪ್ತಿಯ ಸಾಲ ಪಡೆಯದೇ ಇರುವ ಶೇರುದಾರರ ಕ್ಷೇತ್ರದಿಂದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷ ಅಂಜನೀಗೌಡ (ಕಟ್ಟಹಳ್ಳಿ ಪಾಪಣ್ಣ), ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಪುರಸಭೆಯ ಮಾಜಿ ಅಧ್ಯಕ್ಷ ಕೆ.ಟಿ.ಚಕ್ರಪಾಣಿ, ಭಾರತೀಪುರ ಪುಟ್ಟಣ್ಣ.ಎಸ್.ಗೌಡ, ಅಪ್ಪನಹಳ್ಳಿ ಎ.ಎಸ್.ನವೀನ್, ದೇವರಾಜು, ಜಾಗಿನಕೆರೆ ಅಶೋಕ್ ಹಾಗೂ 6ನೇ ವೃತ್ತದಿಂದ ಮಾಳಗೂರು ಜಗದೀಶ್ ಸೇರಿದಂತೆ ಒಟ್ಟು 29 ಮಂದಿ ತಮ್ಮ ನಾಮಪತ್ರವನ್ನು ಚುನಾವಣಾಧಿಕಾರಿ ಕೆ.ಸುಷ್ಮ ಅವರಿಗೆ ಸಲ್ಲಿಸಿದ್ದಾರೆ.

ಕುಷ್ಠರೋಗ ನಿರ್ಮೂಲನೆ ಪ್ರತಿಜ್ಞಾವಿಧಿ ಬೋಧನೆ...



ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿ ಚಾಮರಾಜನಗರ ಚಾಮರಾಜೇಶ್ವರ ದೇವಾಲಯ ಬಳಿಯಿಂದ ಆಯೋಜಿಸಿದ್ದ ಜಾಗೃತಿ ಜಾಥಾದಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್ ಕುಷ್ಠರೋಗ ನಿರ್ಮೂಲನೆ ಪ್ರತಿಜ್ಞಾವಿಧಿ ಬೋಧಿಸಿದರು. ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಚಿದಂಬರ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಚಂದ್ರಶೇಖರ್, ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಮೇಲ್ವಿಚಾರಕ ವೆಂಕಟೇಶ್, ನರ್ಸಿಂಗ್ ವಿದ್ಯಾರ್ಥಿಗಳು ಇದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ನಿವೃತ್ತ ನೌಕರರ ಪ್ರತಿಭಟನೆ

ಚಾಮರಾಜನಗರ, ಜ.30–ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಿವೃತ್ತ ನೌಕರರ ವೇದಿಕೆಯಿಂದ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ತಾಲೂಕು ಕಚೇರಿ ಮುಂಭಾಗ ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರ ಇಟ್ಟುಕೊಂಡು ಮೌನ ಪ್ರತಿಭಟನೆ ಆರಂಭಿಸಿದ ನಿವೃತ್ತ ನೌಕರರು, ಬೇಡಿಕೆಗಳನ್ನು ಈಡೇರಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.



ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಿವೃತ್ತ ನೌಕರರು ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

2022ರ ಜು.1ರಿಂದ 2024ರ ಜು.31ರ ಅವಧಿಯಲ್ಲಿ ನಿವೃತ್ತಿಯಾದ ನೌಕರರಿಗೆ 7ನೇ ವೇತನ ಆಯೋಗದ ಲೆಕ್ಕಾಚಾರ ಅನುಸಾರ ಡಿಸಿಆರ್‌ಜಿ ಕಮ್ಯುಟೇಶನ್, ಗಳಿಕೆ ರಜೆ ನಗದೀಕರಣಗಳ ನಿವೃತ್ತ ಆರ್ಥಿಕ ಸೌಲಭ್ಯವನ್ನು ನೀಡಬೇಕು ಎಂದು ಆಗ್ರಹಿಸಿದರು. ನಮ್ಮಗೆ ಸುಮಾರು 12 ರಿಂದ 22 ಲಕ್ಷರೂ. ಆರ್ಥಿಕ ನಷ್ಟವಾಗಿ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಚಾಮರಾಜನಗರ ತಾಲೂಕಿನ ನಿವೃತ್ತ ನೌಕರರು ಹಾಗೂ ಇತರರು ಹಾಜರಿದ್ದರು.

ಗಾಂಧೀಜಿ ತತ್ವಾದರ್ಶ ಅಳವಡಿಸಿಕೊಳ್ಳಿ

ಚಾಮರಾಜನಗರ, ಜ.30– ವಿದ್ಯಾರ್ಥಿಗಳು ಮಹಾತ್ಮ ಗಾಂಧೀಜಿಯವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎಂ.ಆರ್.ಗಂಗಾಧರ ತಿಳಿಸಿದರು.

ನಗರದ ಹೊರವಲಯದ ಚಾಮರಾಜನಗರ ವಿಶ್ವವಿದ್ಯಾನಿಲಯದಲ್ಲಿ 77ನೇ ಹುತಾತ್ಮರ ದಿನಾಚರಣೆಯಲ್ಲಿ ಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹಾತ್ಮ ಗಾಂಧೀಜಿ ಬಹುದೊಡ್ಡ ಪರಿಸರವಾದಿಯಾಗಿದ್ದರು. ಸ್ವಚ್ಛತೆಯಿಂದ ರಾಷ್ಟ್ರ ಕಾಪಾಡಲು ಸಾಧ್ಯ ಎಂದು ನಂಬಿದ್ದರು. ಸ್ವದೇಶಿ ಕೈಗಾರಿಕೆಗಳ ಅಭಿವೃದ್ಧಿಯಾದರೆ ದೇಶದ ಪ್ರಗತಿ ಸಾಧ್ಯ ಎಂದು ತಿಳಿದು ಗುಡಿ ಕೈಗಾರಿಕೆಗಳನ್ನು ಬೆಂಬಲಿಸಿದ್ದರು ಎಂದರು. ಕುಲಸಚಿವ ಆರ್.ಲೋಕನಾಥ್ ಮಾತನಾಡಿ, ಮಹಾತ್ಮ ಗಾಂಧಿ ಜೀವನ ಮೌಲ್ಯಗಳನ್ನು ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಚಾಮರಾಜನಗರ ವಿವಿ ಕುಲಸಚಿವ ಪ್ರೊ.ಜಿ.ವಿ. ವೆಂಕಟರಮಣ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಮಹೇಶ್ ಇದ್ದರು.

ವೈ.ಎಸ್.ಶಿವರಾಮು ನಿಧನ



ಯಳಂದೂರು, ಜ.30–ಪಟ್ಟಣದ ಉಪ್ಪಾರ ಬಡಾವಣೆ ನಿವಾಸಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ವೈ.ಎಸ್.ಶಿವರಾಮು (49) ಹೃದಯಾಘಾತದಿಂದ ಗುರುವಾರ ನಿಧನರಾದರು.

ಮೃತರು ಪತ್ನಿ ರೇಣುಕಾ, ಪುತ್ರ, ಪುತ್ರಿ ಇದ್ದಾರೆ. ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸ್ವಚ್ಛತೆ ಬಗ್ಗೆ ಎಲ್ಲರಿಗೂ ಅರಿವು ಅಗತ್ಯ



ಚಾಮರಾಜನಗರ ನ್ಯಾಯಾಲಯ ಆವರಣದಲ್ಲಿ ನ್ಯಾಯಾಧೀಶರು ಸ್ವಚ್ಛತಾ ಕಾರ್ಯ ನಡೆಸಿದರು.

ಚಾಮರಾಜನಗರ, ಜ.30–ಸ್ವಚ್ಛತೆ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಅಗತ್ಯ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಗುರುವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನ್ಯಾಯಾಂಗ ಇಲಾಖೆ ಹಾಗೂ ಜಿಲ್ಲಾ ವಕೀಲರ ಸಂಘದ ಸಹಯೋಗದೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ಸ್ವಚ್ಛತಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರು ಪ್ರತಿನಿತ್ಯ ತಮ್ಮ ಮನೆ ಒಳಗೆ ಹಾಗೂ ಹೊರ ಆವರಣದಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಬೇಕು. ಸ್ವಚ್ಛತೆ ಬಗ್ಗೆ ಅರಿತು ಇತರರಿಗೂ ತಿಳಿ ಹೇಳಬೇಕು. ಆ ಮೂಲಕ ಉತ್ತಮ ಪರಿಸರ ಕಾಪಾಡಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಮಾತನಾಡಿ, ನಾವು ವಾಸಿಸುವ ಸ್ಥಳಗಳಲ್ಲಿ ಸ್ವಚ್ಛತೆ ಕಾಪಾಡಬೇಕು. ಇದರಿಂದ ಆರೋಗ್ಯ ಚೆನ್ನಾಗಿ ಇರುತ್ತದೆ ಹಾಗೂ ಉತ್ತಮ ಗಾಳಿ, ಬೆಳಕು ದೊರಕುತ್ತದೆ ಎಂದು ಹೇಳಿದರು.

ಇದೇ ವೇಳೆ ಗಣ್ಯರು ನ್ಯಾಯಾಲಯ ಆವರಣದಲ್ಲಿ ಸ್ವಚ್ಛತೆ ಮೂಲಕ ಶ್ರಮದಾನ ಮಾಡಿದರು. ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಎಸ್.ಜೆ.ಕೃಷ್ಣ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಎಸ್. ಹೊನ್ನಸ್ವಾಮಿ, ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ಸುನೀಲ್, ಪ್ರಧಾನ ಸಿವಿಲ್ ನ್ಯಾಯಾಧೀಶ ವೆಂಕಟೇಶ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ನಿವೇದಿತಾ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್. ನಂಜಯ್ಯ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಇತರರು ಇದ್ದರು.

ಕಾಡುಹಂದಿ ಬೇಟೆಗೆ ಯತ್ನ: ಮೂವರ ಬಂಧನ




ಕಾಡುಹಂದಿ ಬೇಟೆಗಾರರನ್ನು ಚಾ.ನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿರುವುದು.

ಚಾಮರಾಜನಗರ: ಕಾಡುಹಂದಿ ಬೇಟೆಗೆ ಯತ್ನಿಸಿದ ಮೂವರನ್ನು ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಪಣ್ಯದಹುಂಡಿ ಗ್ರಾಮದ ಕುಮಾರ(44), ಹಾಸನದ ಚಂದನ್(34), ಚನ್ನಪಟ್ಟಣದ ವಿವೇಕ (30) ಬಂಧಿತರು. ಈ ಮೂವರು ತಾಲೂಕಿನ ಮೇಲಾಜಿಪುರ, ದಾಸನೂರು ಮುಖ್ಯರಸ್ತೆಯಲ್ಲಿ ಕಾಡುಹಂದಿ ಬೇಟೆಗೆ ಮುಂದಾಗಿದ್ದರು. ಈ ವೇಳೆ ಗಸ್ತಿನಲ್ಲಿದ್ದ ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

ಈ ವೇಳೆ ಕೃತ್ಯಕ್ಕೆ ಬಳಸಿದ ಕಾರು, ಬೈಕ್, ಒಂಟಿ ನಳಿಕೆ, ಬಂದೂಕು, ಕಾಟ್ರಿಜ್‌ಗಳು, ಸಣ್ಣ ಬಾಲ್ಸ್ ಹಾಗೂ ತಲೆ ಟಾರ್ಚ್ ಜಪ್ತಿ ಮಾಡಲಾಗಿದೆ. ಕಾರ್ಯಾಚರಣೆಯಲ್ಲಿ ಗ್ರಾಮಾಂತರ ಠಾಣೆ ಪಿಎಸ್‌ಐ ರಿಹಾನಾ ಬೇಗಂ, ಸಿಬ್ಬಂದಿ ಪಾಲ್ಗೊಂಡಿದ್ದರು.



ಕಣ್ಣಪ್ಪ ಚಿತ್ರಕ್ಕೆ ಡಾ.ರಾಜ್‌ಕುಮಾರ್ ಸ್ಫೂರ್ತಿ

ಕನ್ನಡ, ತೆಲುಗು ಸೇರಿದಂತೆ ಬಹು ಭಾಷೆಗಳಲ್ಲಿ ನಿರ್ಮಾಣವಾಗಿರುವ ಚಿತ್ರ 'ಕಣ್ಣಪ್ಪ' ಏ.25ಕ್ಕೆ ತೆರೆಕಾಣಲಿದೆ. ಮೋಹನ್‌ಬಾಬು ಅವರ ನಿರ್ಮಾಣದ ಈ ಚಿತ್ರದಲ್ಲಿ ಅವರ ಪುತ್ರ ವಿಷ್ಣುಮಂಚು ನಾಯಕನಾಗಿ ಕಾಣಿಸಿಕೊಂಡಿದ್ದು, ಮುಖೇಶ್‌ಕುಮಾರ್ ಸಿಂಗ್ ಆಕ್ಷನ್‌ಕಟ್ ಹೇಳಿದ್ದಾರೆ. ಮೋಹನ್ ಲಾಲ್, ಅಕ್ಷಯ್ ಕುಮಾರ್, ಪ್ರಭಾಸ್, ಶರತ್‌ಕುಮಾರ್, ಕಂಗನಾ ರಣಾವತ್, ಮೋಹನ್ ಬಾಬು, ಕಾಜಲ್ ಸೇರಿದಂತೆ ಅನೇಕ ಕಲಾವಿದರು ನಟಿಸಿರುವ ಈ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು.

ವೇದಿಕೆಯಲ್ಲಿ ನಾಯಕ ವಿಷ್ಣುಮಂಚು ಮಾತನಾಡಿ, 1953ರಲ್ಲಿ ಡಾ.ರಾಜ್‌ಕುಮಾರ್ ಅವರು ಬೇಡರ ಕಣ್ಣಪ್ಪನಾಗಿ ಅಭಿನಯಿಸಿದ್ದರು. ಅದಾದ ಐದು ದಶಕಗಳ ನಂತರ ಅದೇತರದ ಕಥೆ ಇಟ್ಟುಕೊಂಡು ಕಣ್ಣಪ್ಪ ಚಿತ್ರ ಮಾಡಿದ್ದೇವೆ. ಆದರೆ ಈ ಕಥೆಯೇ ಬೇರೆ. ಈಗಿನ ಕಾಲಕ್ಕೆ ತಕ್ಕಂತೆ ಚಿತ್ರಕಥೆ ರಚಿಸಿ ಶೂಟ್ ಮಾಡಿದ್ದೇವೆ, ದೂರದ ಸ್ವಿಟ್ಜರ್‌ಲೆಂಡ್‌ನಲ್ಲಿ ಹೆಚ್ಚಿನ ಭಾಗದ ಶೂಟಿಂಗ್ ನಡೆದಿದೆ. ವರನಟ ಡಾ.ರಾಜ್‌ಕುಮಾರ್ ನಾನೀ ಚಿತ್ರ ಮಾಡಲು ಸ್ಫೂರ್ತಿ. 40-50 ವರ್ಷಗಳ ಹಿಂದೆ ಇಂತಹ ಚಿತ್ರಗಳನ್ನು ವೀಕ್ಷಿಸುವ ಜನರಿದ್ದರು. ಈಗ ಕಾಲ ಬದಲಾಗಿದೆ. ಬದಲಾದ ಸನ್ನಿವೇಶಕ್ಕೆ ತಕ್ಕಂತೆ ಕಣ್ಣಪ್ಪ ಚಿತ್ರವನ್ನು ನಿರೂಪಿಸಿದ್ದೇವೆ. ಏ.24ರಂದು ರಾಜ್‌ಕುಮಾರ್ ಅವರ ಹುಟ್ಟುಹಬ್ಬ, ಮರುದಿನವೇ ನಮ್ಮ ಚಿತ್ರವೂ ಬಿಡುಗಡೆಯಾಗುತ್ತಿದೆ ಎಂದರು.

ವಿತರಣೆಯ ಜವಾಬ್ದಾರಿ ಹೊತ್ತ ರಾಕ್‌ಲೈನ್ ವೆಂಕಟೇಶ್ ಮಾತನಾಡಿ, ಮೋಹನ್‌ಬಾಬು ಅವರೊಮ್ಮೆ ಕಾಲ್ ಮಾಡಿ ಸಿನಿಮಾ ನೋಡುವಂತೆ ಆಹ್ವಾನಿಸಿದರು. ಚಿತ್ರ ಅದ್ಭುತವಾಗಿ ಮೂಡಿ ಬಂದಿದೆ. ಬೇಡರ ಕಣ್ಣಪ್ಪ ಚಿತ್ರವನ್ನು ಆಗ ರಾಜ್‌ಕುಮಾರ್ ಮಾಡಿದ್ದರು. ಈಗ ಮೋಹನ್‌ಬಾಬು ಪುತ್ರ ವಿಷ್ಣು ಮಾಡಿದ್ದಾರೆ. ಆಧುನಿಕ ತಂತ್ರಜ್ಞಾನದಲ್ಲಿ ಚಿತ್ರ ತುಂಬಾ ಚೆನ್ನಾಗಿ ಮೂಡಿಬಂದಿದೆ ಎಂದರು.

ನಿರ್ದೇಶಕ ಮುಖೇಶ್‌ಕುಮಾರ್ ಮಾತನಾಡಿ, ನಾನು ಸಹ ಬೇಡರ ಕಣ್ಣಪ್ಪ ಚಿತ್ರವನ್ನು ನೋಡಿದೆ. ಅಂತಹ ಸಿನಿಮಾನ ಮತ್ತೆ ನಿರ್ಮಿಸಲು ಸಾಧ್ಯವಿಲ್ಲ. ಇತ್ತೀಚಿನ ದಿನಗಳಲ್ಲಿ ಧಾರ್ಮಿಕ ಚಿತ್ರ ಮಾಡುವುದು ಕಷ್ಟವೇ ಸರಿ. ಇದಕ್ಕಾಗಿ ಮೋಹನ್ ಬಾಬು ಮತ್ತು ವಿಷ್ಣುಮಂಚು ತುಂಬಾ ಎಫರ್ಟ್ ಹಾಕಿದ್ದಾರೆ ಎಂದರು,

ಹಿರಿಯನಟ ಶರತ್‌ಕುಮಾರ್ ಮಾತನಾಡಿ, ನಾನೀ ಚಿತ್ರದಲ್ಲಿ ಬುಡಕಟ್ಟು ಜನರ ನಾಯಕನಾಗಿ ಕಾಣಿಸಿಕೊಂಡಿದ್ದೇನೆ. ವಿಷ್ಣುಮಂಚು ಹೇಳಿದ ಒಂದು ಲೈನ್ ಕೇಳಿಯೇ ಥ್ರಿಲ್ಲಾದೆ. ದೇವರ ಮೇಲೆ ನಂಬಿಕೆ ಇದ್ದವರು ಮತ್ತು ನಂಬಿಕೆ ಇಲ್ಲದವರ ನಡುವಿನ ಕಥೆಯಿದು ಎಂದರು. ನೃತ್ಯನಿರ್ದೇಶಕ ಪ್ರಭುದೇವ ಚಿತ್ರದ ಮೂರು ಹಾಡುಗಳಿಗೆ ಕೊರಿಯಾಗ್ರಾಫ್ ಮಾಡಿರುವ ಬಗ್ಗೆ ತಿಳಿಸಿದರು.

ಒಂದೇ ರಾತ್ರಿ ನಡೆಯೋ ಕಥೆ 'ಅನಾಮಧೇಯ ಅಶೋಕ್‌ಕುಮಾರ್'

ಒಬ್ಬ ಲಾಯರ್ ಕೊಲೆಯಾದಾಗ ಆ ಮರ್ಡರ್ ಸುತ್ತ ನಡೆಯುವ ತನಿಖೆಯ ಹಾದಿಯನ್ನು ನಿರೂಪಿಸಿರುವ ಚಿತ್ರ 'ಅನಾಮಧೇಯ ಅಶೋಕ್‌ಕುಮಾರ್'. ಈ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಯಾಯಿತು. ನಟ ಕಿಶೋರ್ ಹಾಗೂ ಹರ್ಷಿಲ್ ಕೌಶಿಕ್(ಆಚಾರ್ ಅಂಡ್ ಕೋ) ಪೊಲೀಸ್ ಹಾಗೂ ಪತ್ರಕರ್ತನಾಗಿ ಕಾಣಿಸಿಕೊಂಡಿರುವ ಈ ಚಿತ್ರಕ್ಕೆ ಸಾಗರ್ ಕುಮಾರ್ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಕಿಶೋರ್, ಇಲ್ಲಿ ನಾನೊಬ್ಬ ಪತ್ರಕರ್ತನಾಗಿ ನಟಿಸಿದ್ದೇನೆ. ಪೊಲೀಸ್ – ಜರ್ನಲಿಸ್ಟ್ ಈ ಎರಡು ಪಾತ್ರಗಳ ನಿರೂಪಣೆಯೇ ಕುತೂಹಲಕರವಾಗಿದೆ, ಇವರಿಬ್ಬರ ಮೇಲೆ ಚಿತ್ರದ ಬಹುತೇಕ ಕಥೆ ನಡೆಯುತ್ತದೆ, ಒಂದು ಸತ್ಯವನ್ನು ಬಾಯ್ಬಿಡಿಸಬೇಕಾದಾಗ ಪೊಲೀಸರು ಎಲ್ಲ ರೀತಿಯ ತಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ, ಅದನ್ನೇ ತೋರಿಸಿದ್ದೇವೆ, ಅನಾಮಧೇಯ ಎಂದರೆ ಹೆಸರಿಲ್ಲದವನು, ಈ ಚಿತ್ರದಲ್ಲಿ ಆ ಅನಾಮಧೇಯ ಅಶೋಕ್ ಕುಮಾರ್ ಯಾರು? ಎಂದು ನಿರ್ದೇಶಕರು ನಮಗೂ ಹೇಳಿಲ್ಲ. ಅದನ್ನು ಚಿತ್ರ ನೋಡಿಯೇ ತಿಳಿದುಕೊಳ್ಳಬೇಕು. ನಾವಿಲ್ಲಿ ಯಾರನ್ನೂ ಸಹ ದೂಷಿಸಿಲ್ಲ, ಇರುವ ಲೂಪ್ ಹೋಲ್ಸ್ ಹೇಳಿದ್ದೇವಷ್ಟೇ ಎಂದು ಸ್ಪಷ್ಟನೆ ನೀಡಿದರು. ನಿರ್ಮಲಾಕುಮಾರ್ ಹಾಗೂ ರಮ್ಯ ಸಾಗರ್‌ಕುಮಾರ್ ನಿರ್ಮಾಣದ ಈ ಚಿತ್ರ ಫೆ.7ಕ್ಕೆ ಬಿಡುಗಡೆಯಾಗುತ್ತಿದೆ. ಮೂಲತಃ ಐಟಿ ಉದ್ಯೋಗಿಯಾದ ಸಾಗರ್, ಕೆಲವು ಕಿರುಚಿತ್ರಗಳನ್ನು ನಿರ್ದೇಶಿಸಿದ್ದು ಹಿರಿತೆರೆಯಲ್ಲಿ ಮೊದಲ ಚಿತ್ರವಿದು, ಇತ್ತೀಚೆಗೆ ನಡೆದ ಕೆಲವು ಕ್ರೈಮ್ ಘಟನೆಗಳು ಹಾಗೂ ಮಾಜಿ ಪೊಲೀಸ್ ಅಧಿಕಾರಿಯೊಬ್ಬರು ಬರೆದ ಪುಸ್ತಕವನ್ನು ಸ್ಫೂರ್ತಿಯಾಗಿಟ್ಟುಕೊಂಡು ಹೆಣೆದ ಕಥೆಯಿದು. ಸಂಜೆ ಆರರಿಂದ ಬೆಳಗ್ಗೆ ಆರರವರೆಗೂ ನಡೆಯುವ ಥ್ರಿಲ್ಲರ್ ಕಥೆ.


ಪ್ರಸಿದ್ಧ ವಕೀಲರೊಬ್ಬರ ಕೊಲೆಯ ತನಿಖೆಯೇ ಚಿತ್ರದ ಕಾನ್ಸೆಪ್ಟ್. ಸುಧೀಂದ್ರ ನಾಯರ್, ಕಾಂತರಾಜ್ ಕಡ್ಡಿಪುಡಿ, ವೀರೇಶ್ ಮುಂತಾದವರು ಉಳಿದ ಪಾತ್ರಗಳಲ್ಲಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ಪಾತ್ರ ನಿರ್ವಹಿಸಿರುವ ಹರ್ಷಿಲ್ ಕೌಶಿಕ್ ಮಾತನಾಡಿ, ಒಂದೇ ರಾತ್ರಿ ನಡೆಯುವ ಕಥೆಯಿದು, ಪ್ರಭಾವೀ ವ್ಯಕ್ತಿಯೊಬ್ಬರ ಕೊಲೆಯಾದಾಗ ಪೊಲೀಸರ ಮೇಲೆ ಅದೆಷ್ಟು ಒತ್ತಡವಿರುತ್ತದೆ ಎಂಬುದನ್ನು ತೋರಿಸಿದ್ದೇವೆ ಎಂದರು. ಈ ಚಿತ್ರದಲ್ಲಿ 2 ಹಾಡುಗಳಿದ್ದು, ಆಜಾದ್ ಅವರ ಸಂಗೀತ ಸಂಯೋಜನೆ, ಸುನೀಲ್ ಹೊನ್ನಾಳಿ ಅವರ ಛಾಯಾಗ್ರಹಣವಿದೆ.



ಸಿನಿಪದಬಂಧ-562



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

____

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.ಮದನ್‌ಮಲ್ಲು "ಬುದ್ಧಿವಂತ" 5
4.ಕಪ್ಪು ಇರುಳಿಗೆ ಹೀಗೊಂದು ಪದ 5
6.ಗುಲಾಬಿಯ ಬಣ್ಣ ಇಲ್ಲಿ ತಿರುಗಿದೆ 2
7.ವಿಷ್ಣುವರ್ಧನ್ ನಮ್ಮ ರಾಜ್ಯದ ಹೆಮ್ಮೆಯ ಮಗ 7
9.ಶಿವಣ್ಣ – ದೇವು ನಡುವಿನ ಯುದ್ಧ 3
12.ದುನಿಯಾ ವಿಜಿ ಕಲ್ಯಾಣಿ ರಾಜು ಅವರ ಪುತ್ರ 6
13.ಮಾಲಾಶ್ರೀ ಎತ್ತಿದ ಅವತಾರಕ್ಕೆ ಮಹೇಂದರ್ ನಿರ್ದೇಶಕ 4
15.ವಿಶಾಲವಾದ ಪ್ರದೇಶದಲ್ಲಿ ಉರಿದ ಹಣತೆ 5
16."ಬಾನಲ್ಲೂ ನೀನೆ ಭುವಿಯಲ್ಲೂ ನೀನೆ.... ", ಹಾಡಿನ ಚಿತ್ರ 5
18.ವಿಷ್ಣುವರ್ಧನ್ ಕಟ್ಟಿದ ಎಳೆಯರ ಪಡೆ 5

ಮೇಲಿನಿಂದ ಕೆಳಕ್ಕೆ

1.ಶಂಕರ್‌ನಾಗ್ ಗೃಹದಲ್ಲಿ ಎಳೆಯರೇ ಬಹುಸಂಖ್ಯೆಯಲ್ಲಿರಬೇಕಂತೆ! 10
2.ಗಾಲಿ ಹೀಗೊಂದು ಹೆಸರು 2
3.ಡಾ.ರಾಜ್‌ಕುಮಾರ್ ಅವರ ಬಿರುದುಗಳಲ್ಲೊಂದು 6
4._ _ _ _ ದಮನಕ 4
5.ಮೂರು ಕಣ್ಣು 3
8.ಕಳ್ಳ ಮಳ್ಳನೊಂದಿಗೆ ಬಂದವನು 2
10.ಸಮುದ್ರ ತೀರದಲ್ಲಿ ಉರಿದ ಹಣತೆ 5
11.ಶ್ರೀನಾಥ್ ಆಡಿದ ಬೇಟೆ 3
14.ನಾಗತಿಹಳ್ಳಿ ಚಂದ್ರಶೇಖರ್ ಅವರ ವಿದೇಶ 4
15.ರಾಕ್‌ಲೈನ್ ವೆಂಕಟೇಶ್ ನೇಗಿಲು ಹಿಡಿದಿದ್ದಾನೆ 4
17.ದಮಯಂತಿಯ ಗಂಡ 2

ಸಿನಿ ಪದಬಂಧ 561ರ ಉತ್ತರ

ರಾ	ಯ	ರ	ಮ	ಗ		ಸ	ಪ್ತ	ಸಾ	ಗ	ರ
ಮ		ತಿ		ಡಿ		ರಿ				ಗ
ರಾ	ಟೆ			ಬಿ	ಡು	ಗ	ಡೆ	ಯ	ಬೇ	ಡಿ
ಜ್ಯ		ಕ	ನ್ನ	ಡಿ		ಮ		ಶ್		
ದ				ಗಂ					ಜ	
ಲ್ಲಿ		ಆ		ಡ	ಯಾ	ನ	ಡ	ಯಾ	ನ	
ರಾ	ಜಾ	ಹು	ಲಿ						ನಾ	
ಕ್ಷ		ತಿ		ಕು		ಕ	ಥಾ	ನಾ	ಯ	ಕ
ಸ				ಲ		ಲಿ			ಕ	
ರು	ದ್ರ	ತಾಂ	ಡ	ವ		ಯು		ಜೇ		
				ಧು		ಗ	ರು	ಡ	ಧ್ವ	ಜ

ವಿಜೇತರು: ಸಿ.ಕೆ.ಮಂಜುನಾಥ್, ರಾಘವೇಂದ್ರ ಟೈಪಿಂಗ್ ಸೆಂಟರ್, ಹಳೇ ಪೋಸ್ಟ್ ಆಫೀಸ್ ಬೀದಿ, ಶ್ರೀರಂಗಪಟ್ಟಣ.

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

'ಅನ್‌ಲಾಕ್ ರಾಘವ'ನ ಟ್ರೈಲರ್ ಅಶ್ವಿನಿ ಪುನೀತ್ ಬಿಡುಗಡೆ



ದೀಪಕ್ ಮಧುವನಹಳ್ಳಿ ಅವರ ನಿರ್ದೇಶನದ "ಅನ್‌ಲಾಕ್ ರಾಘವ" ಚಿತ್ರದ ಟ್ರೈಲರನ್ನು ಇತ್ತೀಚೆಗೆ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭಕೋರಿದರು.

ಈ ಚಿತ್ರದ ಕಥೆ ತುಂಬಾ ಕುತೂಹಲಕಾರಿಯಾಗಿದೆ, ನಾಯಕನ ಹೆಸರು ರಾಘವ, ಆತನಿಗೆ ಅನ್‌ಲಾಕ್ ರಾಘವ ಎಂಬ ಹೆಸರು ಹೇಗೆ ಬಂತು ಎಂದು ಚಿತ್ರದಲ್ಲಿ ಹೇಳಿದ್ದೇವೆ, ಈಗಾಗಲೇ ಟೀಸರ್ ಹಾಡುಗಳು ನೋಡುಗರ ಮನ ಗೆದ್ದಿವೆ, ಟ್ರೈಲರ್‌ನಲ್ಲಿ ಮತ್ತೊಂದಷ್ಟು ಮಾಹಿತಿ ನೀಡಿದ್ದೇವೆ, ಚಿತ್ರದ ಪ್ರತಿ ಸೀನ್ ಮುಂದೇನಾಗುತ್ತೆ ಎಂದು ಕುತೂಹಲ ಕೆರಳಿಸುತ್ತಲೇ ಸಾಗುತ್ತದೆ. ಯುವ ಪ್ರತಿಭೆಗಳಾದ ಮಿಲಿಂದ್ ಹಾಗೂ ರೆಚೆಲ್ ಡೇವಿಡ್(ಲವ್ ಮಾಕ್ಟೇಲ್) ಅದ್ಭುತವಾಗಿ ಅಭಿನಯಿಸಿದ್ದಾರೆ. ನಿರ್ಮಾಪಕ ಮಂಜುನಾಥ್ ದಾಸೇಗೌಡ ಹಾಗೂ ಗಿರೀಶ್‌ಕುಮಾರ್ ಚಿತ್ರದ ಅದ್ದೂರಿತನಕ್ಕೆ ಯಾವುದೇ ಕೊರತೆ ಬಾರದ ಹಾಗೆ ನಿರ್ಮಿಸಿದ್ದು, ಕಥೆ, ಚಿತ್ರಕಥೆಯನ್ನು "ರಾಮರಾಮ ರೆ" ಖ್ಯಾತಿಯ ಸತ್ಯಪ್ರಕಾಶ್ ಬರೆದಿದ್ದಾರೆ. ಲವಿತ್ ಅವರ ಛಾಯಾಗ್ರಹಣ, ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆ ಈ ಚಿತ್ರಕ್ಕಿದ್ದು, ಫೆಬ್ರವರಿ 7ರಂದು ಚಿತ್ರ ತೆರೆಗೆ ಬರಲಿದೆ ಎಂದು ನಿರ್ದೇಶಕ ದೀಪಕ್ ತಿಳಿಸಿದರು.


ಚಿತ್ರದ ಆರಂಭದಿಂದಲೂ ನಮಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ ಅಶ್ವಿನಿ ಮೇಡಂ ಅವರಿಗೆ ಧನ್ಯವಾದ ಎಂದು ಮಾತನಾಡಿದ ನಾಯಕ ಮಿಲಿಂದ್, ನೋಡುಗನಿಗೆ ಬೇಕಾದ ಎಲ್ಲಾ ರೀತಿಯ ಮನರಂಜನಾತ್ಮಕ ಅಂಶಗಳನ್ನು ನಮ್ಮ ಚಿತ್ರ ಒಳಗೊಂಡಿದೆ. ಸಾಧುಕೋಕಿಲ ಅವರು ಸಾಕಷ್ಟು ಚಿತ್ರಗಳಲ್ಲಿ ಅಭಿನಯಿಸಿದ್ದರೂ, ಈ ಚಿತ್ರದಲ್ಲಿರುವಂಥ ಪಾತ್ರವನ್ನು ಈವರೆಗೆ ಯಾವ ಸಿನಿಮಾದಲ್ಲೂ ನಿರ್ವಹಿಸಿಲ್ಲ ಎಂದರು. ಅನ್‌ಲಾಕ್ ರಾಘವ ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಜಾನಕಿ ಎಂದರು ನಾಯಕಿ ರೆಚೆಲ್ ಡೇವಿಡ್.

"ಉಧೃರ್ಷ" ಸೇರಿದಂತೆ ಈವರೆಗೆ ನಾನು ನಾಲ್ಕು ಚಿತ್ರಗಳನ್ನು ನಿರ್ಮಾಣ ಮಾಡಿದ್ದೇನೆ. ಚಿತ್ರತಂಡದ ಸಹಕಾರದಿಂದ ಸಿನಿಮಾ ತುಂಬಾ ಚೆನ್ನಾಗಿ ಮೂಡಿಬಂದಿದೆ. ಇತ್ತೀಚೆಗೆ ಟೆಕ್ನಿಕಲ್ ಶೋನಲ್ಲಿ ಚಿತ್ರ ನೋಡಿದಾಗ ತುಂಬಾ ಖುಷಿಯಾಯಿತು ಎಂದು ನಿರ್ಮಾಪಕ ಮಂಜುನಾಥ್ ದಾಸೇಗೌಡ ಹೇಳಿದರು. ಮತ್ತೊಬ್ಬ ನಿರ್ಮಾಪಕ ಗಿರೀಶ್‌ಕುಮಾರ್ ಮಾತನಾಡಿ, ನಿರ್ಮಾಪಕನಾಗಿ ನನಗಿದು ಮೊದಲ ಚಿತ್ರ. ದೀಪಕ್ ಅವರು ಈ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ಆದರೆ ಇತ್ತೀಚೆಗೆ ತೆರೆಮೇಲೆ ನೋಡಿದಾಗ ಅವರ ಪ್ರೆಸೆಂಟೇಷನ್ ಕಂಡು ಖುಷಿಯಾಯಿತು ಎಂದು ಹೇಳಿದರು.

'ನಾಗವಲ್ಲಿ ಬಂಗಲೆ'ಯಲ್ಲಿ ಅರಿಷಡ್ವರ್ಗಗಳು

ಮನಃಶಾಸ್ತ್ರದ ಹಿನ್ನೆಲೆಯ ಕಥೆಗಳ ಬಗ್ಗೆ ತುಂಬಾ ಆಸಕ್ತಿ. ದೆವ್ವ, ಭೂತಗಳು ಇದೆಯೋ ಇಲ್ಲವೋ ಗೊತ್ತಿಲ್ಲ, ಇವನ್ನು ಹುಡುಕಿಕೊಂಡು ಹೋಗುವ ಹಂಟರ್ಸ್ ಅಂತೂ ಇದ್ದಾರೆ, ಕೆಲ ಹಾರರ್ ಸಿನಿಮಾಗಳಲ್ಲಿ ದೆವ್ವಕ್ಕೆ ವಿರುದ್ಧವಾಗಿ ದೈವಶಕ್ತಿಯನ್ನು ತೋರಿಸುತ್ತಾರೆ, ಇದೆರಡರ ಮಧ್ಯೆ ಏನಿದೆ ಅನ್ನೋದು ಇನ್ನೂ ಸಹ ಕುತೂಹಲಕರವಾಗೇ ಇದೆ. ಅರಿಷಡ್ವರ್ಗಗಳನ್ನು ಇಟ್ಟುಕೊಂಡು ಈ ಕಥೆ ಮಾಡಿದ್ದೇನೆ ಎಂದು ಕಥೆಗಾರ ಜೆಎಂ ಪ್ರಹ್ಲಾದ್ "ನಾಗವಲ್ಲಿ ಬಂಗಲೆ" ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮದಲ್ಲಿ ವಿವರಿಸಿದರು. ಶಾಸಕ ಕೆ.ಗೋಪಾಲಯ್ಯ ಹಾಗೂ ಲಹರಿವೇಲು ಅಚರು ಚಿತ್ರದ ಟೀಸರ್‌ಗೆ ಚಾಲನೆ ನೀಡಿದರು.

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಹೀಗೆ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ಆರು ಜನ ಹುಡುಗಿಯರು



ವಿಹಾರಕ್ಕೆಂದು ರೆಸಾರ್ಟ್‌ಗೆ ಹೋಗುವಾಗ ಆಕಸ್ಮಿಕವಾಗಿ ಈ 'ನಾಗವಲ್ಲಿ ಬಂಗಲೆ' ಪ್ರವೇಶಿಸುತ್ತಾರೆ. ಆನಂತರ ಏನೇನೆಲ್ಲಾ ಆಗುತ್ತದೆ ಎಂಬುದನ್ನು ಹಾರರ್, ಥ್ರಿಲ್ಲರ್ ಹಿನ್ನೆಲೆಯಲ್ಲಿ ಹೇಳೋ ಪ್ರಯತ್ನ ಮಾಡಿದ್ದೇವೆ ಎಂದು ಪ್ರಹ್ಲಾದ್ ಅವರು ಹೇಳಿದರು.

ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿರುವ ಕವಿ ರಾಜೇಶ್ ಮಾತನಾಡುತ್ತ, ನಾನು ಹಾಗೂ ಜೆ.ಎಂ.ಪ್ರಹ್ಲಾದ್ ಫಿಲಂ ಚೇಂಬರ್‌ನಲ್ಲಿ ಈ ಕಥೆಯ ಬಗ್ಗೆಯೇ ಚರ್ಚಿಸುತ್ತಿದ್ದಾಗ ಅದನ್ನು ಕೇಳಿದ ನೆ.ಲ.ಮಹೇಶ್ ಅವರು ಕಥೆ ಇಷ್ಟಪಟ್ಟು ತಾವೇ ಚಿತ್ರ ನಿರ್ಮಾಣಕ್ಕೆ ಮುಂದಾದರು. ಕಥೆ ಕೇಳಿದ ಐದೇ ದಿನಗಳಲ್ಲಿ ಚಿತ್ರೀಕರಣವೂ ಆರಂಭವಾಯಿತು. ಇದರಲ್ಲಿ ತಂತ್ರಜ್ಞರ ಕೆಲಸ ದೊಡ್ಡದಿದೆ. ಈ ದೆವ್ವ, ಭೂತ ನಮ್ಮ ಮನದಲ್ಲಿದೆ. ನಿಜವಾಗಿಯೂ ಅದೆಲ್ಲ ಇಲ್ಲ, ಎಲ್ಲಾ ನಮ್ಮ ಮನಸಿನ ಭ್ರಮೆ ಎಂಬ ವಿಷಯವನ್ನು ಹೇಳಿದ್ದೇವೆ ಎಂದರು. ನಾಗವಲ್ಲಿ ಪಾತ್ರಧಾರಿ ತೇಜಸ್ವಿನಿ ತನ್ನ ಪಾತ್ರದ ಕುರಿತಂತೆ ವಿವರಿಸಿದರು. ಮತ್ತೊಬ್ಬ ನಟಿ ರೂಪಾ ಮಾತನಾಡಿ, ಚಿತ್ರದಲ್ಲಿ ಹಾರರ್ ಜತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕೂಡ ಇದೆ, ಅರಿಷಡ್ವರ್ಗಗಳ ಜತೆ ಇರುವ ಬ್ಯೂಟಿಫುಲ್ ಪಾತ್ರವನ್ನು ನಾನು ಮಾಡಿದ್ದೇನೆ ಎಂದರು.

ಮೈಸೂರು ಮಿತ್ರ

ಮಠಮಾನ್ಯಗಳಿಂದ ದೇಶದ ಸಂಸ್ಕೃತಿ, ಪರಂಪರೆ ಉಳಿವು

ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ಅಭಿಪ್ರಾಯ

ನಂಜನಗೂಡು, ಜ.30– ಆಧುನಿಕ ತಂತ್ರಜ್ಞಾನದ ಭರಾಟೆ ನಡುವೆ ಮಠಮಾನ್ಯಗಳು, ಹರ–ಗುರು ಚರಮೂರ್ತಿಗಳಿಂದ ದೇಶದ ಸಂಸ್ಕೃತಿ, ಪರಂಪರೆ ಉಳಿಸುವ ಕೆಲಸವಾಗುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದರು.

ತಾಲೂಕಿನ ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದ ಭಜನಾ ಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಾಚೀನ ಸಂಸ್ಕೃತಿ ಹೊಂದಿರುವ ಸುತ್ತೂರು ಮಠ ತ್ರಿವಿಧ ದಾಸೋಹದ ಮೂಲಕ ನಾಡು ಕಟ್ಟುವ ಕೆಲಸ ಮಾಡುತ್ತಿರುವುದು ಹೆಮ್ಮೆಯ ವಿಷಯ. ಅಲ್ಲದೇ ಜಾತ್ರೆ ಬರಿ ಸಡಗರ ಸಂಭ್ರಮಕ್ಕೆ ಸೀಮಿತಗೊಳ್ಳದೆ, ಪ್ರಧಾನಿ ನರೇಂದ್ರ ಮೋದಿ ಅವರು ಭಾರತ 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆಗೊಳ್ಳಲು ಸ್ವದೇಶಿ ಉತ್ಪನ್ನಗಳಿಗೆ ಬೆಂಬಲ ನೀಡಬೇಕು ಎಂಬ ಆಶಯಕ್ಕೆ ಅನುಗುಣವಾಗಿ ಶ್ರೀಮಠ ಜಾತ್ರೆ ಮೂಲಕ ನಮ್ಮ ಸಂಸ್ಕೃತಿ, ಪರಂಪರೆ ಬಿಂಬಿಸುವ ಜೊತೆಗೆ ರೈತರ ಕೃಷಿಗೆ ಪ್ರೋತ್ಸಾಹ ನೀಡಿ, ಗುಡಿ ಕೈಗಾರಿಕೆಗಳ ಉತ್ಪನ್ನಗಳಿಗೆ, ರೈತರ ಬೆಳೆಗಳಿಗೆ, ಅಲೆಮಾರಿ ಜನಗಳಿಗೂ ಸಹ ಮಾರುಕಟ್ಟೆ ಸೌಲಭ್ಯ ಒದಗಿಸುವ ಮೂಲಕ ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದೆ. ನಾನು ರಾಜಕಾರಣಿಯಾಗಿ ನಾಡಿನಲ್ಲಿ ಗುರುತಿಸಿಕೊಂಡಿರುವುದು, ಶಿಕಾರಿಪುರದ ಶಾಸಕನಾಗಿ ಆಯ್ಕೆಯಾಗಿರುವುದಕ್ಕೆ ವರುಣ ಕ್ಷೇತ್ರದ ಮತದಾರರು ಮತ್ತು ಕಾರ್ಯಕರ್ತರು ನೀಡಿದ ಪ್ರೀತಿ–ವಿಶ್ವಾಸವೇ ಕಾರಣ. ಆದ್ದರಿಂದ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನಾನು ತಪ್ಪದೇ ಭಾಗಿಯಾಗಿದ್ದೇನೆ ಎಂದರು.

ಆರ್‌ಎಸ್‌ಎಸ್ ಕಾರ್ಯವಾಹಕ ದತ್ತಾತ್ರೇಯ ಹೊಸಬಾಳೆ ಮಾತನಾಡಿ, ಭಜನೆ ಕೇವಲ ಭಜನೆ ಅಲ್ಲ. ಭಜನೆಯಿಂದ ನಮ್ಮ ಧರ್ಮ, ಸಂಸ್ಕೃತಿ, ಸಾಹಿತ್ಯ, ಸಂಗೀತ ಉಳಿದಿದೆ. ಜೊತೆಗೆ ಗ್ರಾಮೀಣ ಜನರ ಭಜನೆ ಸಮಾಜದಲ್ಲಿ ಜಾತೀಯತೆ ದೂರ ಮಾಡಿ ಏಕತೆ ಮೂಡಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಭಜನೆ ನಶಿಸುತ್ತಿರುವ ಕಾಲಘಟ್ಟದಲ್ಲಿ ಸುತ್ತೂರು ಜಾತ್ರೆ ಭಜನೆ ಉತ್ತೇಜನಕ್ಕಾಗಿ ಭಜನಾ ಮೇಳ ಆಯೋಜಿಸಿ ಸಮಾಜದಲ್ಲಿ ಸಾಮರಸ್ಯ ಮೂಡಿಸುವ ಕೆಲಸ ಮಾಡುತ್ತಿದೆ. ಅಲ್ಲದೇ ಮಠಮಾನ್ಯಗಳು ಜನರ ಭೌತಿಕ ಜೀವನಕ್ಕೆ ಬೇಕಾದ ಅನ್ನ, ಅಕ್ಷರ, ಜ್ಞಾನ, ವಸ್ತ್ರಗಳನ್ನು ಇರುವವರಿಂದ ಪಡೆದು ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ತಲುಪಿಸುವ ಕಾಯಕದಲ್ಲಿ ತೊಡಗಿ ಸಮಾಜದ ಸೇತುವೆಯಾಗಿ ಕೆಲಸ ನಿರ್ವಹಿಸುವ ಮೂಲಕ ಸಮಾಜ ತನ್ನ ಕಾಲ ಮೇಲೆ ಸ್ವಾವಲಂಬಿಯಾಗಿ ನಿಲ್ಲಲು ನೆರವಾಗುತ್ತಿವೆ. ಮಠಮಾನ್ಯಗಳ ಇಂತಹ ಸೇವಾ ಕಾರ್ಯದಿಂದಾಗಿ ದೇಶದಲ್ಲಿ ಸಮಾಜ ತಲೆ ಎತ್ತಿ ನಿಲ್ಲಲು ಸಾಧ್ಯವಾಗಿದೆ ಎಂದರು.



ಕಾರ್ಯಕ್ರಮದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿದರು.

ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಮಾತನಾಡಿ, ಮೈಸೂರಿನ ಅರಸರು ಎಲ್ಲಾ ಹಂತಗಳಲ್ಲೂ ಜನರಿಗೆ ವ್ಯವಸ್ಥಿತ ಬದುಕು ಕಟ್ಟಿಕೊಳ್ಳುವಂತಹ ಸಮಾಜ ನಿರ್ಮಿಸಿ ಕೊಡುಗೆ ನೀಡಿದ್ದಾರೆ. ಆದ್ದರಿಂದ ಮೈಸೂರು ಸಾಂಸ್ಕೃತಿಕ ಮತ್ತು ಧಾರ್ಮಿಕ ನಗರಿ ಎಂದು ಮೈಸೂರಿನ ಬಗ್ಗೆ ಮೇಘಾಲಯ ಜನರಲ್ಲಿ ಅಪಾರ ಗೌರವವಿದೆ. ಮೈಸೂರು ಅರಸರ ನಂತರ ಇಲ್ಲಿನ ಧಾರ್ಮಿಕ ಪರಂಪರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸುತ್ತೂರು ಮಠ ಜವಾಬ್ದಾರಿ ಹೊತ್ತು ಮುಂದಿನ ಪೀಳಿಗೆಗೆ ವರ್ಗಾಯಿಸುವಂತಹ ಕೆಲಸ ಮಾಡುತ್ತಿದೆ. ಜೊತೆಗೆ ಮೇಘಾಲಯದ ಅನಾಥ ಮಕ್ಕಳಿಗೂ ಆಶ್ರಯ ನೀಡಿದೆ. ಸುತ್ತೂರು ಶ್ರೀಗಳು ನಾಡಿಗೆ ವಿಪತ್ತು ಒದಗಿ ಸಂಕಷ್ಟದ ಸಮಯದಲ್ಲಿದ್ದಾಗ ಮುಂದೆ ನಿಂತು ಜವಾಬ್ದಾರಿ ಹೊತ್ತು ಸಂಕಷ್ಟ ನಿವಾರಿಸುವ ಕಾಯಕಕ್ಕೆ ಮುಂದಾಗುವುದು ಸಮಾಜಕ್ಕೆ ಪ್ರೇರಣಾ ಶಕ್ತಿ ನೀಡುತ್ತದೆ ಎಂದರು.

ನಮ್ಮ ರಾಜ್ಯದಲ್ಲಿ ಮದುವೆ ನಡೆದರೆ ಹೆಣ್ಣು ಗಂಡಿನ ಮನೆಗೆ ಹೋಗಬೇಕು. ಆದರೆ ಮೇಘಾಲಯದಲ್ಲಿ ಗಂಡು ಹೆಣ್ಣಿನ ಮನೆಗೆ ಹೋಗುವಂತಹ ಸಂಸ್ಕೃತಿ ಇದೆ. ಅಲ್ಲದೆ ಗಂಡು ಮಕ್ಕಳಿಗೆ ಪಿತ್ರಾಜಿತ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ. ಹೆಣ್ಣು ಮಕ್ಕಳಿಗೆ ಪಿತ್ರಾಜಿತ ಆಸ್ತಿಯಲ್ಲಿ ಹಕ್ಕು ವರ್ಗಾವಣೆಯಾಗುವ ಕಾನೂನು ಜಾರಿಯಲ್ಲಿದೆ ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮೈಸೂರು ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ, ಮನಕವಾಡದ ಅನ್ನದಾನೀಶ್ವರ ದೇವಮಂದಿರ ಮಹಾಪೀಠದ ಶ್ರೀಅಭಿನವ ಮೃತ್ಯುಂಜಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಹೊನ್ನಾಳಿ ಶಾಸಕ ಡಿ.ಜಿ. ಶಾಂತನಗೌಡ, ಮಳವಳ್ಳಿ ಶಾಸಕ ನರೇಂದ್ರಸ್ವಾಮಿ, ಮಾಜಿ ಶಾಸಕ ನಿರಂಜನ್ ಕುಮಾರ್, ಯುಎಸ್‌ಎ ಉದ್ಯಮಿ ಸೆಲ್ವಜಯರಾಮನ್, ನವದೆಹಲಿಯ ಉದ್ಯಮಿ ಸಂಜಯ್ ಪಾಟೀಲ್, ಆಕಾಶ್ ಶೆಲ್ವ, ಕಾಳ್ಳೇರಪ್ಪ, ವೆಂಕಟರಾಮನ್ ಜೀ, ವಿನಯ್ ಕುಮಾರ್ ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು. ಡಾ.ಸುದೀಪ್ ಸ್ವಾಗತಿಸಿದರು.

ಹನುಮನಾಳು ಡೈರಿ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ

ಮರಿಗೌಡ ಅಧ್ಯಕ್ಷ, ನಂಜುಂಡಪ್ಪ ಉಪಾಧ್ಯಕ್ಷ



ಹನುಮನಾಳು ಡೈರಿ ಅಧ್ಯಕ್ಷರಾಗಿ ಮರಿಗೌಡ, ಉಪಾಧ್ಯಕ್ಷರಾಗಿ ನಂಜುಂಡಪ್ಪ ಆಯ್ಕೆಯಾದರು.

ತಿ.ನರಸೀಪುರ, ಜ.30– ತಾಲೂಕಿನ ಹನುಮನಾಳು ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮರಿಗೌಡ, ಉಪಾಧ್ಯಕ್ಷರಾಗಿ ನಂಜುಂಡಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗುರುವಾರ ಡೈರಿ ಆವರಣದಲ್ಲಿ ನಡೆದ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮರಿಗೌಡ, ಉಪಾಧ್ಯಕ್ಷ ನಂಜುಂಡಪ್ಪ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹಸೀನಾ ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ಚುನಾವಣೆಯಲ್ಲಿ ಒಟ್ಟು 13 ನಿರ್ದೇಶಕರ ಪೈಕಿ 11 ಮಂದಿ ಭಾಗವಹಿಸಿ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ನೂತನ ಅಧ್ಯಕ್ಷ ಮರಿಗೌಡ ಮಾತನಾಡಿ, ಹಳ್ಳಿಗಾಡಿನ ಸಹಕಾರಿ ಸಂಸ್ಥೆಯಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಲು ಆಡಳಿತ ಮಂಡಳಿ ಸದಸ್ಯರೆಲ್ಲರೂ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಎಲ್ಲರಿಗೂ ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲಾ ಸಹಕಾರಿ ಯೂನಿಯನ್ ಉಪಾಧ್ಯಕ್ಷ ಹನುಮನಾಳು ಸಿದ್ದೇಗೌಡರ ಮಾರ್ಗದರ್ಶನದಲ್ಲಿ ಸಂಘದ ಹಾಗೂ ಹೈನುಗಾರಿಕೆ ಅಭಿವೃದ್ಧಿಗೆ ಸರ್ಕಾರದಿಂದ ಸಾಲ ಸೌಲಭ್ಯ ತರಲು ಪ್ರಾಮಾಣಿಕವಾಗಿ ದುಡಿಯುತ್ತೇನೆ ಎಂದರು.

ಸಂಘದ ನಿರ್ದೇಶಕರಾದ ಸವಿತಾ, ಸುಮಿತ್ರ ಸಿದ್ದೇಗೌಡ, ಹೆಚ್.ಕೆ.ನಾಗ ರಾಜು, ಗವಿ, ಭಾಸ್ಕರ, ಮಹೇಶ, ಹೆಚ್.ಎಸ್.ಶಂಕರ, ಸಿದ್ದೇಗೌಡ ಸೇರಿದಂತೆ ಗ್ರಾಮಸ್ಥರು ಹಾಗೂ ಸದಸ್ಯರು ಇದ್ದರು.

ಎಂಎ ಕನ್ನಡದಲ್ಲಿ 11 ಚಿನ್ನದ ಪದಕ ಪಡೆದ ವಿದ್ಯಾರ್ಥಿನಿಗೆ ಸನ್ಮಾನ

ಹೆಚ್.ಡಿ.ಕೋಟೆ, ಜ.30– ಮೈಸೂರು ವಿಶ್ವವಿದ್ಯಾನಿಲಯದ 105ನೇ ಘಟಿಕೋತ್ಸವದಲ್ಲಿ ಎಂಎ ಕನ್ನಡ ವಿಷಯದಲ್ಲಿ 11 ಚಿನ್ನದ ಪದಕ ಹಾಗೂ 5 ನಗದು ಬಹುಮಾನ ಪಡೆದ ತಾಲೂಕಿನ ಕುಣಿಗಲು ಗ್ರಾಮದ ಬಡ ರೈತ ಕುಟುಂಬದ ವಿದ್ಯಾರ್ಥಿನಿ ಕಾವ್ಯ ಹಾಗೂ ಅವರ ತಂದೆ ಚಿಕ್ಕನಾಯಕ, ತಾಯಿ ದೇವಾಲಮ್ಮ ಅವರನ್ನು ಶಾಸಕ ಅನಿಲ್, ನಾಯಕ ಸಮುದಾಯದ ಅನೇಕ ಮುಖಂಡರು ಸನ್ಮಾನಿಸಿದರು.



ವಿದ್ಯಾರ್ಥಿನಿ ಕಾವ್ಯ ಅವರನ್ನ ಶಾಸಕ ಅನಿಲ್ ಸನ್ಮಾನಿಸಿದರು.

ನಂತರ ಮಾತನಾಡಿದ ಶಾಸಕರು, ಕಾವ್ಯ ಕೆಎಎಸ್ ಅಧಿಕಾರಿಯಾಗಬೇಕೆಂಬ ಆಸೆ ವ್ಯಕ್ತಪಡಿಸಿದ್ದು, ಆಕೆಗೆ ಸೂಕ್ತ ತರಬೇತಿಯೊಂದಿಗೆ ಎಲ್ಲಾ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು.

ಮೈವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು ಮಾತನಾಡಿ, ವಿದ್ಯಾರ್ಥಿನಿ ಕಾವ್ಯ ಮನೆಯಲ್ಲಿ ಬಡತನವಿದ್ದರೂ ಛಲ ಬಿಡದೆ ಎಂಎ ಕನ್ನಡ ವಿಷಯದಲ್ಲಿ 11 ಚಿನ್ನದ ಪದಕ, 5 ನಗದು ಬಹುಮಾನ ಪಡೆದು ಹೆಚ್.ಡಿ.ಕೋಟೆ, ಸರಗೂರು ತಾಲೂಕಿಗೆ ಮತ್ತು ನಾಯಕ ಸಮುದಾಯಕ್ಕೆ ಕೀರ್ತಿ ತಂದಿದ್ದಾರೆ. ಮುಂದಿನ ದಿನಗಳಲ್ಲಿ ತಾಲೂಕಿನ ವಿದ್ಯಾರ್ಥಿಗಳು ಕಾವ್ಯ ಅವರನ್ನು ಅನುಸರಿಸುವ ಮೂಲಕ ತಾಲೂಕಿಗೆ ಕೀರ್ತಿ ತರಬೇಕು. ಅಲ್ಲದೇ ಕಾವ್ಯ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಎಲ್ಲಾ ಸಹಕಾರ ನೀಡಲಾಗುವುದು ಎಂದರು.

ಈ ವೇಳೆ ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ, ಮಾದಾಪುರ ಗ್ರಾಪಂ ಅಧ್ಯಕ್ಷ ಮಹೇಶ್ ನಾಯಕ, ಸದಸ್ಯ ಸಣ್ಣಸ್ವಾಮಿ, ಉಮೇಶ್, ಗ್ರಾಮದ ಮುಖಂಡ ನಾಗನಾಯಕ, ರಾಮನಾಯಕ, ರವಿ, ರವಿಶಂಕರ, ಸ್ವಾಮಿ, ಉಮೇಶ್, ಸೋಮೇಶ್, ಶ್ರೀನಿವಾಸ, ತಿಮ್ಮನಾಯಕ, ಕೆಂಪರಾಜು, ನಾಗರಾಜು ಇತರರಿದ್ದರು.

ತಂಬಾಕು ಮಾರಾಟಕ್ಕೆ ಅವಕಾಶ ನೀಡಲು ಮನವಿ

ಹುಣಸೂರು, ಜ.30– ತಂಬಾಕು ಕಾರ್ಡ್‌ದಾರರಿಗೆ ಕೂಡಲೇ ತಂಬಾಕು ಮಾರಾಟಕ್ಕೆ ಅವಕಾಶ ನೀಡಬೇಕು ಎಂದು ಮೈಸೂರಿನ ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕರಿಗೆ ಕರ್ನಾಟಕ ರಾಜ್ಯ ತಂಬಾಕು ಬೆಳೆಗಾರರ ಹಿತರಕ್ಷಣಾ ಹೋರಾಟ ಸಮಿತಿ ಸದಸ್ಯರು ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಂಬಾಕು ಮಂಡಳಿ ಪ್ರಾದೇಶಿಕ ವ್ಯವಸ್ಥಾಪಕರು ಈಗಾಗಲೇ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಶೀಘ್ರ ಪರವಾನಿಗೆ ಸಿಗಬಹುದು ಎಂದರು.

ಸಮಿತಿಯ ಪ್ರಧಾನ ಕಾರ್ಯದರ್ಶಿ ವಿ.ಬಸವರಾಜು ಮಾತನಾಡಿ, ತಂಬಾಕು ಬೆಳೆದು ಕಾರ್ಡ್ ಹೊಂದಿರುವ ರೈತನ ಗೋಳು ಹೇಳತೀರದಾಗಿದೆ. ಪ್ರತಿವರ್ಷ ತಂಬಾಕು ಮಾರಾಟ ಮಾಡಲು ಹೆಣಗಾಡಬೇಕಾದ ಪರಿಸ್ಥಿತಿ ಕೇಂದ್ರ ಸರ್ಕಾರ ತಂದಿಟ್ಟಿದೆ. ಕೂಡಲೇ ಮಂಡಳಿ ಗಮನಕ್ಕೆ ತಂದು ಮಾರಾಟ ಮಾಡಲು ಅನುವು ಮಾಡಿಕೊಡಬೇಕೆಂದು ಮನವಿ ಮಾಡಿದ ಅವರು ಮಂಡಳಿಯಿಂದ ಯಾವುದೇ ಸವಲತ್ತು ಪಡೆಯದೆ ಮನೆ ಮಂದಿ ಕಷ್ಟಪಟ್ಟು ದುಡಿದರೂ ಕಾರ್ಡ್ ಹೊಂದಿರುವ ರೈತನಿಗೆ ನ್ಯಾಯ ಸಿಗುತ್ತಿಲ್ಲ. ಸಮರ್ಪಕ ಬೆಲೆ ಸಿಗದೇ ಹಾಗೂ ಸಕಾಲದಲ್ಲಿ ಅನುಮತಿ ನೀಡದ ಕಾರಣ ಕಷ್ಟಪಟ್ಟು ಬೆಳೆದ ರೈತ ನಷ್ಟ ಅನುಭವಿಸುವಂತಹ ಸ್ಥಿತಿ ಇದೆ. ಈ ಸಂಬಂಧ ಸಂಸದರು ಗಮನ ಹರಿಸಬೇಕು ಎಂದರು.



ತಂಬಾಕು ಮಾರಾಟಕ್ಕೆ ಅವಕಾಶ ನೀಡುವಂತೆ ಮನವಿ ಸಲ್ಲಿಸಲಾಗುವುದು.

ಸಮಿತಿ ಅಧ್ಯಕ್ಷ ಗೋವಿಂದಯ್ಯ ಮಾತನಾಡಿ, ತಂಬಾಕು ಮಾರಾಟ ಮಾಡಲು ಹೋರಾಟ ಮಾಡಿ ಅನುಮತಿ ಪಡೆಯಬೇಕಾದ ಪರಿಸ್ಥಿತಿ ಇದೆ. ತಮ್ಮ ಸಮಸ್ಯೆಗೆ ಮುಕ್ತಿ ನೀಡಬೇಕಾದ ಜನಪ್ರತಿನಿಧಿಗಳು ಜವಾಬ್ದಾರಿ ಮರೆತಂತೆ ಕಾಣುತ್ತಿದೆ. ಕಳೆದ 2004ರಿಂದ ಹೋರಾಟ ಮಾಡುತ್ತಾ ಬಂದರೂ ರೈತ ವಿರೋಧಿ ಧೋರಣೆ ಅನುಸರಿಸಿ ರೈತರ ಹಿತರಕ್ಷಣೆ ಕಾಪಾಡುವಲ್ಲಿ ವಿಫಲವಾಗಿವೆ ಎಂದರು.

ತಂಬಾಕು ಮಾರಾಟ ಮಾಡಲು ತಕ್ಷಣ ಅನುಮತಿ ನೀಡುವುದು. ತಂಬಾಕು ಬೆಳೆಯುವ ಎಲ್ಲಾ ರೈತರಿಗೆ ಲೈಸೆನ್ಸ್ ಕೊಡಬೇಕು. ತಂಬಾಕಿಗೆ 350 ರೂ. ಬೆಂಬಲ ಬೆಲೆ ನಿಗದಿಪಡಿಸಬೇಕು. ಮಂಡಳಿಯಿಂದ ಸಿಗುವ ಎಲ್ಲಾ ಸವಲತ್ತುಗಳನ್ನು ಲೈಸೆನ್ಸ್ ಹೊಂದಿಲ್ಲದ ರೈತರಿಗೂ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೇ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಸಮಿತಿ ಉಪಾಧ್ಯಕ್ಷ ಷಣ್ಮುಖ, ಚಂದ್ರಶೇಖರ್, ಗೋವಿಂದಾಚಾರಿ, ಚಂದ್ರೇಗೌಡ, ಮುಖಂಡರಾದ ಶೇಖರ್, ರಾಮಚಂದ್ರನಾಯ್ಕ, ನಿಂಗಮ್ಮ, ಸಾವಿತ್ರಮ್ಮ ಇತರರಿದ್ದರು.

ರೈತರಿಗೆ ಕೃಷಿ ಮಹತ್ವ ತಿಳಿಸುತ್ತಿರುವ ಸುತ್ತೂರು ಮಠ

ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮೆಚ್ಚುಗೆ

ನಂಜನಗೂಡು, ಜ.30– ಕೃಷಿ ಲಾಭದಾಯಕವಲ್ಲ ಎಂದು ಕೃಷಿಯಿಂದ ವಿಮುಖವಾಗುತ್ತಿರುವ ಸಂದರ್ಭ ಸುತ್ತೂರು ಮಠ ಜಾತ್ರೆ ಮೂಲಕ ರೈತರಿಗೆ ವೈಜ್ಞಾನಿಕ ಆವಿಷ್ಕಾರಗಳನ್ನು ಪರಿಚಯಿಸುವ ಮೂಲಕ ಪ್ರೋತ್ಸಾಹ ನೀಡಿ ಕೃಷಿಯ ಮಹತ್ವ ತಿಳಿಸುತ್ತಿದ್ದಾರೆ ಎಂದು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ ಮತ್ತು ದನಗಳ ಜಾತ್ರೆ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದ ಜನಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿದ್ದು, ಕೃಷಿ ಭೂಮಿ ಹೆಚ್ಚಾಗುತ್ತಿಲ್ಲ. ಬದಲಾಗಿ ನಗರೀಕರಣ, ಉದ್ಯಮ ಬೆಳವಣಿಗೆ, ರಸ್ತೆ, ರೈಲ್ವೆ ಮಾರ್ಗಗಳಿಗಾಗಿ ಕೃಷಿ ಭೂಮಿ ಕಡಿಮೆಯಾಗುತ್ತಿದೆ. ಇರುವ ಭೂಮಿ ಎಲ್ಲವೂ ಕೃಷಿಗೆ ಯೋಗ್ಯವಾದುದಲ್ಲ. ಆದ್ದರಿಂದ ದೇಶ ಗಂಭೀರ ಸವಾಲನ್ನು ಎದುರಿಸುತ್ತಿದೆ. ದೇಶದ ಶೇ.50ರಷ್ಟು ಜನರು ಕೃಷಿ ಮತ್ತು ಕೃಷಿ ಸಂಬಂಧಿತ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ದೇಶದ ಜಿಡಿಪಿ ಪ್ರಮಾಣದಲ್ಲಿ ಅವರ ಪಾಲು 20ರಷ್ಟು ಮಾತ್ರ. ಆದರೆ ಶೇ.80ರಷ್ಟು ಪಾಲನ್ನು ಉಳಿಕೆ ಉದ್ಯಮಗಳ ಮೂಲಕ ನೀಡುತ್ತಿರುವುದರಿಂದಾಗಿ ಕೃಷಿ ಅವಲಂಬಿಸಿರುವ ರೈತರೂ ಕೃಷಿಯಿಂದ ವಿಮುಖರಾಗುತ್ತಿದ್ದು, ತಮ್ಮ ಮಕ್ಕಳನ್ನು ಇತರೆ ವೃತ್ತಿಗೆ ಕಳುಹಿಸುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.



ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮಾತನಾಡಿದರು.

ವಿಧಾನಪರಿಷತ್ ಸದಸ್ಯ ಚಿತ್ರದುರ್ಗ ಕೆ.ಎಸ್. ನವೀನ್ ಮಾತನಾಡಿ, ಕಳೆದ 20 ವರ್ಷಗಳಲ್ಲಿ ಕೃಷಿ ಅವಲಂಬಿಸಿರುವ ರೈತರ ಸಂಖ್ಯೆ ಗಣನೀಯವಾಗಿ ಇಳಿಮುಖವಾಗಿದ್ದು, ಕೃಷಿಕರ ಮಕ್ಕಳು ಸಣ್ಣಪುಟ್ಟ ಉದ್ಯೋಗವನ್ನರಸಿ ಮಹಾನಗರಗಳತ್ತ ವಲಸೆ ಹೋಗುತ್ತಿದ್ದಾರೆ. ಕೃಷಿಯನ್ನು ಅವಲಂಬಿಸಿರುವ ಜನರಿಗೆ ಸೂಕ್ತ ಬೆಂಬಲ ಮತ್ತು ನೆರವಿನ ಅವಶ್ಯಕತೆ ಇದ್ದು, ಈ ನಿಟ್ಟಿನಲ್ಲಿ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಕೃಷಿಗೆ ನೆರವಾಗುವಂತಹ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಉತ್ತಮ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕನಕಪುರ ದೇಗುಲ ಮಠದ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಗುರು ಸಿದ್ದೇಶ್ವರ ಬೃಹನ್ಮಠದ ಶ್ರೀಬಸವರಾಜ ಪಟ್ಟದಾರ್ಯ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಶಿವನಗೌಡ ಆರ್.ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ.ಧನಂಜಯ ಸರ್ಜಿ, ಸುರೇಶ್ ಸೇರಿದಂತೆ ಹಲವರಿದ್ದರು.

ಜಾಗೃತಿ ಅಭಿಯಾನ ಕಾರ್ಯಕ್ರಮ

ತಿ.ನರಸೀಪುರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬೇಟಿ ಬಚಾವೋ ಬೇಟಿ ಪಡಾವೋ ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು. ಈ ವೇಳೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸದ ಪ್ರಾಮುಖ್ಯತೆ, ಇಲಾಖೆಯಿಂದ ದೊರೆಯುವ ಸೌಲಭ್ಯಗಳು, ಭ್ರೂಣ ಹತ್ಯೆ, ಬಾಲ್ಯವಿವಾಹ, ಪೋಕ್ಸೋ ಕಾಯ್ದೆ ಬಗ್ಗೆ ತಿಳಿಸಲಾಯಿತು. ಈ ವೇಳೆ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶಾರದಾ, ಪ್ರಾಂಶುಪಾಲರಾದ ಉದಯಕುಮಾರ್, ಲಿಂಗರಾಜು ಪ್ರಾಧ್ಯಾಪಕರಾದ ಮಂಗಳಮೂರ್ತಿ, ಸಿಬ್ಬಂದಿ ವರ್ಗ ಹಾಜರಿದ್ದರು.



ಕೆಲ್ಲಹಳ್ಳಿ ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆಲ್ಲಹಳ್ಳಿ ಡೈರಿ ಅಧ್ಯಕ್ಷರಾಗಿ ಲೋಕೇಶ್, ಉಪಾಧ್ಯಕ್ಷರಾಗಿ ಅಂಕೇಗೌಡ ಆಯ್ಕೆಯಾದರು.

ಜಯಪುರ, ಜ.30– ಮೈಸೂರು ತಾಲೂಕು ಕೆಲ್ಲಹಳ್ಳಿ ಡೈರಿ ಅಧ್ಯಕ್ಷರಾಗಿ ಕೆ.ಲೋಕೇಶ್ ಮತ್ತು ಉಪಾಧ್ಯಕ್ಷರಾಗಿ ಅಂಕೇಗೌಡ ಅವಿರೋಧವಾಗಿ ಆಯ್ಕೆಯಾದರು.

ನಿರ್ದೇಶಕರ ಚುನಾವಣೆ ನಡೆದು ಲೋಕೇಶ್, ಅಂಕೇಗೌಡ, ರವಿಗೌಡ, ವೆಂಕಟೇ ಗೌಡ, ಶಿವರಾಮು, ಮರಿಗೌಡ, ಕೃಷ್ಣೇಗೌಡ, ರಾಜು, ಪುಟ್ಟನಿಂಗಮ್ಮ, ನಿಂಗಮ್ಮ ಸೇರಿದಂತೆ 10 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಗುರುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕೆ. ಲೋಕೇಶ್, ಉಪಾಧ್ಯಕ್ಷ ಸ್ಥಾನಕ್ಕೆ ಅಂಕೇಗೌಡ ಅವರನ್ನು ಹೊರತುಪಡಿಸಿ ಬೇರೆಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮಂಜು ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಗ್ರಾಪಂ ಸದಸ್ಯರು, ಹಿರಿಯ ಮುಖಂಡರ, ಡೈರಿ ಸಿಬ್ಬಂದಿ ಅಭಿನಂದಿಸಿದರು.


ಸಾಲ ಕೊಡಿಸಲು ಹಣ ವಸೂಲಿ ಮಾಡುತ್ತಿದ್ದವನ ಬಂಧನ

ಮಲ್ಕುಂಡಿ, ಜ.30– ಸಾಲ ಕೊಡಿಸುವುದಾಗಿ ಜನರಿಂದ ಹಣ ವಸೂಲಿ ಮಾಡುತ್ತಿದ್ದ ವ್ಯಕ್ತಿಯನ್ನು ಹುಲ್ಲಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.



ನಂಜನಗೂಡು ತಾಲೂಕಿನ ಮಾದನಹಳ್ಳಿ ಗ್ರಾಮದ ನಿವಾಸಿ ಎಂ.ಎಸ್.ಸುನೀಲ್ ಬಂಧಿತ ಆರೋಪಿ. ಈತ ಕಡಿಮೆ ಬಡ್ಡಿ ದರದಲ್ಲಿ ಸಾಲ ಕೊಡಿಸುವುದಾಗಿ ಹಲವು ಗ್ರಾಮಗಳಲ್ಲಿ ಜನರನ್ನು ನಂಬಿಸಿ ಹಣ ವಸೂಲಿ ಮಾಡಿ ಸಾಲ ಕೊಡಸದೇ ವಂಚನೆ ಮಾಡಿದ್ದ ಎನ್ನಲಾಗಿದೆ. ಈ ಸಂಬಂಧ ಹುಲ್ಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಕೈಗೊಂಡಿದ್ದ ಪೊಲೀಸರು ಸುನೀಲ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಾಗಲಾಂಬಿಕ ಉಕ್ಕಲಗೆರೆ ಗ್ರಾಪಂ ನೂತನ ಅಧ್ಯಕ್ಷೆ



ಉಕ್ಕಲಗೆರೆ ಗ್ರಾಪಂ ನೂತನ ಅಧ್ಯಕ್ಷೆಯಾಗಿ ನಾಗಲಾಂಬಿಕ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಜ.30– ತಾಲೂಕಿನ ಉಕ್ಕಲಗೆರೆ ಗ್ರಾಪಂ ನೂತನ ಅಧ್ಯಕ್ಷೆಯಾಗಿ ನಾಗಲಾಂಬಿಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಅಧ್ಯಕ್ಷೆ ಮಂಜುಳಾ ಅವರು ತಮ್ಮ 6 ತಿಂಗಳ ಅಧಿಕಾರಾವಧಿ ಪೂರೈಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ಗುರುವಾರ ನಡೆದ ಚುನಾವಣೆಯಲ್ಲಿ ನಾಗಲಾಂಬಿಕ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಿಡಿಪಿಓ ಗೋವಿಂದ ಪ್ರಕಟಿಸಿದರು.

ಚುನಾವಣಾ ವಿಶೇಷ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಶಿವಮ್ಮ, ಸದಸ್ಯರಾದ ಎಂ. ನಿಂಗರಾಜು, ಆರ್.ರವಿಶಂಕರ್, ಲತಾ, ಮಹದೇವಮ್ಮ, ಮಹದೇವ ಹಾಜರಿದ್ದು, ನೂತನ ಅಧ್ಯಕ್ಷರ ಆಯ್ಕೆಗೆ ಸಮ್ಮತಿ ಸೂಚಿಸಿದರೆ, ಪುಟ್ಟಮ್ಮ, ಶಿವಪ್ರಸಾದ್, ರಾಜಮ್ಮ, ಮಲ್ಲೇಶಪ್ಪ, ಎಂ.ಕುಮಾರ ಹಾಗೂ ಎಸ್.ಸಿದ್ದರಾಜು ಗೈರಾಗಿದ್ದರು. ನೂತನ ಅಧ್ಯಕ್ಷರ ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಪಂಚಾಯಿತಿ ಮುಂದೆ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಡಿಸಿಸಿ ಸದಸ್ಯ ಉಕ್ಕಲಗೆರೆ ಬಸವಣ್ಣ, ಗ್ರಾಪಂನಲ್ಲಿ ಅವಿರೋಧ ಆಯ್ಕೆ ಮಾಡುವ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಲಾಗಿದೆ. ಯಾವುದೇ ಗುಂಪುಗಾರಿಕೆಗೆ ಅವಕಾಶ ಮಾಡಿಕೊಡದೇ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕಳೆದ 4 ವರ್ಷಗಳಿಂದಲೂ ಗೊಂದಲವಿಲ್ಲದೇ ಅಧ್ಯಕ್ಷರ ಆಯ್ಕೆ ಮಾಡಿಕೊಂಡು ಬರಲಾಗುತ್ತಿದೆ. ನೂತನ ಅಧ್ಯಕ್ಷರಿಗೆ ಪಂಚಾಯಿತಿಯ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಅವರು ಉತ್ತಮ ಆಡಳಿತ ನಡೆಸಲು ಅವಕಾಶ ಮಾಡಿಕೊಡಬೇಕಿದೆ. ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ಅವರಿಂದ ಹೆಚ್ಚಿನ ಅನುದಾನ ತರುವ ಮೂಲಕ ಪಂಚಾಯಿತಿಯನ್ನು ಮಾದರಿ ಮಾಡುವ ನಿಟ್ಟಿನಲ್ಲಿ ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕಿದೆ ಎಂದು ಮನವಿ ಮಾಡಿದರು.

ನೂತನ ಅಧ್ಯಕ್ಷೆ ನಾಗಲಾಂಬಿಕ ಮಾತನಾಡಿ, ಗ್ರಾಮ ಪಂಚಾಯಿತಿಯ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು, ಬೀದಿದೀಪ, ರಸ್ತೆ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುವುದು ಎಂದರು. ಈ ವೇಳೆ ಪಿಡಿಓ ಕೃಷ್ಣಪ್ಪ, ಕಾರ್ಯದರ್ಶಿ ಮಹೇಶ್‌ಕುಮಾರ್, ಮುಖಂಡರಾದ ಮಂಜುನಾಥ್, ಷಡಕ್ಷರಿ, ಪ್ರಭುಸ್ವಾಮಿ, ನಾಗೇಂದ್ರ, ರಾಜು, ನಂಜುಂಡಯ್ಯ, ಶ್ರೀಕಂಠಸ್ವಾಮಿ, ಡೈರಿ ಮಹದೇವಸ್ವಾಮಿ, ನಾಗಣ್ಣ, ದೇವರಾಜು, ನಾಗೇಂದ್ರ, ಡೈರಿ ಪರಮೇಶ್, ಸಿದ್ದರಾಮ, ನಾಗೇಶ, ಶಿವಸ್ವಾಮಿ, ಗಾಡಿ ಶಿವಸ್ವಾಮಿ, ರೈತ ಮುಖಂಡ ಮಹದೇವಸ್ವಾಮಿ, ಪುಟ್ಟಮಾದ, ಅಂಗಡಿ ರವಿ, ಪಾಪಣ್ಣ, ಮಲ್ಲಿಕಾ, ಬಟಾಣಿ ನಾಗರಾಜು, ನಾಗೇಂದ್ರ, ಮಹದೇವಸ್ವಾಮಿ, ಶಿವಮಲ್ಲಪ್ಪ, ಪರಶಿವಮೂರ್ತಿ, ಮಠದ ಚನ್ನಬಸಪ್ಪ, ಜಿ.ಮಹದೇವಪ್ಪ, ನಿಂಗರಾಜು, ಕೃಷ್ಣಮೂರ್ತಿ, ಜಯಮ್ಮ, ಹಾಸಪ್ಪ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಸರಗೂರು ಪಟ್ಟಣ ಪಂಚಾಯಿತಿ ಸಾಮಾನ್ಯ ಸಭೆ

ನನ್ನ ಅನುದಾನದಲ್ಲಿ ಶವ ಸಾಗಿಸುವ ವಾಹನ ನೀಡುವೆ

ಶಾಸಕ ಅನಿಲ್



ಸರಗೂರು ಪಪಂನಲ್ಲಿ ಸಾಮಾನ್ಯ ಸಭೆ ನಡೆಯಿತು.

ಸರಗೂರು, ಜ.30– ಪಟ್ಟಣದ ಸಾರ್ವಜನಿಕರ ಅನುಕೂಲಕ್ಕಾಗಿ ನನ್ನ ಅನುದಾನದಲ್ಲಿ ಶವ ಸಾಗಿಸುವ ವಾಹನವನ್ನು ಪಟ್ಟಣ ಪಂಚಾಯಿತಿಗೆ ನೀಡುತ್ತೇನೆ ಎಂದು ಶಾಸಕ ಅನಿಲ್ ತಿಳಿಸಿದರು.


ಪಟ್ಟಣ ಪಂಚಾಯಿತಿಯಲ್ಲಿ ಅಧ್ಯಕ್ಷೆ ರಾಧಿಕಾ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಪಟ್ಟಣದ ಆಶ್ರಯ ಬಡಾವಣೆಯಲ್ಲಿ 74 ನಿವೇಶನಗಳಿದ್ದು, ಫಲಾನುಭವಿಗಳನ್ನು ಆಯ್ಕೆ ಮಾಡಬೇಕಿದೆ. ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಉಬ್ಬು ರಸ್ತೆಗಳಿದ್ದು, ವಾಹನ ಸವಾರರು ಬಿದ್ದು ಗಂಭೀರವಾಗಿ ಗಾಯಗೊಂಡಿದ್ದಾರೆ. ಹೀಗಾಗಿ ವಾಹನ ಸವಾರರಿಗೆ ಕಾಣುವಂತೆ ರಸ್ತೆ ಉಬ್ಬುಗಳಿಗೆ ಬಣ್ಣ ಬಳಿಯಬೇಕು. ಶಾಲಾ ಕಾಲೇಜುಗಳ ಎದುರು ಸೂಚನಾಫಲಕ ಅಳವಡಿಸಬೇಕು. ಪಪಂ ಬಜೆಟ್‌ನಲ್ಲಿ ಹಣ ಕಾಯ್ದಿರಿಸಿ ಕೆಲಸ ಮಾಡಿ ಎಂದು ಮುಖ್ಯಾಧಿ ಕಾರಿಗಳಿಗೆ ತಿಳಿಸಿದರು.

ಪಪಂ ಸದಸ್ಯರು ಪ್ರತಿನಿಧಿಸುವ ವಾರ್ಡ್‌ಗಳಲ್ಲಿ ಸದಸ್ಯರ ಗಮನಕ್ಕೆ ತರದೆ ಖಾತೆಗಳನ್ನು ಮಾಡುತ್ತಿರುವ ದೂರಿನ ಅನ್ವಯ ಸದಸ್ಯರ ಗಮನಕ್ಕೆ ತಿಳಿಸಿ ಖಾತೆಗಳನ್ನು ಮಾಡಿಕೊಡುವಂತೆ ಶಾಸಕರು ತಿಳಿಸಿದರು.

ಪಟ್ಟಣದ ಕೆಲವು ವಾರ್ಡ್‌ಗಳಲ್ಲಿ ಕೋತಿಗಳ ಹಾವಳಿ ಹೆಚ್ಚಾಗಿದ್ದು, ಅರಣ್ಯ ಇಲಾಖೆ ಅವರಿಗೆ ತಿಳಿಸಿ ಕೋತಿಗಳ ಹಿಡಿಸುವಂತೆ ತಿಳಿಸಿದರು. ಪಟ್ಟಣದ ಸರ್ಕಾರಿ ಜಾಗಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವಂತೆ ತಿಳಿಸಲಾಯಿತು. ಪಟ್ಟಣ ಪಂಚಾಯಿತಿಗೆ ಸೇರಿದ ಅಂಗಡಿ ಮಳಿಗೆಗಳು ಖಾಲಿ ಇದ್ದು ಅವುಗಳನ್ನು ಟೆಂಡರ್ ಕರೆಯುವಂತೆ ತೀರ್ಮಾನಿಸಲಾಯಿತು.

ಪಪಂ ಮುಖ್ಯಾಧಿಕಾರಿ ಎಸ್.ಕೆ. ಸಂತೋಷ್ ಕುಮಾರ್, ಮಾತನಾಡಿದರು. ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ವಿನಾಯಕ ಪ್ರಸಾದ್, ನೂರಾಳ ಸ್ವಾಮಿ, ಚಲುವಕೃಷ್ಣ ಶ್ರೀನಿವಾಸ್, ಹೇಮಾವತಿ, ಉಮಾ, ದಿವ್ಯಾ, ಚೈತ್ರಾ, ಚಂದ್ರಕಲಾ, ಸಿಬ್ಬಂದಿಗಳಾದ ರಾಮು, ಪಳನಿ, ಶಿವಕುಮಾರ್, ಅರ್ಜುನ, ವಾಟರ್ ನಾಗೇಶ್ ಹಾಜರಿದ್ದರು.

ಶ್ರೀನಿವಾಸನಾಯಕ ನಿಧನ



ಹೆಚ್.ಡಿ.ಕೋಟೆ, ಜ.30– ತಾಲೂಕಿನ ನೇರಳೆ ಗ್ರಾಮದ ನಿವಾಸಿ ಕೃಷ್ಣ ಅವರ ತಂದೆ ಶ್ರೀನಿವಾಸನಾಯಕ(93) ಗುರುವಾರ ನಿಧನರಾದರು. ಮೃತರು ಮೂವರು ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಶುಕ್ರವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅರಣ್ಯ ಹಕ್ಕು ಕಾಯ್ದೆಯ ಅರ್ಜಿಗಳ ಜಂಟಿ ಸರ್ವೆ ಮೂಲಕ ಶೀಘ್ರ ಇತ್ಯರ್ಥಕ್ಕೆ ಡಿಸಿ ಸೂಚನೆ

● 18 ಹಾಡಿಗಳ ಜನರ ಅರ್ಜಿಗಳ ವಿಲೇವಾರಿ ನನೆಗುದಿಗೆ ● ವಿವಿಧ ಇಲಾಖೆಗಳು ಸಮನ್ವಯದಿಂದ ಅರ್ಜಿ ಇತ್ಯರ್ಥಕ್ಕೆ ಸಲಹೆ

ಮೈಸೂರು ಜ.30(ಎಂಟಿವೈ)– ಮೈಸೂರು ಜಿಲ್ಲೆಯ ವಿವಿಧ ಹಾಡಿ ಜನರು ಸಲ್ಲಿಸಿರುವ ಅರಣ್ಯ ಹಕ್ಕು ಕಾಯ್ದೆಯ ಅರ್ಜಿಗಳನ್ನು ಜಂಟಿ ಸರ್ವೆ ಮಾಡಿ ಶೀಘ್ರ ಇತ್ಯರ್ಥಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪಿಎಂ ಜನ್ಮನ್ ಯೋಜನೆ ಹಾಗೂ ಅರಣ್ಯ ಹಕ್ಕು ಕಾಯ್ದೆ ಕುರಿತಂತೆ ಸಂಬಂಧಪಟ್ಟ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾಹಿತಿ ಕಲೆ ಹಾಕಿದ ಬಳಿಕ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ ತಾಲೂಕು ವ್ಯಾಪ್ತಿಯ 18 ಹಾಡಿಗಳ ಜನ ಅರಣ್ಯ ಹಕ್ಕು ಕಾಯ್ದೆಗಾಗಿ ಸಲ್ಲಿಸಿರುವ ಅರ್ಜಿಗಳು ಇಂದಿಗೂ ಗ್ರಾಮ ಅರಣ್ಯ ಸಮಿತಿಯ ಮುಂದೆ ಇದೆ. ಆ ಅರ್ಜಿಗಳನ್ನು ಶೀಘ್ರ ಇತ್ಯರ್ಥಪಡಿಸಲು ಕಂದಾಯ, ಸರ್ವೆ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ಸಮನ್ವಯತೆಯಿಂದ ಜಂಟಿ ಸರ್ವೆ ಕಾರ್ಯ ನಿರ್ವಹಿಸಲು ಮುಂದಾಗಬೇಕು. 18 ಹಾಡಿಗಳ ಜನ ಸಲ್ಲಿಸಿರುವ ಅರ್ಜಿಗಳು ಗ್ರಾಮ ಅರಣ್ಯ ಸಮಿತಿ ಮುಂದೆ ಇದ್ದು, ಪರಿಶೀಲಿಸಿ ಜಂಟಿ ಸರ್ವೆ ಮಾಡಿ ಮ್ಯಾಪ್ ಮಾಡಬೇಕು. ಗ್ರಾಮ ಅರಣ್ಯ ಸಮಿತಿಯಿಂದ ಶಿಫಾರಸ್ಸಾದ ಅರ್ಜಿಗಳನ್ನು ಉಪವಿಭಾಗಾಧಿಕಾರಿಗಳು ಮತ್ತೊಮ್ಮೆ ಪರಿಶೀಲಿಸಿ ಇತ್ಯರ್ಥ ಮಾಡುವಂತೆ ಸಲಹೆ ನೀಡಿದರು.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಪಿಎಂ ಜನ್ಮನ್ ಯೋಜನೆ ಹಾಗೂ ಅರಣ್ಯ ಹಕ್ಕು ಕಾಯ್ದೆ ಕುರಿತಂತೆ ಸಂಬಂಧಪಟ್ಟ ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಪಿಎಂ ಜನ್ಮನ್ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ 18 ಹಾಡಿಗಳಿಗೆ ವಿದ್ಯುತ್ ಸಂಪರ್ಕ ನೀಡಬೇಕಾಗಿದ್ದು, ಅದಕ್ಕೆ ಅರಣ್ಯ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

ಹಾಡಿ ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆಯ ಮೊಬೈಲ್ ಮೆಡಿಕಲ್ ಯೂನಿಟ್ ಕಾರ್ಯನಿರ್ವಹಿಸುವಂತೆ ಹೇಳಿದರು. ಶಿಕ್ಷಣ ಇಲಾಖೆಯಿಂದ ಮಂಜೂರಾಗಿರುವ ವಸತಿ ನಿಲಯದ ಕಾಮಗಾರಿ ಶೀಘ್ರವಾಗಿ ಪೂರ್ಣಗೊಳಿಸಿ, ವಸತಿ ನಿಲಯಗಳು ಕಾರ್ಯಾರಂಭ ಮಾಡಲು ಕ್ರಮ ಕೈಗೊಳ್ಳಬೇಕು. ಕುಡಿಯುವ ನೀರು ಹಾಗೂ ರಸ್ತೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲೆಗೆ ಈಗಾಗಲೇ 5 ಎಂಪಿಸಿ ಸೆಂಟರ್‌ಗಳು ಮಂಜೂರಾಗಿದ್ದು, ಇನ್ನು 23 ಎಂಪಿಸಿಗಳಿಗೆ ಅಂದಾಜು ಪಟ್ಟಿ ತಯಾರಾಗುತ್ತಿದೆ. ಅದಕ್ಕೆ ಅನುಮೋದನೆ ಪಡೆಯಲು ತ್ವರಿತ ಗತಿಯಲ್ಲಿ ಪ್ರಸ್ತಾವನೆ ಸಲ್ಲಿಸಬೇಕು. ವಿಡಿವಿಕೆ ಕೇಂದ್ರಗಳನ್ನು ನಿಗದಿತ ಅವಧಿಯೊಳಗೆ ಪ್ರಾರಂಭಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಜಿಪಂ. ಸಿಇಓ ಕೆಎಂ ಗಾಯತ್ರಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಸೀಮಾ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಎಂ.ಕೆ. ಮಲ್ಲೇಶ್, ಕಂದಾಯ ಇಲಾಖೆಯ ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಇಂದು ಲೆಕ್ಕಪತ್ರ ಇಲಾಖೆ ಅಪರ ನಿರ್ದೇಶಕ ಡಾ. ಸಿದ್ದರಾಜು ಅವರಿಗೆ ಬೀಳ್ಕೊಡುಗೆ



ಮೈಸೂರು, ಜ.30– ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಮೈಸೂರು ವಿಭಾಗದ ಕಚೇರಿಯಲ್ಲಿ ಅಪರ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದ ಡಾ.ಸಿದ್ದರಾಜು ಅವರು ಇಂದು (ಜ.30) ನಿವೃತ್ತರಾಗಿದ್ದು, ಅವರಿಗೆ ಬೀಳ್ಕೊಡುಗೆ ಸಮಾರಂಭವನ್ನು ಅಪರ ನಿರ್ದೇಶಕರ ಕಚೇರಿಯಲ್ಲಿ ನಾಳೆ (ಜ.31) ಮಧ್ಯಾಹ್ನ 3 ಗಂಟೆಗೆ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯದ ಜನತಾ ಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಡಾ. ರಾಮಲಿಂಗಯ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಗೀತ ವಿಶ್ವವಿದ್ಯಾನಿಲಯದ ಕುಲಸಚಿವ (ಮೌಲ್ಯಮಾಪನ) ಡಾ.ಎಂ.ಜಿ. ಮಂಜುನಾಥ್ ಅವರು ಭಾಗವಹಿಸುವರು. ದೇವರಾಜು, ಕರ್ನಾಟಕ ಇಂಜಿನಿಯರ್ ಸಂಘ ಬೆಂಗಳೂರು, ಡಾ.ಬಿ.ಕೆ.ಸುರೇಶ್, ಶಸ್ತ್ರಚಿಕಿತ್ಸಕರು ಮಂಡ್ಯ, ಸ್ವಾಮಿ ಮತ್ತು ಮಂಜುಳಾ ವಿಶ್ರಾಂತ ಉಪ ನಿರ್ದೇಶಕರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಇವರು ಹಾಜರಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಶೀಘ್ರದಲ್ಲೇ ಹಾಲಿನ ಪ್ರೋತ್ಸಾಹಧನ ಹೆಚ್ಚಳ: ಎಂಎಲ್‌ಸಿ ದಿನೇಶ್ ಗೂಳಿಗೌಡ

ಮಂಡ್ಯ ಹಾಲು ಒಕ್ಕೂಟದಲ್ಲಿ 11 ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಮನವಿ



ಮಂಡ್ಯ, ಜ.30–ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಶೀಘ್ರದಲ್ಲಿ ಹಾಲಿನ ಪ್ರೋತ್ಸಾಹ ಧನ ಹೆಚ್ಚಳಕ್ಕೆ ಮುಂದಾಗಿದ್ದು, ಇದಕ್ಕೆ ಸ್ವತಃ ಸಿಎಂ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ ಎಂದಿರುವ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಗಳಿಗಾಗಿ ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮನವಿ ಮಾಡಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಫೆ2 ರಂದು ಒಕ್ಕೂಟದ ಚುನಾವಣೆ ನಡೆಯಲಿದ್ದು, ಜಿಲ್ಲೆಯ 7 ತಾಲೂಕುಗಳಿಂದ 11 ಅಭ್ಯರ್ಥಿಗಳು ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದಾರೆ. ಅವರನ್ನು ಬೆಂಬಲಿಸಿ ಮಂಡ್ಯ ಹಾಲು ಒಕ್ಕೂಟದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಸಹಕರಿಸಬೇಕು ಎಂದು ಅವರು ಹಾಲು ಉತ್ಪಾದಕ ಸಹಕಾರ ಸಂಘಗಳ ಸದಸ್ಯರಲ್ಲಿ ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಸರ್ಕಾರ ಹೈನು ಗಾರರು, ರೈತ ಮಹಿಳೆಯರ ಪರವಾಗಿದೆ. ಹಿಂದೆ ಬಿಜೆಪಿ ಸರ್ಕಾರ ಹೈನುಗಾರರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿದ್ದ ತಲಾ 5 ರೂ. ಪ್ರೋತ್ಸಾಹ ಧನವನ್ನು 7 ತಿಂಗಳಿಂದ ನೀಡದೇ ಬಾಕಿ ಉಳಿಸಿಕೊಂಡಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ 2023–24 ನೇ ಸಾಲಿನಲ್ಲಿ 72.39 ಕೋಟಿ ರೂ. ರೈತರ ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡಿದೆ. 2024–25 ನೇ ಸಾಲಿನ 56.06 ಕೋಟಿ ರೂ.ಗಳನ್ನು ಶೀಘ್ರ ಬಿಡುಗಡೆ ಮಾಡಲಿದೆ ಎಂದು ದಿನೇಶ್ ಗೂಳಿಗೌಡ ಹೇಳಿದ್ದಾರೆ.

ಮಂಡ್ಯ ಹಾಲು ಒಕ್ಕೂಟವು ಪ್ರತಿ ಹತ್ತು ದಿನಗಳಿಗೊಮ್ಮೆ ಪ್ರತಿ ಲೀಟರ್‌ಗೆ 31.30 ರೂ. ರೈತರಿಗೆ ಪಾವತಿ ಮಾಡುತ್ತಿದೆ. ಅದರ ಮೇಲೆ ಪ್ರತಿ ಲೀಟರ್ ಹಾಲಿಗೆ 5 ರೂ. ಪ್ರೋತ್ಸಾಹ ಧನವನ್ನು ಸರ್ಕಾರ ಹೆಚ್ಚುವರಿಯಾಗಿ ಬಿಡುಗಡೆ ಮಾಡುತ್ತಿದೆ. ಸರ್ಕಾರ ನೀಡುವ ಪ್ರೋತ್ಸಾಹಧನವನ್ನು ಹೆಚ್ಚಳ ಮಾಡಲು ಸಿಎಂ ಸಿದ್ದರಾಮಯ್ಯ ಅವರು ಒಪ್ಪಿಕೊಂಡಿದ್ದು, ಶೀಘ್ರದಲ್ಲಿ ಘೋಷಿಸಲಿದ್ದಾರೆ. ಇದರಿಂದ ಹೈನುಗಾರರಿಗೆ ಇನ್ನಷ್ಟು ಅನುಕೂಲವಾಗಲಿದೆ ಎಂದಿದ್ದಾರೆ.

ಮಂಡ್ಯ ಜಿಲ್ಲೆಯಲ್ಲಿ 3 ಲಕ್ಷ 7 ಸಾವಿರ ಹಸು ಮತ್ತು ಎಮ್ಮೆಗಳಿವೆ. ಅವುಗಳಿಗೆ ಕಾಲ ಕಾಲಕ್ಕೆ ಲಸಿಕೆ, ಉಚಿತ, ಔಷಧ, ಆರೋಗ್ಯ ತಪಾಸಣೆಯನ್ನು ಸರ್ಕಾರ ಮಾಡಿಸುವ ಮೂಲಕ ಸರ್ಕಾರ ರೈತರಿಗೆ ನೆರವಾಗಿದೆ. ಜಿಲ್ಲೆಯಲ್ಲಿ ಒಟ್ಟು 1305 ಹಾಲು ಉತ್ಪಾದಕ ಪ್ರಾಥಮಿಕ ಸಹಕಾರ ಸಂಘಗಳಿದ್ದು, 817 ಸಂಘಗಳು ಸ್ವಂತ ಕಟ್ಟಡವನ್ನು ಹೊಂದಿವೆ. 23 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನೂ 83 ಸಂಘಗಳು ಸ್ವಂತ ನಿವೇಶನವನ್ನು ಹೊಂದಿವೆ. 488 ಸಂಘಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಸಂಘಗಳಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕೆ ಹಾಗೂ ನಿವೇಶನ ಖರೀದಿಗೆ ಸರ್ಕಾರ ನೆರವು ನೀಡಲು ಬದ್ಧವಾಗಿದೆ ಎಂದು ದಿನೇಶ ಗೂಳಿಗೌಡ ಭರವಸೆ ನೀಡಿದ ಅವರು, ಮಂಡ್ಯ ಜಿಲ್ಲೆಯ ಎಲ್ಲ ಕಾಂಗ್ರೆಸ್ ಶಾಸಕರು ಬೆಂಬಲಿಸಿ, ಮಂಡ್ಯ ಹಾಲು ಒಕ್ಕೂಟ ಕಾಂಗ್ರೆಸ್ ತೆಕ್ಕೆಗೆ ಬರಲು ಬೆಂಬಲ ನೀಡಲು ದಿನೇಶ್ ಗೂಳಿಗೌಡ ಕೋರಿದ್ದಾರೆ.

ಮಾಜಿ ಸಿಎಂ ಜಯಲಲಿತಾರ ಅಮೂಲ್ಯ ವಸ್ತುಗಳ ಫೆ.14, 15ಕ್ಕೆ ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರ

ವಿಶೇಷ ನ್ಯಾಯಾಲಯ ಆದೇಶ



ಬೆಂಗಳೂರು, ಜ.30– ತಮಿಳುನಾಡು ಮಾಜಿ ಮುಖ್ಯಮಂತ್ರಿ ಜೆ.ಜಯಲಲಿತಾ ಅವರ ವಿರುದ್ಧದ ಅಕ್ರಮ ಆಸ್ತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರಿಂದ ವಶಪಡಿಸಿಕೊಂಡಿರುವ ಮತ್ತು ಮುಟ್ಟುಗೋಲು ಹಾಕಿರುವ ಬೆಲೆಬಾಳುವ ವಸ್ತುಗಳು ಮತ್ತು ಆಸ್ತಿಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸಲು ಬೆಂಗಳೂರಿನ ವಿಶೇಷ ನ್ಯಾಯಾಲಯವು ಫೆಬ್ರವರಿ 14 ಮತ್ತು 15ರಂದು ಎರಡು ದಿನಗಳನ್ನು ನಿಗದಿಪಡಿಸಿದೆ.

ಸಿಬಿಐ/ಇಡಿ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಮೋಹನ್ ಎಚ್‌ಎ ನಿನ್ನೆ ಹೊರಡಿಸಿದ ಆದೇಶದಲ್ಲಿ, ಬೆಲೆಬಾಳುವ ವಸ್ತುಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸಲು ದಿನಾಂಕಗಳನ್ನು ನಿಗದಿಪಡಿಸಿದರು. ಜಯಲಲಿತಾ ಅವರ ಕಾನೂನುಬದ್ಧ ಉತ್ತರಾಧಿಕಾರಿಗಳಾದ ಜೆ.ದೀಪಕ್ ಮತ್ತು ಜೆ.ದೀಪ ಅವರು ತಮಗೆ ಸೇರಬೇಕೆಂದು ಹೇಳುವ ಜಯಲಲಿತಾ ಅವರ ಬೆಲೆಬಾಳುವ ವಸ್ತುಗಳು ಮತ್ತು ಆಸ್ತಿಗಳ ಮೇಲೆ ಹಕ್ಕು ಹೊಂದಿದ್ದಾರೆಂದು ಸಲ್ಲಿಸಿದ್ದ ಮೇಲ್ಮನವಿಯನ್ನು ಹೈಕೋರ್ಟ್ ಇತ್ತೀಚೆಗೆ ವಜಾಗೊಳಿಸಿತ್ತು.

ಜುಲೈ 12, 2023 ರಂದು ವಿಶೇಷ ನ್ಯಾಯಾಲಯವು ಹೊರಡಿಸಿದ್ದ ಆದೇಶವನ್ನು ಎತ್ತಿಹಿಡಿದು ಹೈಕೋರ್ಟ್ ಆದೇಶ ಹೊರಡಿಸಿತ್ತು, ವಿಶೇಷ ನ್ಯಾಯಾಲಯವು ದೀಪಾ ಮತ್ತು ದೀಪಕ್ ಅವರ ಮುಟ್ಟುಗೋಲು ಹಾಕಿಕೊಂಡಿರುವ ಆಸ್ತಿಗಳ ಬಿಡುಗಡೆಗಾಗಿ ಮಾಡಿಕೊಂಡಿದ್ದ ಕೋರಿಕೆಯನ್ನು ತಿರಸ್ಕರಿಸಿತ್ತು.

ಫೆಬ್ರವರಿ 19, 2024 ರಂದು ವಿಶೇಷ ನ್ಯಾಯಾಲಯವು, ಬೆಲೆಬಾಳುವ ವಸ್ತುಗಳು, ಚಿನ್ನ ಮತ್ತು ವಜ್ರಾಭರಣಗಳನ್ನು ಹಿಂತಿರುಗಿಸಲು ದಿನಾಂಕವನ್ನು ನಿಗದಿಪಡಿಸಿತು. ಮಾರ್ಚ್ 6 ಮತ್ತು 7, 2024 ರಂದು ಅವುಗಳನ್ನು ಸ್ವಾಧೀನಪಡಿಸಿಕೊಳ್ಳಲು ಅಧಿಕೃತ ಅಧಿಕಾರಿಗಳನ್ನು ನಿಯೋಜಿಸಲು ತಮಿಳುನಾಡು ಸರ್ಕಾರಕ್ಕೆ ನಿರ್ದೇಶನ ನೀಡಿತು. ಈ ಮಧ್ಯೆ, ದೀಪಾ ಮತ್ತು ದೀಪಕ್ ಇಬ್ಬರೂ ವಿಶೇಷ ನ್ಯಾಯಾಲಯದ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಆಸ್ತಿ ಮತ್ತು ಬೆಲೆಬಾಳುವ ವಸ್ತುಗಳನ್ನು ಹಸ್ತಾಂತರಿಸುವ ಪ್ರಕ್ರಿಯೆಗೆ ಒಂದು ದಿನ ಮೊದಲು, ಮಾರ್ಚ್ 5, 2024 ರಂದು ಹೈಕೋರ್ಟ್‌ನ ಏಕ ಸದಸ್ಯ ನ್ಯಾಯಾಧೀಶರು ವಿಶೇಷ ನ್ಯಾಯಾಲಯದ ಆದೇಶವನ್ನು ತಡೆಹಿಡಿದರು. ಈಗ, ಮೇಲ್ಮನವಿ ವಜಾಗೊಂಡ ಹಿನ್ನೆಲೆಯಲ್ಲಿ, ವಿಶೇಷ ನ್ಯಾಯಾಲಯವು ತಮಿಳುನಾಡು ಸರ್ಕಾರಕ್ಕೆ ಆಸ್ತಿಗಳನ್ನು ಹಸ್ತಾಂತರಿಸಲು ದಿನಾಂಕಗಳನ್ನು ನಿಗದಿಪಡಿಸಿದೆ.

ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿ ಮದ್ಯದಂಗಡಿ ವಿರೋಧಿಸಿ ನಿವಾಸಿಗಳಿಂದ ಪ್ರತಿಭಟನೆ

ಮೈಸೂರು, ಜ.30(ಜಿಎ)–ಮೈಸೂರಿನ ಎನ್.ಆರ್.ಮೊಹಲ್ಲಾದ ಮಾರುತಿ ಸರ್ಕಲ್‌ನಲ್ಲಿರುವ ಮಾರುತಿ ಕಾಂಪ್ಲೆಕ್ಸ್‌ನಲ್ಲಿ ಮದ್ಯದ ಅಂಗಡಿ ತೆರೆಯುತ್ತಿರುವುದನ್ನು ವಿರೋಧಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು.



ಮೈಸೂರಿನ ಎನ್.ಆರ್.ಮೊಹಲ್ಲಾದ ಮಾರುತಿ ಸರ್ಕಲ್‌ನಲ್ಲಿರುವ ಮಾರುತಿ ಕಾಂಪ್ಲೆಕ್ಸ್‌ನಲ್ಲಿ ಮದ್ಯದ ಅಂಗಡಿ ತೆರೆಯುತ್ತಿರುವುದನ್ನು ವಿರೋಧಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಎನ್.ಆರ್.ಮೊಹಲ್ಲಾದ ಮಾರುತಿ ಕಾಂಪ್ಲೆಕ್ಸ್‌ನಲ್ಲಿ ಮದ್ಯದ ಅಂಗಡಿ ತೆರೆಯಲು ಕೆಲವರು ಮುಂದಾಗಿದ್ದಾರೆ. ಮದ್ಯದಂಗಡಿ ತೆರೆಯಲು ಉದ್ದೇಶಿಸಿರುವ ಸ್ಥಳದಲ್ಲಿ ಹಾಲಿನ ಡೇರಿ ಇದೆ. ಹೆಂಗಸರು, ಮಕ್ಕಳು, ವಯಸ್ಸಾದವರು, ಹೆಣ್ಣು ಮಕ್ಕಳು ಹಾಲು ಖರೀದಿಗೆ ಬರುತ್ತಾರೆ. ಜತೆಗೆ ಪಕ್ಕದಲ್ಲೇ ವಾಸದ ಮನೆಗಳಿವೆ. ಹೆಣ್ಣುಮಕ್ಕಳು, ಮಹಿಳೆಯರು, ಮಕ್ಕಳು, ವಯಸ್ಸಾದ ಹೆಂಗಸರು ಓಡಾಡಲು ತೊಂದರೆಯಾಗುತ್ತದೆ. ಅಲ್ಲದೆ 100 ಮೀಟರ್ ಒಳಗಡೆ ರಾಮಮಂದಿರ ಕೂಡ ಇದೆ. ಪರಿಶಿಷ್ಟ ಜಾತಿ, ಪಂಗಡದವರು ವಾಸ ಮಾಡುವ ಸ್ಥಳದಿಂದ ಸುಮಾರು 500 ಮೀಟರ್ ಒಳಗೆ ಯಾವುದೇ ಮದ್ಯದಂಗಡಿ ತೆರೆಯದಂತೆ ನಿಯಮವಿದ್ದರೂ ಜಿಲ್ಲಾ ಡಳಿತ, ಅಬಕಾರಿ ಇಲಾಖೆ ಅದನ್ನು ಉಲ್ಲಂಘನೆ ಮಾಡಿದೆ. ಹೀಗಾಗಿ ಇಲ್ಲಿ ಮದ್ಯದ ಅಂಗಡಿ ತೆರೆಯಲು ಉದ್ದೇಶಿಸಿರುವುದು ಕಾನೂನುಬಾಹಿರ. ಯಾವುದೇ ಕಾರಣಕ್ಕೂ ಮದ್ಯದಂಗಡಿ ತೆರೆಯಬಾರದು ಎಂದು ಆಗ್ರಹಿಸಿದರು.

ಈ ಸ್ಥಳದಲ್ಲಿ ಮದ್ಯದ ಅಂಗಡಿ ತೆರೆಯಲು ಅನುಮತಿ ಕೊಟ್ಟರೆ ತೊಂದರೆಯಾಗುತ್ತದೆ. ನಮ್ಮ ಪ್ರತಿರೋಧ ವಿರೋಧಿಸಿ ಮದ್ಯದ ಅಂಗಡಿ ತೆರೆಯಲು ಅನುಮತಿ ನೀಡಿದರೆ ಮೊಹಲ್ಲಾ ನಿವಾಸಿಗಳು, ಮಹಿಳಾ ಸಂಘಟನೆಗಳು ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ರಮೇಶ್, ಮಧುವನ ಚಂದ್ರು, ಸಿದ್ದರಾಜು, ಮಹಿಳಾ ಸಂಘಟನೆಗಳ ಮಂಜುಳ, ಕಲ್ಯಾಣಮ್ಮ, ಮಹದೇವಮ್ಮ, ಗೀತ, ಕವಿತಾ, ರೂಪ, ಮಾನಸ, ಪ್ರಿಯ, ಮಮತ, ರಾಜೇಶ್ವರಿ, ಆಶಾರಾಣಿ, ನಂಜಮ್ಮ, ಕಮಲ, ಭಾಗ್ಯ, ಪ್ರೇಮ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕಥೆ ಕೇಳೋಣ ಬನ್ನಿ ಕಾರ್ಯಕ್ರಮ

ಮೈಸೂರು,ಜ.30–ಕಲಾ ಸುರುಚಿ ಸಂಸ್ಥೆ ಆಶ್ರಯದಲ್ಲಿ ಫೆ.1ರಂದು ಸಂಜೆ 4.30ರಿಂದ 5.30ರವರೆಗೆ ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಸುರುಚಿ ರಂಗ ಮನೆಯಲ್ಲಿ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯ ಕ್ರಮದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ಸದಸ್ಯೆ ಆರ್. ಸ್ನೇಹಾ ಮಕ್ಕಳಿಗೆ ಕಥೆ ಹೇಳಲಿದ್ದಾರೆ. ಹೆಚ್ಚಿನ ಮಾಹಿತಿಗೆ 9243581097, 9945943115 ಸಂಪರ್ಕಿಸಬಹುದು.

ಯಾರಿಂದಲೂ ಗಾಂಧಿ ತತ್ವ ಕೊಲ್ಲಲು ಸಾಧ್ಯವಿಲ್ಲ

ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ

ಮೈಸೂರು, ಜ.30(ಬಿಎಲ್‌ಯು)– ಗಾಂಧಿ ಹತ್ಯೆ ಮಾಡಿದ ನಾಥೂರಾಮ್ ಗೋಡ್ಸೆಗೆ ಹೇಗೆ ಗಾಂಧಿ ತತ್ವಗಳನ್ನು ಕೊಲ್ಲಲು ಸಾಧ್ಯವಾಗಲಿಲ್ಲವೋ ಹಾಗೆಯೇ, ಪ್ರಧಾನಿ ನರೇಂದ್ರ ಮೋದಿ ಅವರಿಗೂ ಗಾಂಧಿ ತತ್ವ ಕೊಲ್ಲಲು ಸಾಧ್ಯವಾಗುವುದಿಲ್ಲ ಎಂದು ಪ್ರಗತಿಪರ ಹೋರಾಟಗಾರ ಉಗ್ರನರಸಿಂಹೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ರಂಗಾಯಣದ ಆವರಣದಲ್ಲಿ ಜನಾಂದೋಲನಗಳ ಮಹಾಮೈತ್ರಿ, ಗಾಂಧಿ ವಿಚಾರ ಪರಿಷತ್ತು ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ ಜನವರಿ 30 ಕರಾಳ ಘಟನೆ ಕುರಿತಂತೆ ಸತ್ಯ, ನ್ಯಾಯ, ಸಹನೆ, ಶಾಂತಿ, ಸಹಬಾಳ್ವೆಯ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂಗಳ ಕೋಪಕ್ಕೆ ಗುರಿಯಾದ ಗಾಂಧಿ ಅವರನ್ನು ಬುದ್ಧಿ ಇಲ್ಲದ ಗೋಡ್ಸೆ ಹತ್ಯೆ ಮಾಡಿದ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸರಳ ಜೀವನ, ಉದಾತ್ತ ಚಿಂತನೆ ಗಾಂಧಿಯವರ ಬಹು ದೊಡ್ಡ ನಿಲುವಾಗಿತ್ತು. ಇದರ ಜೊತೆಗೆ ಪ್ರತಿಯೊಂದು ಜೀವಿಯು ಸಮಾನತೆ, ಸೌಹಾರ್ದತೆಯಿಂದ ಬದುಕಬೇಕೆಂಬ ಆಶಯವನ್ನು ತಮ್ಮ ಜೀವನದುದ್ದಕ್ಕೂ ಬಿತ್ತಿದ ಗಾಂಧಿ ಎಂದೆಂದಿಗೂ ಪ್ರಸ್ತುತರಾಗಿದ್ದಾರೆ ಎಂದು ಉಗ್ರನರಸಿಂಹೇಗೌಡ ಹೇಳಿದರು.

ಇತ್ತೀಚೆಗೆ ಗಾಂಧಿ ನೆನಪುಗಳು ಮರೆತು ಹೋದಂತೆ ಆಗಿದೆ. ಈ ಹಿನ್ನೆಲೆ ಮರೆಯಾಗಿ ಹೋಗುತ್ತಿರುವ ಗಾಂಧಿ ತತ್ವ ಹಾಗೂ ನೆನಪುಗಳನ್ನು ನಾವು ಬಿತ್ತಬೇಕು. ಜೊತೆಗೆ ಗಾಂಧಿ ತತ್ವಾದರ್ಶಗಳಿಗೆ ಮತ್ತಷ್ಟು ಜೀವ ಕೊಡಬೇಕು. ಈ ಮೂಲಕ ಭಾಷೆ, ಧರ್ಮದ ಜೊತೆಗೆ ಅಖಂಡವಾಗಿ ಬದುಕಲು ಗಾಂಧಿ ಹೊಂದಿದ್ದ ಕನಸು ನನಸು ಮಾಡಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ನ್ಯಾಯಾಲಯದ ಮುಂಭಾಗದ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದ ನಂತರ ವಿದ್ಯಾರ್ಥಿಗಳು ಪ್ರಸ್ತುತ ಸನ್ನಿವೇಶದ ಬಗ್ಗೆ ಘೋಷಣಾ ಫಲಕ ಹಿಡಿದು ಜನರಲ್ಲಿ ಜಾಗೃತಿ ಮೂಡಿಸಿದರು.

ಪ್ರಸಕ್ತ ಸನ್ನಿವೇಶದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ವಿಚಾರಗಳನ್ನು ಒಪ್ಪಿಕೊಂಡು ಒಂದಾಗಬೇಕು. ಈ ಮೂಲಕ ನಾವು ಕಿತ್ತಾಡುವುದನ್ನು ನಿಲ್ಲಿಸಿ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಉಗ್ರನರಸಿಂಹೇಗೌಡ ಹೇಳಿದರು.

ಈ ವೇಳೆ ಮಾತನಾಡಿದ ಸಂಪನ್ಮೂಲ ವ್ಯಕ್ತಿ ಬಿ.ಬಾಲಕೃಷ್ಣನ್, ಕಾಲಕ್ರಮೇಣ ಮಕ್ಕಳಲ್ಲಿ ಮೌಲ್ಯ ಕುಸಿಯುತ್ತಿದೆ. ಇದೇ ವೇಳೆ ಮಕ್ಕಳಿಗೆ ಮೌಲ್ಯವನ್ನು ಕಲಿಸುವುದು ಯಾರ ಜವಾಬ್ದಾರಿ ಎಂಬ ಪ್ರಶ್ನೆ ಕೂಡ ಕಾಡುತ್ತಿದೆ. ತಂದೆ ತಾಯಿ ಮಕ್ಕಳಿಗೆ ಮೌಲ್ಯ ಕಲಿಸಬೇಕಾ, ಶಿಕ್ಷಕರು ಕಲಿಸಬೇಕಾ ಅಥವಾ ಸಮಾಜ ಕಲಿಸಬೇಕಾ, ಇಲ್ಲವೆ ಮಕ್ಕಳೆ ಕಲಿಯಬೇಕಾ ಎಂಬ ಗೊಂದಲ ಕಾಡುತ್ತಿದೆ ಎಂದರು.

ಜನವರಿ 30 ಗಾಂಧಿ ಹುತಾತ್ಮರಾದ ದಿನವಾಗಿದ್ದು, ಅತ್ಯಂತ ದುಃಖದ ಘಳಿಗೆಯಾಗಿದೆ. ಜಾತಿ, ಧರ್ಮ, ಪಂಥ ಎಲ್ಲವನ್ನು ಬಿಟ್ಟು ನಾವೆಲ್ಲರೂ ಗಾಂಧಿ ತತ್ವಾದರ್ಶ ಅನುಸರಿಸಬೇಕು ಎಂದು ಹೇಳಿದರು.

ಇದಕ್ಕೂ ಮೊದಲು ಮೈಸೂರು ನ್ಯಾಯಾಲಯದ ಮುಂದಿನ ಗಾಂಧೀಜಿ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಇದೇ ವೇಳೆ ದೇಶ ಉಳಿಸಿ, ಸಂವಿಧಾನ ರಕ್ಷಿಸಿ ಹಾಗೂ ಗಾಂಧಿ ಕೊಂದವರಿಗೆ ಅವರ ತತ್ವ ಕೊಲ್ಲಲಾಗುವುದು ಎಂಬ ಘೋಷಣಾ ಫಲಕ ಹಿಡಿದ ಮಕ್ಕಳು ಜನರಲ್ಲಿ ಜಾಗೃತಿ ಮೂಡಿಸಿದರು. ನಂತರ ರಂಗಾಯಣದಲ್ಲಿ ಗಾಂಧಿ ಕುರಿತು ಹಲವು ಕಾಲೇಜಿನ ಮಕ್ಕಳು ನಾಟಕ ಪ್ರದರ್ಶಿಸಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಹೊಸಕೋಟೆ ಬಸವರಾಜು, ಸವಿತಾ, ಅಭಿರುಚಿ ಗಣೇಶ್, ಪ್ರೊ.ಕಾಳೇಗೌಡ ನಾಗವಾರ, ಸುಶೀಲಾ, ವರಹಳ್ಳಿ ಆನಂದ್, ನಗರ್ಲೆ ವಿಜಯ ಕುಮಾರ್, ಶಬೀರ್ ಮುಸ್ತಾಫಾ ವೇದಿಕೆಯಲ್ಲಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ಮದಗಜರಾಜ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರುದ್ರ ಗರುಡ ಪುರಾಣ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಫಾರೆಸ್ಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫಾರೆಸ್ಟ್ (ಕ)	5 ಪ್ರದರ್ಶನಗಳು
ರಾಜಕಮಲ್	
ದೇವ (ಹಿಂ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ಗಣ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ಕೈ ಫೋರ್ಸ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ರಾಜರಾಣಿ(ತ) + ಅಲ್ಲೇ ಡ್ರಾ ಅಲ್ಲೇ ಬಹುಮಾನ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರಾಯಲ್ (ಕ): ಬೆ.10.15ಕ್ಕೆ, ಮ.1.15ಕ್ಕೆ, ರಾ.7.15ಕ್ಕೆ, ಎಮರ್ಜೆನ್ಸಿ (ಹಿಂ): ಸಂ.4.15ಕ್ಕೆ, ಛೂ ಮಂತರ್ (ಕ): ರಾ.10.10ಕ್ಕೆ.
ಸ್ಕ್ರೀನ್ 2	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.10.35ಕ್ಕೆ, ಕುಟುಂಬಸ್ಥನ್ (ತ): ಮ.1ಕ್ಕೆ, ಸಂಕ್ರಾಂತಿಕಿ ವಸ್ತುನಾಂ (ತೆ): ಸಂ.4.05ಕ್ಕೆ, ಛೂ ಮಂತರ್ (ಕ): ರಾ.7.05ಕ್ಕೆ, ಟ್ವೈಲೈಟ್ ಆಫ್ ದಿ ವಾರಿಯರ್ಸ್ ವಾಲ್ಡ್ ಇನ್ (ಇಂ): ರಾ.10.10ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.10.25ಕ್ಕೆ, ಮಿ. ಹೌಸ್‌ಕೀಪಿಂಗ್ (ತ): ಮ.1.05ಕ್ಕೆ, ರಾಮಾಯಣ ದಿ ಲೆಜೆಂಡ್ ಆಫ್ ಪ್ರಿನ್ಸ್ ರಾಮ (ಹಿಂ): ಸಂ.4.10ಕ್ಕೆ, ರುದ್ರ ಗರುಡ ಪುರಾಣ (ಕ): ರಾ.7.05ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.20ಕ್ಕೆ, ಮ್ಯಾಕ್ಸ್ (ಕ): ಮ.1.20ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ, ರಾ.7ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಛೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಹಾತ್ಮಗಾಂಧೀಜಿ ಪುಣ್ಯಸ್ಮರಣೆ
ಗಾಂಧಿ ಕೊಂದವರನ್ನು ಬಿಜೆಪಿ, ಆರ್‌ಎಸ್‌ಎಸ್ ಹೊಗಳಿ ಪೂಜಿಸುತ್ತಿವೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯ
● ಮಹಾತ್ಮಗಾಂಧೀಜಿ ಪುಣ್ಯಸ್ಮರಣೆ



ಬೆಂಗಳೂರು, ಜ.30– ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 77ನೇ ಪುಣ್ಯಸ್ಮರಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ನಾಯಕರೊಂದಿಗೆ ವಿಧಾನ ಸೌಧದ ಆವರಣದಲ್ಲಿರುವ ಗಾಂಧಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕರು, ಗಣ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, ಜನವರಿ 30ರಂದು ಮಹಾತ್ಮ ಗಾಂಧಿಯವರ ಹತ್ಯೆಯಾಯಿತು ಮತ್ತು ಇದು ಅತ್ಯಂತ ದುಃಖದ ದಿನವಾಗಿದೆ. ಮಹಾತ್ಮ ಗಾಂಧಿ ಅವರು ದೇಶಕ್ಕಾಗಿ ಬಿಟ್ಟುಹೋದ ಸಿದ್ಧಾಂತಗಳನ್ನು ನಾವು ಗೌರವಿಸಬೇಕು ಎಂದರು.

ಮಹಾತ್ಮಗಾಂಧಿ ಯಾವಾಗಲೂ ಎಲ್ಲ ಧರ್ಮಗಳೊಂದಿಗೆ ಸಹಿಷ್ಣುತೆಯನ್ನು ಕಲಿಸಿದರು. ಮಹಾತ್ಮ ಗಾಂಧಿ ಮತ್ತು ಡಾ. ಬಿಆರ್ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಹೇಳಿರುವ ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ ನಮ್ಮದು. ಯಾವುದೇ ಜಾತಿ, ಧರ್ಮ ಉತ್ತಮ ಅಥವಾ ಕೀಳಲ್ಲ. ಆಧುನಿಕ ಭಾರತದಲ್ಲಿ ಈ ಮೌಲ್ಯಗಳನ್ನು ಸಂರಕ್ಷಿಸಬೇಕಿದೆ ಎಂದು ಹೇಳಿದರು.

ಕಳೆದ ಕೆಲವು ವರ್ಷಗಳಿಂದ ಸಂವಿಧಾನ ವಿರೋಧಿ, ಒಕ್ಕೂಟ ವ್ಯವಸ್ಥೆಯ ವಿರೋಧಿ ಶಕ್ತಿಗಳು ದೇಶವನ್ನು ಹಾಳು ಮಾಡಲು ಯತ್ನಿಸುತ್ತಿವೆ. ಮಹಾತ್ಮ ಗಾಂಧಿ ಮತ್ತು ಅಂಬೇಡ್ಕರ್ ವಿರೋಧಿಸಿದ ದೇಶದಲ್ಲಿ ಒಂದು ಧರ್ಮ, ಒಂದು ಭಾಷೆ ಮತ್ತು ಒಂದು ಸಂಸ್ಕೃತಿಯನ್ನು ಜಾರಿಗೆ ತರುವುದಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಹೇಳುತ್ತಿವೆ. ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಯನ್ನು ಉಳಿಸಬೇಕು. ಕಾಂಗ್ರೆಸ್ ಇದಕ್ಕಾಗಿ ಹೋರಾಡುತ್ತಿದೆ. ಇದು ಈ ಸಮಯದಲ್ಲಿ ಬಹಳ ಮುಖ್ಯ ಮತ್ತು ಅವಶ್ಯಕವಾಗಿದೆ ಎಂದು ತಿಳಿಸಿದರು. ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಹಾತ್ಮ ಗಾಂಧಿಯನ್ನು ಕೊಂದ ವ್ಯಕ್ತಿಯನ್ನು ಹೊಗಳಿ ಪೂಜಿಸುತ್ತಿವೆ. ಮಹಾತ್ಮ ಗಾಂಧೀಜಿ ಇಲ್ಲದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ ಇಂತಹ ಮಹಾನ್ ವ್ಯಕ್ತಿಯನ್ನು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಅಮಾನವೀಯವಾಗಿ ಕೊಂದಿದ್ದಾರೆ ಎಂದು ಟೀಕಿಸಿದರು.

ಐಚೆಟ್ಟೀರ ಬೆಳ್ಳಿಯಪ್ಪ ನಿಧನ

ಮೈಸೂರು, ಜ.30–ಮೈಸೂರಿನ ದಟ್ಟಗಳ್ಳಿ 3ನೇ ಹಂತದ ನಿವಾಸಿ ಐಚೆಟ್ಟೀರ ಬೆಳ್ಳಿಯಪ್ಪ (45) ಅವರು ನಿನ್ನೆ (ಜ.29) ಸಂಜೆ ನಿಧನರಾದರು. ಅವಿವಾಹಿತರಾದ ಇವರು ಸಹೋದರ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಇಂದು ಬೆಳಗ್ಗೆ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.